ಮಾನವಿಕ ಕರ್ಣಾಟಕ

ಸಂಪುಟ ೨೨, ಸಂಚಿಕೆ ೧

ಮೈಸೂರು ,
ಮೈಸೂರು ವಿಶ್ವವಿದ್ಯಾನಿಲಯ
೧೯೯೬

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೨೨ ; ಸಂಚಿಕೆ ೧

೮೨

ಜನವರಿ, ೧೯೯೭ ರ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೯೭

MANAVIKA KARNATAKA, Kannada Quarterly of the University of Mysore, Mysore-6, Volume 22, Number 1, January 1996 Edited by the committee :

ಪ್ರಕಾಶಕರು

ಡಾ. ಅರವಿಂದ ಮಾಲಗತ್ತಿ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦ ೦೦೬

ಮುದ್ರಕರು

ಡಾ. ಮೃತ್ಯುಂಜಯ ಕುಳೇನೂರ್
ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೫೭೦ ೦೦೬

ಪ್ರಕಾಶಕರ ಪ್ರಸ್ತಾವನೆ

ಪುಸ್ತಕ ದಿನತುಂಬಿ ಹುಟ್ಟಿದ ಮಗುವಿನಂತೆ, ಪತ್ರಿಕೆ ಭ್ರೂಣಾವಸ್ಥೆಯ ಶಿಶುಗಳಿಂದ ಕೂಡಿದ ಕೋಶ ವರ್ತಮಾನದ ಹೊಸ ವಿಷಯಗಳನ್ನು ಅಮೂರ್ತ ರೂಪದಿಂದ ಮೂರ್ತರೂಪಕ್ಕೆ ತರುವ ಕುಲುಮೆ. ಈ ಭ್ರೂಣಕೋಶದ ಮೂರ್ತ ರೂಪವೇ ಪುಸ್ತಕ. ಹೀಗಾಗಿ ಲೇಖನಗಳು ಪುಸ್ತಕವಾಗಲಾರವು. ಪುಸ್ತಕಗಳು ಲೇಖನವಾಗಲಾರವು. ಇದರರ್ಥ ಪುಸ್ತಕ ಶ್ರೇಷ್ಠ, ಲೇಖನ ಕಡಿಮೆ ಮೌಲ್ಯ ಉಳ್ಳದ್ದು ಎಂದಲ್ಲ. ಮೌಲ್ಯದ ದೃಷ್ಟಿಯಿಂದ ಕೆಲವೊಮ್ಮೆ ಕೃತಿಗಿಂತ ಲೇಖನವೇ ಶ್ರೇಷ್ಠವೆನಿಸಬಹುದು, ಇದಕ್ಕೆ ಪ್ರಮುಖ ಕಾರಣ ಕಾಲ, ಅಥವಾ ಸಾಂಸ್ಕೃತಿಕ ಸಂದರ್ಭ ಹೀಗಾಗಿ ಒಂದೊಂದು ಲೇಖನಗಳು ಹೊಸ ಪರಂಪರೆಗೆ ನಾಂದಿಯಾಗ ಬಹುದು. ಹಾಗೆ ನಾಂದಿ ಹಾಡಿದ ಲೇಖನಗಳನ್ನು ಇಂದು ಖಚಿತವಾಗಿ ಗುರುತಿಸು ತ್ತೇವೆ. ಇದರಿಂದಾಗಿಯೇ ಸಾಹಿತ್ಯ ಕ್ಷೇತ್ರದಲ್ಲಿ ಪತ್ರಿಕೆಗಳಿಗೆ ಹೆಚ್ಚಿನ ಮಹತ್ವವಿದೆ ಮತ್ತು ಅದರದ್ದೇ ಆದ ಸ್ಥಾನವೂ ಇದೆ.

ನಮ್ಮ ಬದುಕಿನ ಜೀವಂತಿಕೆಗೆ ಪತ್ರಿಕೆಯೇ ಒಂದು ಪ್ರತಿಮೆಯಾಗುತ್ತದೆ. ಈ ಜೀವಂತಿಕೆಯನ್ನು ಕಾಯ್ದುಕೊಳ್ಳುವುದು ತುಂಬ ಕಷ್ಟದ ಕೆಲಸ. ಇದು ಒಬ್ಬರಿಬ್ಬರಿಂದ ನಡೆಯುವಂತಹದ್ದಲ್ಲ. ಅದಕ್ಕೆ ಎಲ್ಲರೂ ಕೈಹಿಡಿದು ಕರೆದೊಯ್ಯ ಬೇಕಾಗುತ್ತದೆ. ಕೆಲಕಾಲದಿಂದ ಈ ಪತ್ರಿಕೆ ಮಂದಗತಿಯಿಂದ ನಡೆಯುತ್ತಿದೆ. ಅದರ ನಡಿಗೆಯನ್ನು ವರ್ತಮಾನದೊಂದಿಗೆ ಸರಿದೂಗಿಸಲು ತೆಗೆದುಕೊಳ್ಳುತ್ತಿರುವ ಕ್ರಮವನ್ನು ಈ ಹಿಂದಿನ ಸಂಚಿಕೆಯಲ್ಲಿಯೇ ಬರೆದಿದ್ದೆ, ಓದುಗರು ಸಹಕರಿಸ ಬೇಕೆಂದೂ ಕೋರಿದ್ದೆ.

ಈ ಪತ್ರಿಕೆ ಜೀವಂತಿಕೆಯಿಂದ ಕಾಲದೊಂದಿಗೆ ಹೆಜ್ಜೆ ಹಾಕಬೇಕಾದರೆ ಓದುಗರ ಸಹಕಾರ ಅಗತ್ಯ. ಅದಕ್ಕಾಗಿ ಲೇಖನಗಳನ್ನು ಕಳುಹಿಸಿರಿ, ಜೊತೆಗೆ ಚಂದಾ ಹಣ ಕಟ್ಟದಿದ್ದಲ್ಲಿ ಹಣವನ್ನು ಕಳುಹಿಸಿಕೊಡಿ. ನಿಮ್ಮ ನೆರೆಯ ಸಂಸ್ಥೆಗೆ ಸ್ನೇಹಿತರಿಗೆ ಚಂದಾದಾರರಾಗಲು ಒತ್ತಾಯ ತರಬೇಕೆಂದೂ ಕೋರುತ್ತೇನೆ. ಚಂದಾದಾರರ ಬಳಗ ಹೆಚ್ಚಿಗೆ ಇದ್ದಲ್ಲಿ ಪತ್ರಿಕೆಯನ್ನು ಸಕಾಲಿಕವಾಗಿ ತರಲು ಸಾಧ್ಯವಾಗುತ್ತದೆ.

ಈ ಹಿಂದಿನ ಸಂಚಿಕೆಯಲ್ಲಿ ಬರೆದಂತೆ ಸಂಪಾದಕ ಮಂಡಳಿಯ ಬದಲಾಗಿ ಅಧ್ಯಕ್ಷರು ಮತ್ತು ಸದಸ್ಯರನ್ನೊಳಗೊಂಡ ಸಮಿತಿ ಪದ್ಧತಿ ಜಾರಿಯಲ್ಲಿ ತರಲಾಗಿದೆ.

ಅಧ್ಯಕ್ಷರು : ಡಾ. ಜಿ. ಎಸ್. ಕುಂದರಗಿ
ಸದಸ್ಯರು : ಡಾ. ಓ. ಅನಂತರಾಮಯ್ಯ
ಶ್ರೀ ಕೃಷ್ಣೇಗೌಡ
ಡಾ. ಅಂಬಳಿಕೆ ಹಿರಿಯಣ್ಣ
ಡಾ. ಸೋಮಶೇಖರಗೌಡ
ಡಾ. ಎಚ್. ಎಮ್. ರಾಜಶೇಖರ

ಈ ಸಂಚಿಕೆಯಿಂದ, ಈ ಪತ್ರಿಕೆಯ ಹೊಣೆಗಾರಿಕೆಯನ್ನು ಈ ಸಮಿತಿ ನಿಭಾಯಿಸುತ್ತದೆ. ಜೊತೆಗೆ ಹೊಸ ಸಂಚಿಕೆಯನ್ನು ನಿಮ್ಮ ಕೈಯಲ್ಲಿಟ್ಟಿದೆ.

ಈ ಸಂಚಿಕೆಯ ಕಾರ್ಯವನ್ನು ನಿರ್ವಹಿಸಿಕೊಟ್ಟ ಸಮಿತಿಗೆ ಮತ್ತು ಹತ್ತಾರು ಕೆಲಸಗಳ ನಡುವೆಯೂ ನಮ್ಮ ತ್ರೈಮಾಸಿಕಗಳ ಮುದ್ರಣಕಾರ್ಯವನ್ನು ನಿರ್ವಹಿಸಿ ಕೊಡುತ್ತಿರುವ ಮುದ್ರಣಾಲಯದ ಅಚ್ಚುಕೂಟದ ನಿರ್ದೇಶಕರಾದ ಡಾ. ಮೃತ್ಯುಂಜಯ ಕುಳೇನೂರ್ ಮತ್ತು ತಾಂತ್ರಿಕ ಸಹಾಯಕರಾದ ಶ್ರೀ ಬಿ. ಎಸ್. ಸಿದ್ದೇಗೌಡ ಹಾಗೂ ಅಚ್ಚುಕೂಟದ ಸಿಬ್ಬಂದಿಗೆ ನಮ್ಮ ನೆನಹುಗಳು. ನಮ್ಮವರೇ ಆದ ಪ್ರಸಾರಾಂಗದ ಸಂಪಾದನಾ ಸಹಾಯಕರಾದ ಶ್ರೀಯುತ ಈರೇಗೌಡ ಮತ್ತು ಬಳಗದವರಿಗೂ ನಮನಗಳು ಸಲ್ಲುತ್ತವೆ.

ಈ ಸಂಚಿಕೆಗೆ ಲೇಖನಗಳನ್ನು ಕೊಟ್ಟು ಸಹಕರಿಸಿದ ಎಲ್ಲ ಲೇಖಕರಿಗೂ ತುಂಬು ಹೃದಯದಿಂದ ಸ್ಮರಿಸುವೆ.

ಡಾ. ಅರವಿಂದ ಮಾಲಗತ್ತಿ
ನಿರ್ದೇಶಕ

ವಿಷಯ ಸೂಚಿ

ಲೇಖಕರ ಸೂಚಿ

ಡಾ. ಜಿ. ಎನ್. ಕುಂದರಗಿ	ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ತತ್ತ್ವಶಾಸ್ತ್ರ ವಿಭಾಗ ಮಾನಸಗಂಗೋತ್ರಿ, ಮೈಸೂರು-೬
ಡಾ. ಎಂ. ಪಿ. ಮಹದೇವಯ್ಯ	ಪ್ರವಾಚಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಮಾನಸಗಂಗೋತ್ರಿ, ಮೈಸೂರು-೬
ಡಾ. ಕೆ. ಎಂ. ಮೈತ್ರಿ	ಸಂಶೋಧಕ ಅನ್ವೇಷಕರು ಸಮಾಜಶಾಸ್ತ್ರ ವಿಭಾಗ ಮಾನಸಗಂಗೋತ್ರಿ, ಮೈಸೂರು-೬
ಡಾ. ಸಿ. ಪಿ. ರಾಮಶೇಷ	೧೨೧೨, ಅಶೋಕವೃತ್ತ ಮೈಸೂರು-೪
ಡಾ. ಅಶೋಕ ಆಳ್ವ ಕೆ	ಅಸೋಸಿಯೇಟ್ ಫೋಕಲೋರಿಸ್ಟ್ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಎಂ. ಜಿ. ಎಂ. ಕಾಲೇಜು ಆವರಣ ಕುಂಜಿಬೆಟ್ಟು, ಉಡುಪಿ-೫೭೬೧೦೨
ಡಾ. ಎಂ. ರಾಮಚಂದ್ರ	ಮುಖ್ಯಸ್ಥರು ಹಾಗೂ ಹಿರಿಯ ಅಧ್ಯಾಪಕರು, ವಿಶ್ವವಿದ್ಯಾನಿಲಯ ಲಲಿತಕಲೆಗಳ ಕಾಲೇಜು ಮಾನಸಗಂಗೋತ್ರಿ, ಮೈಸೂರು-೬

ಜಿ. ಎನ್. ಕುಂದರಗಿ

ಬೇಂದ್ರೆಯವರ ಕಾವ್ಯದಲ್ಲಿ ತತ್ತ್ವಜ್ಞಾನ

(ಕುಂದರಗಿಯವರ ದೃಷ್ಟಿಯಲ್ಲಿ ತತ್ತ್ವಜ್ಞಾನ ಜಗತ್ತು, ಮನುಷ್ಯ ಮತ್ತು ಪರತತ್ತ್ವವನ್ನು ಚರ್ಚಿಸುವಂಥದು. ಧರ್ಮ ಮತ್ತು ಸಾಹಿತ್ಯದ ಲೇಖಕರಾದ ಅವರು ಸಾಹಿತ್ಯದಲ್ಲಿ ತತ್ತ್ವಜ್ಞಾನದ ಅಂಶಗಳನ್ನು ಶೋಧಿಸುವುದರಲ್ಲಿ ಆಸಕ್ತಿ ಹೊಂದಿದ್ದಾರೆ. ಈ ದಿಶೆಯಲ್ಲಿ ಅವರು ಬೇಂದ್ರೆಯವರ ಕಾವ್ಯದಲ್ಲಿ ಒಡಮೂಡಿರುವ ದರ್ಶನವನ್ನು, ಅರವಿಂದ ವಿಚಾರಧಾರೆಯನ್ನು ಈ ಲೇಖನದಲ್ಲಿ ಕೊಟ್ಟಿದ್ದಾರೆ—ಸಂ.)

ತತ್ತ್ವಜ್ಞಾನ ವೆಂದರೇನು ?

ನನ್ನ ದೃಷ್ಟಿಯಲ್ಲಿ ತತ್ತ್ವಜ್ಞಾನದ ಮುಖ್ಯ ಉದ್ದೇಶ ನಾವಿರುವ ಜಗತ್ತನ್ನು, ಅಸ್ತಿತ್ವವನ್ನು ಅಖಂಡವಾಗಿ ನೋಡುವುದು ಮತ್ತು ಮನುಷ್ಯನ ಸ್ವರೂಪ ಹಾಗೂ ಭವಿಷ್ಯವನ್ನು ಚರ್ಚಿಸುವುದು.

ಪಾಶ್ಚಾತ್ಯರಲ್ಲಿ ಸ್ಪಿನೋಝಾ, ಹೇಗಲ್, ಮಾರ್ಟಿನ್ ಗಾರ್ಟೆ— ಈ ಗುಂಪಿಗೆ ಸೇರುತ್ತಾರೆ. ಆಚಾರ್ಯತ್ರಯರಾದ ಶಂಕರ, ಮಧ್ವ ರಾಮಾನುಜರು ಜೀವ, ಜಗತ್ತು, ಪರಮಾತ್ಮನ ಸ್ವರೂಪ-ಸಂಬಂಧಗಳನ್ನು ಕುರಿತು ಚರ್ಚಿಸಿದ್ದಾರೆ. ಜೀವನದ ಸಮಗ್ರತೆಯನ್ನು, ಸಮನ್ವಯ ಪದ್ಧತಿಯನ್ನು ಅರವಿಂದರ ದಿವ್ಯಜೀವನ ಪ್ರತಿಪಾದಿಸುತ್ತದೆ.

ಕಾವ್ಯದಲ್ಲಿ ತತ್ತ್ವಜ್ಞಾನ

ಕವಿ ತತ್ತ್ವದರ್ಶಿಯಾಗಿರಬೇಕು. ಅನಿತ್ಯವಾದ ಜೀವನದಲ್ಲಿ ನಿತ್ಯ, ನೈತಿಕ, ದೈವೀತತ್ತ್ವವನ್ನು ಗ್ರೀಕ್ ನಾಟಕಕಾರರು ಕಂಡುಕೊಂಡರು. 'ಎಲ್ಲವೂ ನಿನ್ನದು....' ಎಂದು ಭಗವಂತನಲ್ಲಿ ಮೊರೆಯಿಟ್ಟ ಸ್ಯಾಮಸನ್ನನ ಚಿತ್ರವನ್ನು ಮಿಲ್ಟನ್ 'ಸಾಮ್ಸನ್ ಅಗೊನೈಸ್ಟಿಸ್' ದಲ್ಲಿ ಕೊಟ್ಟಿದ್ದಾನೆ.

ಪ್ರಸ್ತುತ ಲೇಖನದ ಉದ್ದೇಶ

ಮೇಲೆ ಸೂಚಿಸಿದ ಚೌಕಟ್ಟಿನಲ್ಲಿ ಶ್ರೀ ಬೇಂದ್ರೆಯವರ ಕಾವ್ಯದಲ್ಲಿ ಅಭಿವ್ಯಕ್ತ ವಾಗಿರುವ ತತ್ತ್ವಜ್ಞಾನವನ್ನು ವಿವರಿಸುವುದು ಈ ಲೇಖನದ ಉದ್ದೇಶ.

ಜಿಜ್ಞಾಸೆ

'ತತ್ತ್ವಜ್ಞಾನವು ಜಿಜ್ಞಾಸೆಯಲ್ಲಿ ಉದಿಸುತ್ತದೆ' (Philosophy arises in wonder) ಎಂದು ಪ್ಲೇಟೊ ನುಡಿದ. ಸೃಷ್ಟಿಯ ಗೂಢರಹಸ್ಯಗಳನ್ನು, ಜನನ-ಮರಣ ವೈಚಿತ್ರ್ಯವನ್ನು ತಿಳಿದುಕೊಳ್ಳಲು ಬೇಂದ್ರೆಯವರಿಗೆ ಕುತೂಹಲ. 'ಏನು?' 'ಏಕೆ'? 'ಎಲ್ಲಿ?' 'ಯಾರು'? ಎಂಬ ಪ್ರಶ್ನೆಗಳು ಅವರಲ್ಲಿ ಪುನಃ ಪುನಃ ಇಣಿಕಿಕೊಳ್ಳುತ್ತವೆ 'ಬಾನಿಗಾವುದು ಕಂಬ?' ಇಳೆಗಾವುದುಲಂಬ? ಎಂದು ಒಮ್ಮೆ ಕವಿ ಕೇಳಿದರೆ ಮತ್ತೊಮ್ಮೆ ಚಿರಂತನದ ಪಥಿಕನಾಗಿ ತಿರುಳ ಹುಡುಕುತ್ತ ಅವನು ಹೊರಡುತ್ತಾನೆ;

> 'ಚಿರಂತನದ ಪಥಿಕ ನಾನು
> ಹೊರಟೆ ತಿರುಳ ಹುಡುಕುತ'[1]

ಜ್ಞಾನಮೀಮಾಂಸೆ :

ಆದರ್ಶವಾದ, ಆತ್ಮವಾದವನ್ನು ಸಾರುವಂಥ ಶ್ರೀ ಅರವಿಂದರ ಮಾರ್ಗದಲ್ಲಿ ನಡೆಯುವ ಬೇಂದ್ರೆಯವರು ಬುದ್ಧಿಗಿಂತ ಅಂತರ್‌ಜ್ಞಾನಕ್ಕೆ, ಅನುಭೂತಿಗೆ (Intuition) ಪ್ರಾಶಸ್ತ್ಯವನ್ನು ಕೊಡುತ್ತಾರೆ.

> 'ಇದು ವಿಚಾರದ ಹಳ್ಳವನ್ನು ಒಳಹೊಕ್ಕಿಲ್ಲ
> ಅಂತರಿಕ್ಷದ ಪಕ್ಷಿ ಈಕ್ಷಿಸುತ್ತಿದೆ ಕ್ಷಿತಿಜ'[2]

ಆಧ್ಯಾತ್ಮಶಾಸ್ತ್ರ

ಆಧ್ಯಾತ್ಮಶಾಸ್ತ್ರ ಅಥವಾ Metaphysics ಪರತತ್ತ್ವ, ಜಗತ್ತು, ಜೀವ-ಇವು ಗಳನ್ನು ಕುರಿತು ಚರ್ಚಿಸುತ್ತದೆ.

(1) ಪರತತ್ತ್ವ ಅಥವಾ ಭಗವಂತ

ಬೇಂದ್ರೆಯವರಿಗೆ ಪರತತ್ವ ಅಥವಾ ಭಗವಂತನ ಅಸ್ತಿತ್ತ್ವದಲ್ಲಿ ಅಚಲವಾದ

---

1. ಅಂಬಿಕಾತನಯದತ್ತ: ಅರಳು—ಮರಳು ಸಾಹಿತ್ಯ ಅಕಾಡಮಿಯಿಂದ ಪುರಸ್ಕೃತ ಕೃತಿ (ಸಮಾಜ ಪುಸ್ತಕಾಲಯ, ಧಾರವಾಡ) ಪು. 168.

2. ಅಂಬಿಕಾತನಯದತ್ತ : ನಾಕುತಂತಿ ಜ್ಞಾನಪೀಠ ಪ್ರಶಸ್ತಿ ಗ್ರಂಥ (ಸಮಾಜ ಪುಸ್ತಕಾಲಯ—ಪ್ರತಿಭಾ ಗ್ರಂಥಮಾಲೆ, ಧಾರವಾಡ) ಪು. 28.

ಶ್ರದ್ಧೆಯಿದೆ. ಈ ಭಗವಂತ ಜಗತ್ತಿನ ತಂದೆ-ತಾಯಿಯಾಗಿ ತೋರುತ್ತಾನೆ. ನಿಸರ್ಗದಲ್ಲಿ, ಶ್ರಾವಣಮಾಸದಲ್ಲಿ, ವಸಂತಋತುವಿನಲ್ಲಿ ಕಾಣಿಸಿಕೊಳ್ಳುತ್ತಾನೆ.

ಶ್ರೀಕೃಷ್ಣ, ಶ್ರೀ ಅರವಿಂದರ ಜನ್ಮಮಾಸವಾದ ಶ್ರಾವಣವು ಜಗದೋದ್ಧಾರನನ್ನು ಹೀಗೆ ಸ್ಮರಿಸುತ್ತದೆ :

"ವಸುದೇವsa ದೇವಕಿ ಗರ್ಭಾ।ತುಂಬಿದ ತುಂಬಿ
ಸೆರೆ ಬಿಡಿಸಿ ಬಂದಿ।ವಿಶ್ವದ ತಂದಿ ..
....
ಘಮಾ ಘಮಾ ಗಂಧಾ
ಅರವಿಂದಾ ಬಂದಾ"

'ಇದು ಯುಗಾದಿ' ಕವನದಲ್ಲಿ ವಸಂತಮಾಸವು ಶಿವ-ಶಕ್ತಿ, ರಾಧಾ-ಕೃಷ್ಣರನ್ನು ಜೊತೆಯಾಗಿ ಇಂತು ನೆನೆಯುತ್ತದೆ :

"ಚೈತ್ರ ಗೌರಿ ಹೂತಳಣ್ಣಾ
ನೆನೆದು ಶಿವನ ನಾಮಾ
ಮಾಧವನ ರಾಸಲೀಲೆ-
ಗಿದೇ ಋತುವು ಹದವು"

ಸೋತ ಜನತೆಯ ದೇಹದಲ್ಲಿ ನವಚೇತನವನ್ನು ತುಂಬಲು ಸೃಷ್ಟಿಕರ್ತನು ಕಲಾಕುವರಿಯನ್ನು ಕಳುಹಿಸಿದಾಗ ಅವಳು ನವಚೇತನದ ತವರಾದ ಹೊಂಬಣ್ಣದ ರವಿಯನ್ನುದ್ದೇಶಿಸಿ :

"ಮೂಡಲ ಮನೆಯಾ ಮುತ್ತಿನ ನೀರಿನ
ಎರಕsaವ ಹೊಯ್ದಾ
ನುಣ್ಣ-ನ್ನೆರಕsaವ ಹೊಯ್ದಾ"[1]

ಎಂದು ಹಾಡುತ್ತ ಕೈ-ಮಾಡಿ ಕರೆಯುತ್ತಾಳೆ. ರವಿಕಿರಣಗಳ ರತ್ನದ ರಸದ ಕಾರಂಜಿಯು ಪುಟಪುಟನೆ ಪುಟಿಯುತ್ತದೆ. ಮಘಮಘಿಸುವ ಮುಗಿದ ಮೊಗ್ಗೆಗಳು ಪಟಪಟನೆ ಒಡೆಯುತ್ತವೆ. ಎಲೆಗಳ ಮೇಲೆ, ಹೂಗಳ ಒಳಗೆ ಅಮೃತದ ಬಿಂದುಗಳು ಕಾಣಿಕೊಳ್ಳುತ್ತವೆ. ತಂಗಾಳಿಯು ಕೈಯೊಳಗೆ ಹೂವಿನ ಎಸಳಿನ ಚವರಿ ಇರಿಸಿ, ಮೈಯೆಲ್ಲಾ ಗಂಧಾ ಸವರಿ ತುಂಬಿಯು ದಂಡನ್ನು ಹಾರಿಸಿ ಬಿಟ್ಟಿದ್ದಾರೆ. ಗಿಡಗಂಟಿಯ ಕೊರಳೊಳಗಿಂದ ಹಕ್ಕಿಗಳ ಹಾಡು ಹೊರಟಿದೆ. ಕ್ಷಣದಲ್ಲಿ ಕಾಡಿನ ನಾಡು ಗಂಧರ್ವರ ಸೀಮೆಯಾಗುತ್ತದೆ. ಬೇಂದ್ರೆಯವರ 'ಬೆಳಗು', ಶ್ರೀ ಬೆಟಗೇರಿ ಕೃಷ್ಣಶರ್ಮರು ಹೇಳಿರುವಂತೆ, "ಸದಾನಂದಿಯಾದ ಜಂಗಮನೊಬ್ಬ ಏಕನಾದದಲ್ಲಿ ಧ್ವನಿಗೂಡಿಸಿ ಹಾಡಿದ ಹಾಡು.........ಕವಿಯು ಹೃದಯದ ಹಣತೆಯಲ್ಲಿ ಬೆಳಗಿನ ಶಾಂತಿ ತೈಲವನ್ನೆರೆದು 'ಆತ್ಮಜ್ಯೋತಿ'ಯನ್ನು ಹೊತ್ತಿಸಿಕೊಂಡು ಅದರ ಪ್ರಭೆಯಲ್ಲಿ ಪರಮಾತ್ಮನ ಅಗಾಧಲೀಲೆಯನ್ನು ನೋಡುತ್ತ 'ಇದು ಬರಿ ಬೆಳಗಲ್ಲೊ ಅಣ್ಣಾ'

1. ಅಂಬಿಕಾತನಯದತ್ತ : ಗರಿ (ಕವನ ಸಂಕಲನ) ಸಮಾಜ ಪುಸ್ತಕಾಲಯ, ಧಾರವಾಡ ೫ನೇ ಆವೃತ್ತಿ, ೧೯೬೭, ಪು. ೧

ಎಂದು ನುಡಿದು ಓದುಗನನ್ನು ರಸ ಸಮಾಧಿಯಲ್ಲಿ ಮುಳುಗಿಸಿ ದೇವರ ದಿವ್ಯ ಮಂದಿರಕ್ಕೆ ಕರೆದೊಯ್ಯುತ್ತಾನೆ.

ವಿವೇಕಾನಂದರ ಚಾರಿತ್ರ್ಯ ಸಾಕ್ಷಾತ್ಕಾರದಿಂದ 'ಶ್ರೀ ವಿವೇಕಾನಂದ ಶಿಖರ–ಪ್ರಗಾಥಾ' ಹೊರಬಂದಿದೆ. ಸರಸ್ವತಿ, ಲಕ್ಷ್ಮೀ, ಪಾರ್ವತಿಯರ ಸತ್ತ್ವಗಳೇ ಮುಪ್ಪುರಿಗೊಂಡ ಶಕ್ತಿ ಗಾಯತ್ರಿ. ನನ್ನಲ್ಲಿ "ನಾನು" ಎಂದು ಹೇಳಿಕೊಳ್ಳುವ ತತ್ತ್ವ ನನ್ನಿಂದ ಭಿನ್ನವಾಗಿ "ನೀನು" ಎಂದು ಹೇಳಿಸಿಕೊಳ್ಳುವ ತತ್ತ್ವ ಇವೆರಡರಲ್ಲಿಯೂ "ಸ್ವಯಂ" ಆಗಿರುವ ಆತ್ಮ "ಆನು" ಎಂಬ ತತ್ತ್ವ, ಹಾಗೂ ಎಲ್ಲವನ್ನೂ ವ್ಯಾಪಿಸಿ ತಾನೇ ತಾನಾಗಿರುವ "ಪರಂ" ಎಂಬ ತತ್ತ್ವ ಇವು ನಾಲ್ಕು ತತ್ತ್ವಗಳು ನಾಕುತಂತಿಯ ಕಾವ್ಯಧ್ವನಿಗಳಾಗಿವೆ.

(2) ಜಗತ್ತು

ಜಗತ್ತಿನ ಆದಿತತ್ತ್ವ ಸತ್. ಅದು ಶೂನ್ಯವಲ್ಲ; ಅಸತ್ ಅಲ್ಲ.

"'ಶೂನ್ಯದಲ್ಲಿ ಲೋಕೋದಯಂ
ಶೂನ್ಯದಲ್ಲಿ ಲೋಕಲಯು'
ಬುದ್ಧಿಶೂನ್ಯ ಮೊಳಗಿದ
ಇದ್ದ ಹಾಗೆ ಮುಳುಗಿದ !"[1]

'ಪಂಚ ಮಹಾಭೂತಗಳಿಂದ, ತ್ರಿವೃತ್–ಕರಣ–ಪಂಚೀಕರಣ ಸಂಯೋಗದಿಂದ ಸೃಷ್ಟಿಯ ಉತ್ಪತ್ತಿಯಾಯಿತು' ಇದು ವೇದವಾಣಿ. ಈ ಧ್ವನಿಯ ಕೆಲವು ಮಾತುಗಳನ್ನು 'ಅಣು–ಮಹತ್' ಕವನದ ಸಾಲುಗಳಲ್ಲಿ ನೋಡಬಹುದು:

"ದೇವ ತೇಜದ ನೀರು
ನಾರಾಯಣನ ಊರು
ಊರ್ವಶಿಯ ಬಸಿರಿನಲ್ಲಿ ಮಿತ್ರ ವರುಣ
ಆ ವಶಿಷ್ಠನು ಮತ್ತೆ ಆ ಅಗಸ್ತ್ಯನ ಉದಯ
ಎಂಟು ವಸುಗಳ ಗಂಟು
ಘನಗೊಂಡಿತು.
ಒಂದೆ ಇಪ್ಪತ್ತೇಳು
ಮುಂದೆ ಮೂವತ್ತೇಳು
....
ನೂರು ನೂರರೇಳತ್ತು ಸಾವಿರದ ಊರು"[2]

---

1. ಅಂಬಿಕಾತನಯದತ್ತ : ನಾಕುತಂತಿ 'ಅಣು ಮಹತ್' (ಪ್ರತಿಭಾ ಗ್ರಂಥಮಾಲೆ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ–೧) 1964, ಪು. 12–15.

2. ಅದೇ.,

ಪ್ರಪಂಚದ ಓಟವನ್ನು ಕಂಡ ಕವಿ ದಿಕ್ಕು ತಿಳಿಯದವನಾಗಿ :

> ನೋಡ್ ನೋಡ್ತs ದಿನಮಾನಾ ಆಡಾಡ್ತs ಆಯುಷ್ಯ
> ನಡದ್ಯದ ನಡದ್ಯದ
> ಕಾಣದ ಕಡಲ್ಹಾದಿ ಹಿಡಿದ್ಯದ "[1]

ಎಂದು ಉದ್ಗಾರ ತೆಗೆಯುತ್ತಾನೆ ಆಯುರ್ಮರ್ಯಾದೆಯ ಚಿಂತೆ ಬಂದು ಬಾಳಿನ ನಶ್ವರತೆಯ ಕಲ್ಪನೆ ಬಂದಾಗ ಕವಿ ನಿರಾಶೆಯಿಂದ ಹೀಗೆ :

> ಈಗ ಇತ್ತು, ಈಗಿಲ್ಲ. ಇದರ ಪರಿ ಯಾರಿಗೇನು ಗೊತ್ತು ?
> ....
> ಇಂದೆ ಬೆಳಗು ಅರಳಿರುವ ಹೂವ ಅಕೊ ಸಂಜೆ ಹೊತ್ತಿಗಿಲ್ಲ
> ರಾಮ ರಾವಣರು, ಕೃಷ್ಣ–ಕಂಸರೂ ಕೊನೆಗೆ ಹೋದರಲ್ಲ"

ವಿಚಾರಿಸಿ 'ಸಿಗು ಬದುಕಲ್ಲೆಂದು ಬಗೆದೇನೇ' ಎಂದು ನಿಟ್ಟುಸಿರು ಬಿಡುತ್ತಾನೆ.

ಕಾಲಪಕ್ಷಿಯ ರೆಕ್ಕೆ ಹೊಡೆತಕ್ಕೆ ಮಾನವನ ವಿಶ್ವದಲ್ಲಾಗುವ ವೈಚಿತ್ರ್ಯದ ವಿಸ್ಮಯವನ್ನು ಕವಿ ಹೀಗೆ ರೇಖಿಸಿದ್ದಾನೆ :

> "ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
> ಮಂಡಲ–ಗಿಂಡಲಗಳ ಗಡ ಮುಕ್ಕಿ
> ತೇಲಿಸಿ ಮುಳುಗಿಸಿ ಖಂಡ–ಖಂಡಗಳ
> ಸಾರ್ವಭೌಮರಾ ನೆತ್ತಿಯ ಕುಕ್ಕಿ
> ಹಕ್ಕಿ ಹಾರುತಿದೆ ನೋಡಿದಿರಾ ?"[2]

ಆದರೂ ಕವಿ 'ನಿದ್ದೆಗೊಮ್ಮೆ ನಿತ್ಯ ಮರಣ, ಎದ್ದ ಸಲ ನವೀನ ಜನನ, ನಮಗೆ ಏಕೆ ಬಾರದೋ ?[3] ಎಂಬ ಆಶಯವನ್ನು ತಳೆಯುತ್ತಾನೆ.

ಕವಿ ಆಶಾವಾದಿ. ಆತನ ದೃಷ್ಟಿಯಲ್ಲಿ ಈ ಜಗತ್ತು ಸತ್ಯವಾದುದು. ಅದು ಮಿಥ್ಯೆಯಲ್ಲ. 'ಈ ಜಗ, ಅಪ್ಪಾ, ಅಮ್ಮನ ಮಗ' 'ಲೋಕವೇ ಅನನ್ಯವು', 'ವಿಶ್ವಂ ಆರ್ಯಂ ಕೃಣ್ವನ್', 'ನಾವು ಅಮೃತ ಪುತ್ರರು', ಈ ಗ್ಲೋಬು 'ರಾಸದ ಲೀಲೆ', ಈ 'ಭೂಮಂಡಲ ದೇವರ ಮನೆ', ಇಲ್ಲೆಲ್ಲ ಆಶಾವಾದದ ನೆಲೆ ಇದೆ.

ಪ್ರಪಂಚದಲ್ಲಿ ಯಾವುದೂ ತ್ಯಾಜ್ಯವಲ್ಲ. ಇಂದ್ರಿಯಸುಖ ನಿಂದನೀಯವಲ್ಲ. ಅದೇ ಸರ್ವಸ್ವವೂ ಅಲ್ಲ—ಇದು ಬೇಂದ್ರೆಯವರ ಖಚಿತ ತಿಳುವಳಿಕೆ.

ಕವಿ, ವೇದಾಂತಿಗೆ ಹಾಕುವ ಪ್ರಶ್ನೆಯನ್ನು ನೋಡಿ : 'ಎಲೈ ವೇದಾಂತಿಯೆ! ನನ್ನ ಆನಂದ-ಪ್ರೀತಿಗಳನ್ನು ನೋಡಿ ನಗಬೇಡ ಮೈಯು ಮಾಂಸದ ಮುದ್ದೆ, ನಾಚಿಕೆಯು ರಕ್ತದ ಹರಿದಾಟದ ಒಂದವಸ್ಥೆ, ಚುಂಬನವು ಒಂದು ಅರಳು–ಮರಳು

1. ಅಂಬಿಕಾತನಯದತ್ತ : ಗರಿ (ಕವನ ಸಂಕಲನ) 'ನನ್ನ ಕಿನ್ನರಿ' ಪು. 100 (ಸಮಾಜ ಪುಸ್ತಕಾಲಯ, ಧಾರವಾಡ) ೫ನೇ ಆವೃತ್ತಿ, 1966

2. ಅದೇ, 'ಹಕ್ಕಿ ಹಾರುತಿದೆ ನೋಡಿದಿರಾ', ಪು. 56

3. ಅದೇ, 'ಯುಗಾದಿ' ಪು. 118

ಮಾನವನ ಚಿನ್ನಾಟ. ಸಂತತಿಯೊಂದು ಪ್ರಕೃತಿ ಧರ್ಮ, ಅಂತಃಕರಣ ಮನಸ್ಸಿನ ಒಂದು ಹೊಯ್ದಾಟದ ಪರಿ ಎಂಬುದೆಲ್ಲ ನನಗೆ ಗೊತ್ತಿಲ್ಲವೇ ?'

ರಸಿಕತೆಯ ಜೀವಾಳ ರಸ. ಕಾವ್ಯದ ಆತ್ಮ ರಸ. ಜೀವಾತ್ಮ ರಸಮಯ ಸೃಷ್ಟಿಯೂ ರಸಮಯ. ಅವೆರಡರ ಸಾಮರಸ್ಯೋದ್ಭವ ರಸವೇ ಬ್ರಹ್ಮ.

"ಬ್ರಹ್ಮವಿತ್ ಪರಮಾಪ್ನೋತಿ ಶೋಕಂ ತರತಿ ಚಾತ್ಮವತ್
ರಸೋ ಬ್ರಹ್ಮ ರಸಂ ಲಬ್ಧ್ವಾನಂದೀ ಭವತಿ ನಾನ್ಯತಾ"

ಎಂಬುದು ಪಂಚದರ್ಶಿಯ ಸೂತ್ರ.

ತತ್ತ್ವಶಾಸ್ತ್ರದಲ್ಲಿ ಅಂತಿಮ ತತ್ತ್ವ ಏಕವೋ, ಅನೇಕವೊ? ಎಂದು ಚರ್ಚಿಸುವದುಂಟು. ಬೇಜಾರು ಹುಟ್ಟಿಸುವ ಏಕತ್ತ್ವದ ಏಕತಾನವನ್ನು ಬೇಂದ್ರೆಯವರು ಒಪ್ಪುವದಿಲ್ಲ. ಏಕತ್ತ್ವದ ಬೇರಿಲ್ಲದ ಅನೇಕತೆಯನ್ನೂ ಅವರು ಒಪ್ಪುವದಿಲ್ಲ.

"ನಿನಗೆ ನನಗೆ ಒಂದೆ ಆದಿ–ಒಂದೆ ಹಾದಿ
ಮಂಗದ ಮಧ್ಯ ಬಿಂದು ಒಂದು'[1]

(3) ಜೀವಿ

ಜಗತ್ತಿನಂತೆ ಜೀವಿಯೂ ಭಗವಂತನ ಮಗ. ಚೈತನ್ಯ ಪುರುಷನು. ದೇಹ ಧರಿಸಿ ದೇಹದ ಮೂಲಕ ನೋಡುತ್ತಾನೆ, ಕೇಳುತ್ತಾನೆ.

'ಈ ಜಗ, ಅಪ್ಪಾ, ಅಮ್ಮನ ಮಗ
ಅಮ್ಮನೊಳಗ ಅಪ್ಪನ ಮೊಗ
ಅಪ್ಪನ ಕತ್ತಿಗೆ ಅಮ್ಮನ ನೊಗ
ನಾ ಅವರ ಕಂದ
ಶ್ರೀ ಗುರುದತ್ತ, ಅಂದ'[2]

ಆದರೆ ಅಜ್ಞಾನದ ಮೂಲಕ ಜೀವಿ ಕ್ಲೇಶಕ್ಕೆ ಗುರಿಯಾಗಿದ್ದಾನೆ. ವೇದನೆಯಿಂದ ಬಳಲುತ್ತಿದ್ದಾನೆ :

'ಇದು ಸ್ಪರ್ಶರೋಗ, ಹೋ ಸಂಸರ್ಗಜನ್ಯ ಇದು,
... ...
ಎದೆಯ ಡವ
ಡವ ಡಮರು ತಿಮಿರಾಂಧಕಾರ ಘನವಿಷ ತಿಮಿರು,
....
ಅಗಿದ ಅಗಿದಲ್ಲಿ ವೇತಾಳ–ಅಪಾಯ
ದಿಗ್ಗೇಡಿ ನಾನಂಧ.... ...'[3]

1. ನಾಕುತಂತಿ : 'ಇದು ಯುಗಾದಿ' ಪು. 59–60
2. ಅಂಬಿಕಾತನಯದತ್ತ : 'ನಾಕುತಂತಿ' 1964, ಪು. 10
3. ಅದೇ 'ನಟರಾಜನಿಗೆ' ಪು. 30

ಅಜ್ಞಾನ ಹರಿಯಬೇಕಾದರೆ ಅಹಂಕಾರ ನಶಿಸಬೇಕು. ಸಾಕ್ಷಿಕತೆ ಮೂಡಬೇಕು. ಸುಪ್ರಮಾನಸ ಸೃಷ್ಟಿಯರಳಬೇಕು.

"ದಾಸ ಪುರಂದರ ವಿಠ್ಠಲನೊಡೆಯಾ
ಅಹಂಕಾರವಿದೆ ಕೊಡು ಬಿಡುಗಡೆಯಾ'[1]

'ಪ್ರೇಕ್ಷಕನಲಿ ಸಾಕ್ಷಿಕತೆಯು ಸಪ್ಪಪಿಂಡವಾಗಲಿ'[2]
'ಮನದಿಂದಾ ಸುಪ್ರ ಮನಕs
ಉನ್ಮನೀ ಸೋಪಾನಾ'[3]

ಕಾಡಿ ಗೆಲ್ಲುವ ಹಾದಿ ಸರಿಯಲ್ಲ. ಮುಕ್ತಭಕ್ತಿಯೇ ಯೋಗ್ಯ.

ಇದು ಯುಗಾದಿ
ಆಗಿರು ಸಂವಾದಿ
ಏಕೆ ವಾದ ಬೀದಿ ?
ಸಾದಿ ನಮ್ಮ ಹಾದಿ ತಮ್ಮಾ
ಯಾಕೆ ಕೆಡುವೆ ಕಾದಿ ?[4]
'ಹೊತ್ತೊತ್ತಿಗೆ ಭಕ್ತಿ
ಯುಕ್ತಿ ಹೊಳಿಸೋ'[5]

ಚೈತನ್ಯದ ಪೂಜೆಗೆ ಸೌಜನ್ಯವೆಂಬುದು ಹೂವು. ಸಾಮರ್ಥ್ಯವೆಂಬುದು ಬಿಲಪತ್ರಿ. ಸತ್ಯವೆಂಬುದು ನಿತ್ಯದ ದೀಪ ಪ್ರೀತಿಯೆಂಬುದು ನೈವೇದ್ಯ, ಸೌಂದರ್ಯ ಧ್ಯಾನ. ಆನಂದಗೀತ ಸಾಮವೇದ.

ಈ ಭಾಗವತ ಜೀವನಕ್ಕೆ ಗುರುಬೇಕು, ಕೃಪೆ ಬೇಕು.

ಬೇಂದ್ರೆಯವರ ಕಾವ್ಯದಲ್ಲಿ ಬರುವ 'ಪ್ರೀತಿ'ಗೆ ತ್ಯಾಗದ ಬೆನ್ನೆಲುಬಿದೆ. ದುಃಖಿಸಿ, ದುಃಖಿಸಿ ಪುಟ ಹಾಕಿದ ಚಿನ್ನದಂತೆ 'ಕೃಷ್ಣಾಕುಮಾರಿ'ಯ ಸತ್ತ್ವಗುಣವು ಪ್ರಕಾಶಿಸಿದಾಗ, ತನ್ನವರ ನೆಮ್ಮದಿಗಾಗಿ ತನುಮನ ಪ್ರಾಣಗಳನ್ನು ಅರ್ಪಿಸುವುದೇ ಶ್ರೇಷ್ಠವೆಂದು ಆಕೆ ತಿಳಿಯುತ್ತಾಳೆ.

'ಸತ್ಯವಿದು, ಸತ್ಯವಿದು, ಸತ್ಯವಿದು ಸಾಯುವೆನು
ಆತ್ಮ ಸಂತೋಷದಿಂದ'

ಕವಿ ಬಯಸುವುದು ಸ್ವ–ಸುಖವನ್ನಲ್ಲ, ಸರ್ವಸುಖವನ್ನು :

'ಹದಿನಾಲ್ಕು ಲೋಕಕೆ ಚಿಮ್ಮಲಿ ಈ ಸುಖ ಹಿಗ್ಗಲಿ
ಸಿರಿಮುಖ, ಕುಣಿಯೋಣು ಬಾ'[6]

---

1. ಅದೇ 'ಅಹಂಕಾರದ–ಬಿಡುಗಡೆಗಾಗಿ' ಪು. 65
2. ಅದೇ, ಪು. 75 ('ಕೇಳಿನುಡಿ–ನುಡಿಯು ಕೇಳಿ')
3. ಅದೇ, ಪು. 78 ('ಶಿಶುಮಾರನ ಲಾಲಿ')
4. ಅದೇ, ಪು. 59 ('ಇದು ಯುಗಾದಿ')
5. ಅದೇ, 'ಪಂಚಾರತಿ' ಪು. 63
6. ಗರಿ 'ಕುಣಿಯೋಣು ಬಾರs !' ಪು. 126

ಕವಿ ಭಕ್ತನಾಗಿ ಭಗವಂತನ, ಗುರುವಿನ ಅನುಗ್ರಹಕ್ಕಾಗಿ ಹಾತೊರೆಯುತ್ತಾನೆ. ಭಕ್ತಿ ದಾಸ್ಯವಾಗಿ, ಸಖ್ಯವಾಗಿ, ಮಾಧುರ್ಯವಾಗಿ ಗೋಚರಿಸುತ್ತದೆ. ಬೇಂದ್ರೆಯವರ ಕಾವ್ಯದಲ್ಲಿ ಹರಿದು ಬರುವ 'ಮಧುರ' ಭಾವಕ್ಕೆ ಕೆಳಗಣ ಸಂಭಾಷಣೆಯನ್ನು ನೋಡಬಹುದು.

ಪತಿ : ನೀನು ಕಪ್ಪುರದ ಗೊಂಬಿ, ಬೆಂಕಿಯನ್ನು ನಂಬಿ ಕುಳಿತಿರುವಿ. ಅದಕ್ಕೆ ಪ್ರೀತಿ ಅನ್ನುವಿ, ಅಂದ ಮೇಲೆ ನನಗಾಗಿ ಹಂಬಲಿಸಿದರೆ ಹೇಗೆ ?

ಸತಿ : ನೀನು ನನ್ನ ಜೀವದ ಜೀವಾಳ. ನೀನು ನನಗೆ ಬೇಕು. ಸಿಗದಾಗಿರುವೆ. ಇರದಲ್ಲಿ ಹುಡುಕತೊಡಗಿದೆ.

ಪತಿ : ಸುತ್ತಲೆಲ್ಲ ನಾನೇ ಇರುತಿರಲಿಕ್ಕೆ ನೀನೇಕೆ ಅಳುವಿ? ನೀನು ನನ್ನ ಶಕ್ತಿಯಿದ್ದಂತೆ. ಭಕ್ತಿಯಿದ್ದರೆ ಮುಕ್ತಿ ದೂರವಿಲ್ಲ."

ಕವಿಯ ಹೃದಯ ಪಾತ್ರೆ ಬರಿದಾಗಿ ಜ್ಞಾನಪೀಯೂಷ ಒಂದೇ ಸಮನೆ ಹರಿಯಲಾರಂಭಿಸುತ್ತದೆ. ಭಗವಂತನ ಕರೆಯೂ ಬರುತ್ತದೆ.

'ಕರೆ ಬಂದಿತಣ್ಣ, ತೆರೆ ಬಂದಿತಣ್ಣ, ನೆರೆ ಬಂದಿತಣ್ಣ ಬಳಿಗೆ
....
ಅಂಬಿಗನು ಬಂದ ನಂಬಿಗನು ಬಂದ ಬಂದ್ರದ ದಿವ್ಯಗಳಿಗೆ'[1]

ಆತ್ಮ-ಪರಮಾತ್ಮರ ಬೆಸುಗೆಯಲ್ಲಿ, ತಲ್ಲೀನತೆಯಲ್ಲಿ ಅನುಭಾವದ ಬಣ್ಣಬಣ್ಣದ ಎಳೆಗಳು ಕಾಣಿಸ ಹತ್ತುತ್ತವೆ; ಕರ್ಣದಲ್ಲಿ ಸ್ವರವರ್ಣವಲ್ಲಿ ಅರಳುವಳು :

'ಏಳು ಬಣ್ಣ ಉರುಳುರುಳಿ ಉರುಳಿಯಾದಂತೆ ತಿರುಗುತಿಹವು
....
ಅದೇ ಕರ್ಣದಲ್ಲಿ, ಒಳುವರ್ಣದಲ್ಲಿ ಸ್ವರವರ್ಣವಲ್ಲಿ ಅರಳಿ'[2]

ಮೌಲ್ಯಗಳು

ಮೌಲ್ಯಗಳು ನೈತಿಕ, ಸಾಮಾಜಿಕ, ರಾಷ್ಟ್ರೀಯ, ವಿಶ್ವಾತ್ಮಕ ಸೌಂದರ್ಯಾತ್ಮಕ, ಆಧ್ಯಾತ್ಮಿಕ ಇತ್ಯಾದಿ. ಇವುಗಳನ್ನು ಪ್ರತ್ಯೇಕವಾಗಿ ಬೇರ್ಪಡಿಸುವುದು ಕಠಿಣ—ಉದಾ. ನೈತಿಕ ಮತ್ತು ಸಾಮಾಜಿಕ. ಆಧ್ಯಾತ್ಮಿಕ ಮೌಲ್ಯಗಳು ಸಾಮಾನ್ಯವಾಗಿ ವಿಶ್ವಾತ್ಮಕವಾಗಿವೆ.

ಬೇಂದ್ರೆಯವರಿಗೆ ಮೌಲ್ಯಗಳಲ್ಲಿ ಅಚಲವಾದ ವಿಶ್ವಾಸವಿದೆ. ವ್ಯಕ್ತಿಯ ಹಾಗೂ ಸಮಾಜದ ಆರೋಗ್ಯಕ್ಕೆ ಅವು ತುಂಬ ಅವಶ್ಯವೆಂದು ಅವರು ನಂಬಿದವರು. ಮೇಲೆ ಜೀವಿಯನ್ನು ಕುರಿತು ಹೇಳುವಾಗ ಸತ್ಯ, ಸೌಜನ್ಯ, ಅಹಂಕಾರ ನಿರಸನ ಇವುಗಳನ್ನು ಕುರಿತು ಉಲ್ಲೇಖಿಸಲಾಗಿದೆ. ಇನ್ನೊಂದು ಕಡೆಗೆ ಅಂಬಿಕಾತನಯ ದತ್ತರು ತಮ್ಮ ಸತ್ಯನಿಷ್ಠೆಯನ್ನು ಸ್ವಲ್ಪ ವ್ಯಂಗ್ಯವಾಗಿ ಹೀಗೆ ವ್ಯಕ್ತಪಡಿಸುತ್ತಾರೆ :

1. ಅರಳು—ಮರಳು, 'ಹೃದಯಸಮುದ್ರ' ಪು. 125
2. ಅದೇ, ಪು. 173

'ಇಂದು ಗಾಂಧೀ ಜಯಂತಿ
ಇಂದಾದರೂ ಸತ್ಯವನ್ನು ನುಡಿಯೋಣ,
ಸುಳ್ಳಿಗಿದೆ ಇಡೀ ವರುಷ'

ಈಗಾಗಲೇ ಪ್ರಸ್ತಾವಗೊಂಡಿರುವ 'ಕೃಷ್ಣಾಕುಮಾರಿ'ಯ ತ್ಯಾಗವನ್ನು ಇಲ್ಲಿ ಸ್ಮರಿಸಬಹುದು.

ಅನ್ನ, ಸ್ವಾತಂತ್ರ್ಯ, ಉದ್ಯೋಗ, ಹೆಣ್ಣು, ಯುದ್ಧ ಇವು ವ್ಯಕ್ತಿ ಹಾಗೂ ಸಮಾಜದ ಸಮಸ್ಯೆಗಳಾಗಿವೆ. ಸಹೃದಯತೆ ಹಾಗೂ ಸಹನಶೀಲತೆ ಸಾಮಾಜಿಕ, ನೈತಿಕ ಮೌಲ್ಯಗಳಾಗಿವೆ. 'ತುತ್ತಿನ ಚೀಲ' ಬೇಂದ್ರೆಯವರ ಸಾಮಾಜಿಕ ಪ್ರಜ್ಞೆಗೆ ಜ್ವಲಂತ ದೃಷ್ಟಾಂತ. ದಾರಿದ್ರ್ಯದ, ಹಸಿವಿನ ಘೋರ ದುರಂತದ ಚಿತ್ರ ಇಲ್ಲಿದೆ. ತುತ್ತಿನ ಚೀಲದ ಒಳದನಿಯು ಮೊರೆತ ದೇವರ ಗೋರಿಯನ್ನು ಕಟ್ಟುತ್ತದೆ. ಧರ್ಮದ ಧೂಪಕೆ ಬೆಂಕಿಯನ್ನಿಕ್ಕುತ್ತದೆ.

'ಕೆಲಸವಿಲ್ಲದವರ ಹಾಡು' ಕವನದಲ್ಲಿ ನಿರುದ್ಯೋಗ ಸಮಸ್ಯೆಯ ಮಾರ್ಮಿಕ ಚಿತ್ರವಿದೆ.

'ಸ್ವಾತಂತ್ರ್ಯ' ದೇವ-ಮಾನವರ ಕನಸು. ಸೆರೆಯೆಂಬ ಹಿರಿಹಾವ ಹಿಡಿದ ಹದ್ದು. ಪರಮ-ಪುರುಷನು ಜಗಕೆ ಕೊಟ್ಟ ಮುದ್ದು. ಪ್ರೀತಿಯುಗ ಬರುವ ಸದ್ದು, ಮರಣವನು ಸಟೆಗೊಳಿಸುವಂಥ ಕಾವು.

'ಸ್ತ್ರೀ' ಸಮಸ್ಯೆ ಸಮಾಜದ ಮಹತ್ತ್ವದ ಸಮಸ್ಯೆಗಳಲ್ಲೊಂದು. ಹೆಣ್ಣು ಬಾಳಿನ ದುಃಖ ಹೆಣ್ಣು ಜೀವಕ್ಕೇ ಗೊತ್ತು. ಬೇಂದ್ರೆಯವರ 'ಹೆಣದ ಹಿಂದೆ' ಕನ್ನಡದ ಉದಾತ್ತ ಕವನಗಳಲ್ಲೊಂದು. 'ಅವಳಿಗಾವ ಕೆರೆಯ ದಾರಿ? ಹೆಣ್ಣು ಪಾಡು, ನಾಯಿಪಾಡು.'

'Civilization and Culture'—ಇವುಗಳ ಹೆಸರಿನಲ್ಲಿ ಸಂಶೋಧನೆ ನಡೆಸಿ ಸ್ವ-ಪ್ರತಿಷ್ಠೆ ಬೆಳೆಸಿಕೊಳ್ಳುವ ಭೇದ ಬೌದ್ಧಿಕರನ್ನು ಕುರಿತು 'ಊರು ಮತ್ತು ಬಾಲ್ಬಿಯಾ' ಎಂಬ ಕವನವಿದೆ.

ನಮ್ಮ ಸಾಮಾಜಿಕ ಜೀವನ ಮೌಲ್ಯಗಳಲ್ಲಿ ಉದ್ಭವಿಸಿದ ತಿರುವು-ಮುರುವಿನ ಚಿತ್ರವನ್ನು ಕವಿ "'ಗರಡೀ ಬುರಡೀ' ಅವರ ಸಾಮಾಜಿಕ ತತ್ತ್ವಜ್ಞಾನ" ಎಂಬ ಕವನದಲ್ಲಿ ಕೊಡುತ್ತಾರೆ:

"ಒಳಗೊಂದು ....
ಹೊರಗೊಂದು–ಅಂದರಿನ್ನೊಂದು,....
ಇಂದಿನ ಗೆಲವಿನತ್ತಣ ಒಲವು, ಓ ನಾಳೆ ಕಂಡವರಾರು ?
ಗಾಳಿ ಬಂದಾಗಲೇ ತೂರಿಕೊಂಡವ ಜಾಣ"

---

1. ಅರಳು-ಮರಳು ಪು. 455

ಕ್ರಿ.ಶ. 1918ರಲ್ಲಿ ಬೇಂದ್ರೆಯವರು 'ಅಹಹ ಸ್ವಾತಂತ್ರ್ಯ ದೇವೀ!' ಎಂಬ ಪದ್ಯವನ್ನು ಬರೆದರು. 'ಬಿಡುಗಡೆ' ಎಂಬುದು ಇನ್ನೊಂದು ಕವನ. ರಾಷ್ಟ್ರೀಯ ಚಳವಳಿಯ ಕಾಲಕ್ಕೆ ಪ್ರಭಾತ ಫೇರಿಗಾಗಿ ಬರೆದ ಇನ್ನೊಂದು ಪದ್ಯ

"ಇಗೊ ಹೊರಟೆವು ಬಿಡುಗಡೆಗಾಗಿ
ಬಹರಾರು ನಮಗಿದಿರಾಗಿ ?"

ಮುಗಿಲಲ್ಲಿ ಹಕ್ಕಿಗೆ ಹಾದಿಯಿದೆ. ಕಡಲೊಳಗೆ ಮೀನಕ್ಕೆ ಬೀದಿಯಿದೆ. ಗುಡ್ಡಗಳಲ್ಲಿ ಹೊಳೆಗೂ ದಾರಿ 'ನಮಗಷ್ಟೇ ಏಕೆ ಈ ಬೇಡಿ ?' ಎಂದು ಕವಿ ಕೇಳುತ್ತಾನೆ.

ರಾಷ್ಟ್ರಧ್ವಜದ ಬಿಳಿ, ಹಸಿರು, ಕೆಂಪು ಬಣ್ಣಗಳಿಗೆ ರೂಪಕಾಲಂಕಾರ ಕೊಟ್ಟು

'ಜೀವಜ್ಯೋತಿಯ ಬೆಳಕು ನಾಡ ಹಸಿರಿನ ಸೆಳಕು
ದೇವರಾಗದಲಿ ಬೆರೆಯೆ'

ಎಂದು ಹೇಳುತ್ತಾನೆ.

'ಮೂವತ್ತು ಮೂರು ಕೋಟಿ' ಭಾರತೀಯರ ಅಸಹಾಯಕತೆಯನ್ನು ಚಿತ್ರಿಸುವ ಹಾರ್ದಿಕ ಕವನ. ಭೂಮಿತಾಯಿಯ ತೊಡೆಯ ಮೇಲೆ ಭಾರತಿ ತನ್ನ ಮುಖವನ್ನಿಟ್ಟು ದುಃಖವನ್ನು ತೋಡಿಕೊಳ್ಳುತ್ತಿದ್ದಾಳೆ. "ಈ ಮೂವತ್ತು ಮೂರು ಕೋಟಿ ಮಕ್ಕಳು ನಿಜವಾಗಿಯೂ ನಾನು ಹಡೆದ ಮಕ್ಕಳೆ? ನಿಜವಾಗಿ ಗಂಡಸುತನವಿದ್ದ ಮಕ್ಕಳ ಸಂಖ್ಯೆ ಇದರಲ್ಲಿ ಎಷ್ಟು ?..."

'ಕನಸಿನೊಳಗೊಂದು ಕನಸು' ಎಂಬ ಕವನ ಕರ್ನಾಟಕ ಏಕೀಕರಣಕ್ಕೆ ಭಾವನಾತ್ಮಕ ಬೆಂಬಲವನ್ನು ಕೊಡುತ್ತದೆ. ಗಂಗಾವತರಣದಲ್ಲಿ 'ಒಂದೇ ಕರ್ನಾಟಕ' ಎಂದು ಕವಿ ಹಾಡಿದರೆ, ಬಾಹತ್ತರದಲ್ಲಿ 'ನನ್ನದು ಈ ಕನ್ನಡನಾಡು' ಎಂದು ಆತ ಹಾಡುತ್ತಾನೆ.

ಕವಿಯ ದೇಶಪ್ರೇಮ ಕನ್ನಡನಾಡಿಗೆ, ಭಾರತಕ್ಕೆ ಅಷ್ಟೇ ಸೀಮಿತವಾಗಿಲ್ಲ. ಅವನ ಕವಿತೆಗಳು ವಿಶ್ವಪ್ರೇಮಕ್ಕೆ ದೀವಟಿಗೆಯನ್ನು ಹಿಡಿಯುತ್ತವೆ. ಅದಕ್ಕೆಂದೇ ಆತ ನಾರ್ವೆ, ಗ್ರೀಸ್, ಜಪಾನ್, ಫಿನ್‌ಲಂಡ, ಪೋಲ್ಯಾಂಡ ದೇಶಗಳ ರಾಷ್ಟ್ರಗೀತೆಗಳನ್ನು ಕನ್ನಡಕ್ಕೆ ತಂದಿದ್ದಾನೆ.

ಸೌಂದರ್ಯಾತ್ಮಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳು

ಕವಿಯ ದೃಷ್ಟಿಯಲ್ಲಿ ಸೌಂದರ್ಯ ಚತುರ್ಮುಖಃ ಐಂದ್ರಿಯಿಕ, ಮಾನಸಿಕ, ಬೌದ್ಧಿಕ ಹಾಗೂ ಪರಾತ್ಪರ. ಭಗವದ್ಗೀತೆಯಲ್ಲಿ 'ಇಂದ್ರಿಯಗಳು ದೊಡ್ಡವು, ಇಂದ್ರಿಯಗಳಿಗಿಂತ ಮನಸ್ಸು ದೊಡ್ಡದು, ಮನಸ್ಸಿಗಿಂತ ಬುದ್ಧಿ ದೊಡ್ಡದು, ಬುದ್ಧಿಗಿಂತ ಪರಮಾತ್ಮ ದೊಡ್ಡವನು' ಎಂದು ಹೇಳಲಾಗಿದೆ.[1] ಬೇಂದ್ರೆಯವರ

1. इन्द्रियाणि पराण्याहुरिन्द्रियेभ्यः परं मनः ।
मनसस्तु परा बुद्धिर्यो बुद्धेः परतस्तु सः ॥—III-42

ಚತುರ್ಮುಖ ಸೌಂದರ್ಯದ ತಳಹದಿ ಗೀತೆಯು ಈ ಮಾತಿನಲ್ಲಿದೆ. ಗರಿಯ 3 ರಿಂದ 2 ಕವನಗಳು—ಇವು ಐದು ನಾಲ್ವರಿಗಳು. ಎಂದರೆ ಒಂದೊಂದು ನುಡಿಯಲ್ಲಿ ಒಂದೊಂದು ನಿಲುವಿನ ಚೆಲುವು ಇದರಲ್ಲಿ ಅರಳಿದೆ.

ಭಾರತದ ತಂದೆಯಾದ ಮಹಾತ್ಮ ಗಾಂಧಿಯವರನ್ನು ಕುರಿತ, ಸೂರ್ಯ ಪಾನದಲ್ಲಿ ನಾಲ್ಕು ಕವಿತೆಗಳಿವೆ. ಅವರ ಅಮರ ತ್ಯಾಗವನ್ನು, ನಿಃಶಸ್ತ್ರವೀರ್ಯ ವನ್ನು ಸಾಮೈಕ ಶೌರ್ಯವನ್ನು, ವಿನಯ ಧೈರ್ಯವನ್ನು, ಶಾಂತಿ-ಪ್ರೇಮಗಳ ಮಂತ್ರವನ್ನು ರಾಮನಾಮ ಜಪ ಮಂತ್ರವನ್ನು ಕವಿ ಹೊಗಳುತ್ತಾನೆ. ಬುದ್ಧನನ್ನು ಕುರಿತು, ಕಾಳಿದಾಸ, ರವೀಂದ್ರರನ್ನು ಕುರಿತು ಕವಿ ಬರೆದಿದ್ದಾರೆ. 'ಶ್ರೀರಾಮ ಕೃಷ್ಣೋದಯ' ಎಂಬ ಒಂದು ಕವಿತೆಯಿದ್ದರೆ, ವಿವೇಕಾನಂದರ ಕವನಗಳ ಅನುವಾದವೂ ಇದೆ. ಹೃದಯ ಸಮುದ್ರ, ಚೈತ್ಯಾಲಯ ಅರವಿಂದ, ಮಾತಾ ಅವರಿಗೇ ಅರ್ಪಿತವಾಗಿವೆ.

ಇದೇ ರೀತಿ ಕನ್ನಡಿಗರಿಗೆ ಪಂಪ, ವಿದ್ಯಾರಣ್ಯ, ಅಲ್ಲಮಪ್ರಭು, ರತ್ನಾಕರ, ಲಕ್ಷ್ಮೀಶ, ನಾರಣಪ್ಪ, ನೃಪತುಂಗ, ಮುದ್ದಣ—ಇವರೆಲ್ಲರ ನೆನಪನ್ನಿತ್ತು ಕನ್ನಡಿಗ ರಲ್ಲಿ ನವಸ್ಫೂರ್ತಿಯನ್ನು ತುಂಬುತ್ತಾರೆ ಕವಿ.

ದೊರೆತ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವದು ಮಹತ್ತ್ವದ್ದು. 'ನವಯುಗಾರಂಭ'ಕ್ಕೆ[1] ಆಧ್ಯಾತ್ಮಿಕ ನೆಲೆ ಬೇಕು. ಜ್ಞಾನದಿ ಮತ ಮತಕೂಡಬೇಕು. ದೈವ-ಪೌರುಷಗಳ ಜೋಡಿ ನಮ್ಮೆಲ್ಲರ ಕೃತಿಗೆ ತಳಹದಿಯಾಗಬೇಕು. ಅದಕ್ಕೆ ಹೃದಯ ಸಮತೆ ಬೇಕು. ಬಾಂಧವ್ಯ ಜೀವದಾಟವಾಗಬೇಕು. ಸತ್ಯವಾಣಿ ತೂಗ ಬೇಕು. ವೈತಂಡವಾದ ಮಾಯವಾಗಬೇಕು ನ್ಯಾಯರಾಣಿ ಕಣ್ಬಿಚ್ಚಿಯೂ ಭಾಗ್ಯವ ಕೊಡಬೇಕು.

ಅಂಬಿಕಾತನಯದತ್ತನ ನಮನ ಪಂಚಮಾತೆಯರಿಗೆ ಹಡೆದ ತಾಯಿ, ಕನ್ನಡ ತಾಯಿ, ಭಾರತ ಮಾತೆ, ಭೂಮಾತೆ ಮತ್ತು ವಿಶ್ವಮಾತೆ. ಹಡೆದ ತಾಯಿಯಲ್ಲಿ ಕವಿಗೆ ತುಂಬ ಆದರ: 'ನಿನ್ನ ಹೆಸರಿನಲ್ಲಿ ನಾನು ಬರೆವುದೇನು ಸೋಜಿಗ, ತಿಳಿಯಲಾರದೀ ಜಗ'.

ಕವಿಗೆ ಕನ್ನಡ ಮಾತೆಯ ಬಗೆಗಿರುವ ಹಾಗೂ ಭಾರತಮಾತೆಯ ವಿಷಯದಲ್ಲಿ ರುವ ಸಂಪೂರ್ಣ ಪ್ರೇಮ-ಭಕ್ತಿ ತೋರಿಸಲು 'ಕನಸಿನೊಳಗೊಂದು ಕಣಸು' 'ಒಂದೇ ಕರ್ನಾಟಕ' 'ಮಕ್ಕಳಿವರೇನಮ್ಮ ಮೂವತ್ತು ಮೂರು ಕೋಟಿ' ಇವಿಷ್ಟೇ ನಿದರ್ಶನಕ್ಕೆ ಸಾಕು.

'ಭೂಮಿ ತಾಯಿಯ ಮೈಯ ಹಿಡಿಮಣ್ಣ ಗುಡಿಕಟ್ಟಿ ನಿಂತಂಥ ಮೂರ್ತಿ

1. ಸೂರ್ಯಪಾನ, ಪು. 22–24

ನಾನು'[1] ಎಂದು ಕವಿ ಹೇಳುತ್ತಾನೆ. 'ವಿಶ್ವಮಾತೆಯ ಗರ್ಭಕಮಲಜಾತಪರಾಗ ಪರಮಾಣು ಕೀರ್ತಿ ನಾನು!'[2]—ಎಂದೂ ಉಸುರುತ್ತಾನೆ.

ಬೇಂದ್ರೆಯವರ ವಿಶ್ವಗೀತ ಮಾನವೈಕ್ಯ ಭಾವಗೀತ. ಅದರ ಮೂಲಾಧಾರ ಪ್ರೇಮ, ತ್ಯಾಗ, ಪೂರ್ಣಪ್ರಜ್ಞೆ. ಏಕೆಂದರೆ ಇವೇ ಪೂರ್ಣಯೋಗದ ತ್ರಿಸೂತ್ರಗಳು. ಯಾವ ಅಂಶವನ್ನೂ, ಯಾವ ಅಂಗವನ್ನೂ, ಯಾವ ಕ್ಷೇತ್ರವನ್ನೂ ತ್ಯಜಿಸಲಿಲ್ಲ. ಆದರೆ ಎಲ್ಲವನ್ನೂ ಅಪ್ಪಿಕೊಂಡು, ಮನುಷ್ಯನು ತನ್ನ ಅಖಂಡ ಸಮಗ್ರತೆಯಲ್ಲಿ ಮಹಿಯಾನ್‌ನಾಗಿ ಪೂರ್ಣಯೋಗದಲ್ಲಿ ನಿಲ್ಲುತ್ತಾನೆ. ತನ್ನ ವೈಯಕ್ತಿಕ ಸಿದ್ಧಿಯ ಗುರಿಯೆಂದರೆ ವಿಶ್ವಮಾನವರ ಸಿದ್ಧಿಯೆಂಬುದು 'ಪೂರ್ಣಯೋಗ'ದ ಗುಟ್ಟು. ಈ ಆಧ್ಯಾತ್ಮಿಕ ತಳಹದಿ 'ಅಖಂಡ ರಾಮರಾಜ್ಯ'ದ ಕೀಲ. ಇದೇ 'ಅರವಿಂದ'ರ ವಿಚಾರಧಾರೆ.

ಅರವಿಂದ ವಿಚಾರಧಾರೆ

ಬೇಂದ್ರೆಯವರು ಅರವಿಂದರನ್ನು ತಮ್ಮ ಗುರುಗಳೆಂದು ಒಪ್ಪಿದ್ದಾರೆ. ನಾಕುತಂತಿಯಲ್ಲಿ 35 ರಿಂದ 44ರ ವರೆಗಿನ ಕವನಗಳಲ್ಲಿ ಪೂರ್ಣಯೋಗದ ಧ್ವನಿಯಿದೆ.

The Life Divine (ದಿವ್ಯಜೀವನ ಅಥವಾ ಭಾಗವತ ಜೀವನ) ಅರವಿಂದರು ತತ್ತ್ವಶಾಸ್ತ್ರಕ್ಕೆ ಇತ್ತ ಕಾಣಿಕೆ. ಆ ಪುಸ್ತಕದ ಸಂಪುಟ ಎರಡರಲ್ಲಿ Ignorance ಅಜ್ಞಾನವೆಂದರೇನು, Knowledge-ಜ್ಞಾನ, ವಿಜ್ಞಾನವೆಂದರೇನು—ಎಂಬುದರ ವಿವರಣೆಯಿದೆ. ಈ ವಿಭಾಗದಲ್ಲಿ 'Out of the seven-fold ignorance towards the seven fold knowledge' ಎಂಬುದು ಮಹತ್ತ್ವದ ಅಧ್ಯಾಯವಾಗಿದೆ. ನಾಕುತಂತಿಯ 'ಕೇಳ-ನುಡಿ; ನುಡಿ-ಕೇಳ' ಕವನದಲ್ಲಿ 'ಅಜ್ಞಾನ ಸಪ್ತಕದಿಂದ ವಿಜ್ಞಾನ ಸಪ್ತಕಡೆಡೆಗೆ, ಎಚ್ಚತ್ತ ಮಾನವನು ಸಾಗಬೇಕಾಗುತ್ತದೆ' ಎಂದು ಹೇಳಲಾಗಿದೆ. "ಪರಾ, ಪಶ್ಯಂತಿ, ಮಧ್ಯಮಾ, ಇವುಗಳ ಸಮ್ಯಕ್‌ಯೋಗದಲ್ಲಿ ಶುದ್ಧ ಕಾವ್ಯೋದ್ಭವವಾಗುತ್ತದೆ. ಆ ಶ್ರುತಿ-ಸಂಪತ್ತಿಯನ್ನು ಸಾಮಾಜಿಕ-ರಾಜಕೀಯಗಳ ಕ್ಷಣಿಕ ಸಂಸರಣಗಳಿಂದ ದುರ್ಬಂಧಕ್ಕೆ ಒಳಪಡಿಸಬಾರದು" ಎಂಬ ಎಚ್ಚರಿಕೆಯನ್ನು ಕವಿಗಳು ಕೊಟ್ಟಿದ್ದಾರೆ.

ಜಗತ್ತಿನ ಇತಿಹಾಸ-ಧರ್ಮಗಳು ಆತ್ಮಬಲವನ್ನು ಎತ್ತಿ ಹಿಡಿದು, ಭೂಮಿಯ ಮೇಲೆ ದೇಹಧರಿಸಿ ಇರುವದು ಕಡಿಮೆತನ ಎಂಬ ಅಭಿಪ್ರಾಯವನ್ನು ಸಾಮಾನ್ಯವಾಗಿ ವ್ಯಕ್ತಗೊಳಿಸಿವೆ. ದ್ಯಾವಾಪೃಥಿವಿಯನ್ನು ಒಂದುಗೂಡಿಸುವದು ಅರವಿಂದರ ಪೂರ್ಣಯೋಗದ ಗುರಿ. ಮನುಷ್ಯ ಪ್ರಯತ್ನ ಏರಿದಂತೆ ದೈವೀಕರುಣೆ ಕೆಳಗಿಳಿದು ಬರು

1. ಅರಳು–ಮರಳು, ಪು. 120
2. ಅದೇ

ತ್ತದೆ. ಮನಃಪ್ರಧಾನ ಮಾನವನೇ ಜಗತ್ತಿನ ಮೇಲೆ ಬರಬಹುದಾದ ಮಹತ್ತ್ವದ ಜೀವಿಯಲ್ಲ. ಇವನಿಗಿಂತ ಹೆಚ್ಚು ಶಕ್ತಿಶಾಲಿಗಳು ಇಲ್ಲಿಯ ಜೀವನವನ್ನು ಆನಂದಮಯವಾಗಿಸಬಲ್ಲವು. ಅಂಥ ಜೀವಿಗಳ ಉದಯವೇ ಈ ಸೃಷ್ಟಿಯ ಗುರಿ. ಇದೇ Evolution—ಉತ್ಕ್ರಾಂತಿ, ವಿಕಾಸ; Manifestation ಅಥವಾ ಅಭಿವ್ಯಕ್ತಿ, ದೇವಜಾತಿ ಬರುವದಿದೆಯೆಂದು ಅರವಿಂದರ ಮತ. ನಾಕುತಂತಿಯ 'ಶಿಶುಮಾರನ ಲಾಲಿ' ಇಂಥ ದೇವಜನ್ಮದ ಸ್ವಾಗತದ ಲಾಲಿ. ಈ ಕವನದಲ್ಲಿ "ಭಗವತ್ ತತ್ತ್ವವು ಜಡ–ಪ್ರಾಣ–ಮನಗಳಲ್ಲಿ ಎಂತು ಅರಳಿತು, ಇನ್ನೂ ಅರಳಲಿದೆ, ಯಾವ ಯಾವ ವಿಭೂತಿತತ್ತ್ವಗಳು ವಿಶ್ವದ, ಭಾರತದ ಚರಿತ್ರೆಯಲ್ಲಿ ಪ್ರಕಟಗೊಂಡವು, ಹರಿಹರ ಸಮನ್ವಯತತ್ತ್ವ, ಬಕದಾಲ್ಭ್ಯನ ಧ್ಯಾನತತ್ತ್ವ, ರಾಮಕೃಷ್ಣ, ಬುದ್ಧ–ಮಹಾವೀರಾದಿ ಅವತಾರ ತತ್ತ್ವ, ಭಗವದ್ಗೀತಾ ತತ್ತ್ವ, ಆಚಾರ್ಯ–ಯತಿಗಳ ಸಾಮಗಾನದ ಸಮ್ಯಕ್–ತತ್ತ್ವ, ಶ್ರೀ ಅರವಿಂದ ಶ್ರೀ ಮಾತೆಯರ ಸುಪ್ರಮಾನಸ ತತ್ತ್ವ" ಇವೆಲ್ಲವುಗಳಿಗೂ ಕವಿ ಸ್ವಸ್ತಿ ಹೇಳಿ ಆರತಿ ಎತ್ತುತ್ತಾನೆ:

"ಓಂ ಸ್ವಸ್ತಿ ! ಸ್ವಸ್ತೀ, ಸ್ವಸ್ತೀ
ಭೂಮಂಡಲ ಸ್ವಾಸ್ಥ್ಯ,
ಲಕ್ಷಾ ಕಾರ್ತಿಕವಾಗಿ
ಕೋಟಿ ಕೋಟಿ ಅಬ್ದಾ
ಆತ್ಮಿಕ ತೇಜಾ, ಕೃತುಬೀಜಾ
ಕೃತುಕೃತ್ಯತೆ ಓಜಾ
ರಘ್ನಾs, ರಘ್ನಾs, ದಧಿಕ್ರಾs
ದಧ್ಯಂಕನ ನೈಜಾ, ಸ್ವಸ್ತಿ, ಆರತಿ ಬೆಳಗs"[1]

ಸರ್ವಭೂಮಂಡಲದ ಯೋಗಕ್ಷೇಮದಲ್ಲಿ ಲಕ್ಷ್ಯವಿಟ್ಟು ಶ್ರೀ ಅರವಿಂದರು ಪ್ರತಿಪಾದಿಸಿದ ತತ್ತ್ವಾನುಭವದ ಬೆಂಬಲಕ್ಕೆ ವೈದಿಕಯೋಗ ಪದ್ಧತಿಯಿದೆ. ಈ ದೃಷ್ಟಿಯಿಂದ ಅವರ Foundations of Indian Culture ಮಹತ್ತ್ವದ ಗ್ರಂಥ. ಮೇಲೆ ಉದ್ಧರಿಸಿದ ಸಾಲುಗಳಲ್ಲಿ ಭೂಮಂಡಲ ಸ್ವಾಸ್ಥ್ಯದ ಮಾತಿದೆ. ಅದರ ರೀತಿ ವೈದಿಕವಿದೆ. ನಾಕುತಂತಿಯ 30 ರಿಂದ 38 ('ಹೆಟರ–ಡಾಕ್ಸಿ', 'ಪಾಂಡ್ರಕ–ಪುಳಿಂದಕಂ', 'ಮಹಾತ್ಮ–ವಚನ', 'ದಾರಿಗದಾರೋ', 'ನಿಬದ್ಧ') ಈ ಕವನಗಳಲ್ಲಿ ಈ ಭಾವ ಹೆಚ್ಚು ಸ್ಪಷ್ಟವಾಗಿ ಬಂದಿದೆ ಅಲ್ಲಿಯ ವಿಚಾರಗಳನ್ನು ಹೀಗೆ ಸಂಗ್ರಹಿಸಬಹುದು: "ಸಾಕ್ಷಿಪುರುಷನ ಪೂರ್ಣಯೋಗ (ಇದು) ಮಾನವನ ಆದರ್ಶ. ಸಿಕ್ಕುಪಟ್ಟಿ (Analysis, Synthesis) ಸಂಗಡಣೆ, ವಿಂಗಡಣೆಗಳು ಚದುರಂಗದಾಟದಲ್ಲಿ ಮಾತ್ರ ಈ ವಿನೋದವು ಕಾಲಕ್ಷೇಪ ಮಾಡುವ ಮಂದಾನಂದ ಬುದ್ಧಿ...ಗತ ಸಂಸ್ಕೃತಿಗಳ ತಿರುಳನ್ನು ಪ್ರಕೃತ ಸಂಸ್ಕೃತಿಯಲ್ಲಿ ಗರ್ಭೀಕರಿಸಿ, ಉದ್ಭವಲಿಂಗಕ್ಕೆ ಹಾದಿ ಮಾಡುವದು ವೇದ ಸಂಪತ್ತಿನ ಮಾರ್ಗ...ನಮ್ಮ ಇತಿಹಾಸ ಪುರಾಣಗಳಿಂದ

1. ನಾಕುತಂತಿ, 'ಶಿಶುಮಾರನ ಲಾಲಿ' (ಕವನ) ಪು. 80

ವೇದವಿದ್ಯೆಯನ್ನೇ ವಿಕೃತಗೊಳಿಸಿದರೆ ವಿಶ್ವಸಾಹಿತ್ಯ ಬರಲಾರದು; ಸಾಮಾಜಿಕ, ರಾಜಕೀಯ ದ್ವೇಷೋದ್ದೀಪನಕ್ಕೆ ಇತಿಹಾಸ ದರ್ಶನವು ಹಾದಿಯಾಗಬಾರದು; ಅದು ಸ್ಮಶಾನದ ಹಾದಿ ಹಿರೋಶಿಮಾ ಹಾದಿ."

ಅರವಿಂದರದು ಸಮನ್ವಯಾತ್ಮಕ ದೃಷ್ಟಿ, ಮೇಲೆ ಸೂಚಿಸಿದಂತೆ 35 ರಿಂದ 44 ರ ವರೆಗಿನ ನಾಕುತಂತಿಯ ಕವನಗಳಲ್ಲಿ ಪೂರ್ಣಯೋಗದ ದೃಷ್ಟಿಯಿದೆ. 'ಇದು ಯುಗಾದಿ', 'ಚೈತನ್ಯದ ಪೂಜೆ', 'ಪಂಚಾರತಿ', 'ಎದೆಯ ಒಕ್ಕಲಿಗನ ಹಾಡು', 'ಅಹಂಕಾರದ ಬಿಡುಗಡೆ', 'ಸಂಭೂ–ಶಂಭೂ', 'ಕಣ್ಣರಳು', 'ದೇಮವ್ವನ ಮೆರವಣಿಗೆ', 'ಕೇಳಿ–ನುಡಿ, ನುಡಿ–ಕೇಳಿ', 'ಶಿಶುಮಾರನ ಲಾಲಿ'. ಇವೇ ಆ ಕವನಗಳು. ಇವುಗಳಲ್ಲಿ ಕರ್ಮ, ಜ್ಞಾನ, ಭಕ್ತಿ ಇವು ಯುಕ್ತವಾಗಿ ನಡೆಯುತ್ತವೆ.

ಅರವಿಂದರ ದೃಷ್ಟಿಯಲ್ಲಿ ಅಂತಿಮ ಸತ್ಯ ಜಡವಲ್ಲ. ಅದು ಚೈತನ್ಯಮಯ ಸ್ವರೂಪದ್ದು. ಅಂತಿಮ ಸತ್ಯವನ್ನು ತರ್ಕದಿಂದಲ್ಲ, ಅನುಭೂತಿಯಿಂದಲೇ ಅರಿಯಲು ಸಾಧ್ಯ. ಸಮಗ್ರತೆ, ಅತಿಮಾನಸ ಪ್ರಜ್ಞೆ ಉದಯಿಸಲು ಅಹಂಕಾರದ ನಿರ್ಮೂಲನವಾಗಬೇಕು. ಡಾಂಭಿಕತೆ, ಪೊಳ್ಳುಜಂಭ ಹೋಗಬೇಕು. ಈ ವಿಷಯ ನಾಕುತಂತಿಯ ಕವನಗಳಲ್ಲಿ ಹಾಗೂ ಮತ್ತಿತರ ಕವನಗಳಲ್ಲಿ ಹೇಗೆ ಮೂಡಿ ಬಂದಿದೆಯೆಂಬುದನ್ನು ದೇವರು, ಜಗತ್ತು, ಜೀವ ವಿಷಯಗಳ ಚರ್ಚೆಯಲ್ಲಿ ಈಗಾಗಲೇ ವಿವರಿಸಿಯಾಗಿದೆ.

"ಓಂ ತತ್ ಸತ್ ಎಂಬ ಸತ್ತ್ವತತ್ತ್ವವು ತನ್ನ ತಪಃಶಕ್ತಿ, ಜನನಶಕ್ತಿಯಿಂದ ಮಹತ್ತಿಗೆ ಪುಷ್ಟಿಕೊಟ್ಟು. ಭೂ, ಭುವಃ ಸ್ವರ್ಗಸ್ಥಿತಿಯನ್ನು ಪೈಶಾಚಿಕ, ರಾಕ್ಷಸಿಕ, ಅಸುರಿಕ ದಾಸ್ಯದಿಂದ ಬಿಡಿಸಿಕೊಳ್ಳಬೇಕು ಹೀಗೆ ಮಾಡುವಾಗ, ಆ ಚೈತ್ಯ ಪುರುಷ ತನ್ನ ಸೋಪಾನಗತಿಯಲ್ಲಿ ಮೇಲೆ ಏರಬೇಕು. ಆಧಿ ಭೌತಿಕ, ಆಧ್ಯಾತ್ಮಿಕ, ಆಧಿದೈವಿಕ ತಾಪಗಳು ತೀರಿ ಸಾಧನೆಯಲ್ಲಿ ತಪವಾಗಿ, ಹೊಸದೊಂದು ಅಧಿಯಜ್ಞತ ಅವತಾರದ ಬರವಿಗೆ ಸಿದ್ಧಿಸಂಕಲ್ಪವಾಗಬೇಕು. ಇದಕ್ಕೆ ಕಾಮಸಂಕಲ್ಪ ಸಾಲದು. ತಮ್ಮ ತಮ್ಮ ಈಶಸಂಕಲ್ಪಬೇಕು ಇದನ್ನು ಶ್ರೀಮಾತಾ–ಶಕ್ತಿ ಮತ್ತು ಶ್ರೀ ಅರವಿಂದ ಅವತಾರ ಸಾರುತ್ತಿದೆ," ಎಂದು ಬೇಂದ್ರೆಯವರಿಗೆ ಅನಿಸಿದೆ. ಅದಕ್ಕೆಂದೇ ನಾಕುತಂತಿಯ ಅರ್ಪಣದಲ್ಲಿ,

> "ಓಂ ತತ್‌ಸತ್ ಪುರುಷಾಯ ನಮಃ
> 'ವಂದೇ ಮಾತರಂ'

ಎಂದು ಹೇಳಲಾಗಿದೆ.[1]

---

1. ಜಿ. ಎನ್. ಕುಂದರಗಿ, "ನಾಕುತಂತಿಯಲ್ಲಿ ಅಭಿವ್ಯಕ್ತವಾದ ತತ್ತ್ವಜ್ಞಾನ" ಇಳಿದು ಬಾ ತಾಯಿ (ಬೇಂದ್ರೆ ಅಭಿನಂದನ ಗ್ರಂಥ) ಸಂ. ಬುದ್ಧಣ್ಣ ಹಿಂಗಮಿರೆ (ಸಾಹಿತ್ಯ ಮಂಟಪ, ಹುಬ್ಬಳ್ಳಿ ಹಾಗೂ ಸಮಾಜ ಪುಸ್ತಕಾಲಯ, ಧಾರವಾಡ) ಪು. 361–63

ಸಮಾರೋಪ

ಶ್ರೀ ಅರವಿಂದರ ದೃಷ್ಟಿಯಲ್ಲಿ ತತ್ತ್ವಜ್ಞಾನವು ಚರ್ಚೆಯಲ್ಲ, ಬೌದ್ಧಿಕ ಕ್ರೀಡೆಯಲ್ಲ, ಹೆಮ್ಮೆಯ ಸಾಧನವಲ್ಲ; ಅದು ದರ್ಶನ ಇದು ಬೇಂದ್ರೆಯವರ ದೃಷ್ಟಿಯೂ ಹೌದು ಈ ದರ್ಶನದ ಉದ್ದೇಶ ಭಗವಂತನ ಸಾಕ್ಷಾತ್ಕಾರ. ದಾರಿ ಯೋಗದ ಹಾದಿ, ಭಾಗವತನ ಮಾರ್ಗ. "ನಮ್ಮ ಆಧ್ಯಾತ್ಮಿಕ ಉನ್ನತಿಯು ಸುಪ್ರಮಾನಸ ಭೂಮಿಕೆಯಲ್ಲಿ ಅಚಲಪ್ರತಿಷ್ಠೆ ಹೊಂದಬೇಕು. ಅದರಿಂದಲ್ಲದೇ ಮಾನವನ ಉದ್ಧಾರವಿಲ್ಲ"—ಎಂದು ಶ್ರೀ ಅರವಿಂದರೂ, ಬೇಂದ್ರೆಯವರೂ ಹೇಳಿದರೂ, "ಸಾಮಾನ್ಯತೆಯ ಅಜ್ಞಾನ, ಅಹಂಕಾರಗಳಿಗೆ ನಾವು ಪಟ್ಟಕಟ್ಟಿ, ಅದನ್ನು ಶಿಲಾಶಾಪಕ್ಕೆ ಗುರಿಪಡಿಸಬಾರದು. ರಾಮಪಾದಸ್ಪರ್ಶ ಅದಕ್ಕೂ ಬೇಕು. ಈ ದಿವ್ಯ ದರ್ಶನದಲ್ಲಿ ವ್ಯಾಧನು ವಾಲ್ಮೀಕಿಯಾಗುತ್ತಾನೆ"—ಎಂದು ಈರ್ವರೂ ಹೇಳುತ್ತಾರೆ. 'ಇಂಥ ಹುತ್ತದ ಸುತ್ತ', 'ಅನು' 'ತಾನು', 'ನಾನು', 'ನೀನಿ'ನ ನಾಕುತಂತಿಯ ಈ ಚಾದಂತ ವೀಣೆ ಮಿಡಿಯುತ್ತದೆ—ಎಂದು ಲೇಖಕರ ಮುನ್ನುಡಿ ಹೇಳುತ್ತದೆ.[1]

ಪ್ರತಿಯೊಂದು ತತ್ತ್ವ ತಿಳಿಸಿಕೊಡಲು ಒಂದು ವೈಜ್ಞಾನಿಕ ಪದ್ಧತಿ ಅಥವಾ ತಾತ್ತ್ವಿಕ ಪದ್ಧತಿಯನ್ನು ಅನುಸರಿಸಲಾಗುತ್ತದೆ. ತಮ್ಮ ದಿವ್ಯಜೀವನದ ತತ್ತ್ವವನ್ನು ತಿಳಿಸಿಕೊಡಲು ಅರವಿಂದರು ವೇದಾಂತಿಕ ಪದ್ಧತಿಯನ್ನು ಅನುಸರಿಸಿದ್ದಾರೆ, ಅವರ ದಾರಿಯೋಗದ ದಾರಿ ಬೇಂದ್ರೆಯವರದೂ ಯೋಗಮಾರ್ಗ. ಗುರಿ ಅನುಭಾವದ್ದು. ಆದರೆ ಅವರ ತಾತ್ತ್ವಿಕ ಹಿನ್ನೆಲೆ, ಪದ್ಧತಿ (Metaphysical Fundation) ಸಾಂಖ್ಯರದು ಎಂದು ತೋರುತ್ತದೆ. ಅದಕ್ಕೆಂದೇ 'ಸಂಖ್ಯಾಶಾಸ್ತ್ರ' ದಲ್ಲಿ ಅವರ ಆಸಕ್ತಿ ದಿನದಿಂದ ದಿನಕ್ಕೆ ಬೆಳೆಯಿತು.

ವೇದಮಂತ್ರದ ಮೂಲವನ್ನು ಅವರು ಸಂಖ್ಯೆಯಲ್ಲಿ ಕಂಡಿದ್ದಾರೆ. ಕಾವ್ಯ, ಸಂಗೀತದ ಬೇರು ಸಂಖ್ಯೆಯಲ್ಲಿದೆಯೆಂದು ಅವರು ಹೇಳಿದರು. ವಿಶ್ವದ ಬೇರೆ ಬೇರೆ ಜ್ಞಾನಕ್ಷೇತ್ರಗಳ ತಳಹದಿ ಸಂಖ್ಯೆಯೆಂದು ಅವರು ವಿವರಿಸಿದರು. ಈ ದೃಷ್ಟಿಯಿಂದ ತಮ್ಮ ಕೊನೆಯ ದಿನಗಳಲ್ಲಿ ರಸಾಯನಶಾಸ್ತ್ರ ಹಾಗೂ ಗಣಿತಶಾಸ್ತ್ರವನ್ನು ಅವರು ವಿಶೇಷವಾಗಿ ಅಭ್ಯಸಿಸಿದರು.

---

1. ನಾಕುತಂತಿ ಪು. v

ಎಂ. ಪಿ. ಮಹದೇವಯ್ಯ

ಕರ್ನಾಟಕದ ಆಡಳಿತದಲ್ಲಿ ಯುವರಾಜರ ಪಾತ್ರ

[ಶಾಸನಗಳ ಆಧಾರದ ಮೇಲೆ ಪ್ರಾಚೀನ ಕರ್ನಾಟಕ ಇತಿಹಾಸದ ಆಡಳಿತ ವಿಷಯ ದಲ್ಲಿ ಯುವರಾಜರ ಪಾತ್ರವನ್ನು ಹೃದಯಂಗಮವಾಗಿ ಚಿತ್ರಿಸುವ ಲೇಖನ ಇದು. —ಸಂ.]

ಆಡಳಿತಕ್ಕೆ ಸಂಬಂಧಿಸಿದ ವಿವಿಧ ಗ್ರಂಥಗಳು ಆಡಳಿತದಲ್ಲಿ ಯುವರಾಜರ ಪ್ರಾಮುಖ್ಯತೆಯ ಬಗ್ಗೆ ವಿಶೇಷ ಒತ್ತು ನೀಡಿವೆ. ಆದರೆ ಈ ನಿಯಮಗಳನ್ನು ಕಾರ್ಯಾಚರಣೆಯಲ್ಲಿ ಎಷ್ಟರಮಟ್ಟಿಗೆ ಅನುಸರಿಸಲಾಗುತ್ತಿತ್ತು ಎಂಬುದನ್ನು ವಿಶೇಷವಾಗಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ದಕ್ಷಿಣ ಭಾರತದ ಶಾಸನಗಳ ಅಧ್ಯಯನದಿಂದ ಮನಗಾಣಬಹುದು. ವಿವಿಧ ರಾಜವಂಶಗಳ ಶಾಸನಗಳು ಈ ಸಮಸ್ಯೆಯನ್ನು ಕುರಿತಂತೆ ಅಗತ್ಯವಾದ ಮಾಹಿತಿಗಳನ್ನು ಒದಗಿಸುತ್ತವೆ. ಹಾಗೂ ಪ್ರಾಚೀನ ಕರ್ನಾಟಕದಲ್ಲಿ ಅನುಸರಿಸಲಾಗುತ್ತಿದ್ದುದನ್ನು ವಿವಿಧ ರಾಜವಂಶಗಳ ಅಧ್ಯಯನದಿಂದ ಪರಿಶೀಲಿಸಲು ಇಲ್ಲಿ ಉದ್ದೇಶಿಸಲಾಗಿದೆ. ಆಡಳಿತಕ್ಕೆ ಸಂಬಂಧಿಸಿದಂತೆ ಗ್ರಂಥಗಳಿಂದ ಪಡೆಯಲಾದ ಮಾಹಿತಿಯನ್ನು ಪರಿಶೀಲಿಸಲು ಕೂಡ ಈ ಶಾಸನ ಮಾಹಿತಿಯಿಂದ ನೆರವಾಗುತ್ತದೆ.

ಬನವಾಸಿಯ ಕದಂಬರ ಕಾಲದಿಂದ ನಾವು ನಮ್ಮ ಪರಿಶೀಲನೆಯನ್ನು ಪ್ರಾರಂಭಿಸೋಣ. ಇತರ ಸಾಂಸ್ಕೃತಿಕ ಕ್ಷೇತ್ರಗಳ ಜೊತೆಗೆ ಆಡಳಿತ ವಿಷಯಗಳಲ್ಲಿಯೂ ಕರ್ನಾಟಕ ಚಾರಿತ್ರಿಕ ಪರಂಪರೆಯನ್ನು ಪ್ರಾರಂಭಿಸಿದವರು ಕದಂಬರು ಎಂದು ಪರಿಗಣಿಸಬಹುದು. ಕಾಕುತ್ಸವರ್ಮನ ಜ್ಯೇಷ್ಠಪುತ್ರ ಶಾಂತಿವರ್ಮನನ್ನು ಯುವರಾಜ ಎಂದು ಆಯ್ಕೆಮಾಡಲಾಯಿತು. ಕಾಕುಸ್ಥವರ್ಮನೇ ತನ್ನ ಸೋದರ ರಘುವಿನ ನೇತೃತ್ವದಲ್ಲಿ ಪಲಾಸಿಕೆಯ ಆಡಳಿತಗಾರನಾಗಿದ್ದ[1]. ಕೃಷ್ಣವರ್ಮನ ದ್ವಿತೀಯಪುತ್ರ ದೇವವರ್ಮನು ಯುವರಾಜನಾಗಿದ್ದ.[2] ಕದಂಬರ ಕಾಲದಲ್ಲಿ ಸಾಮಾನ್ಯವಾಗಿ ಜ್ಯೇಷ್ಠಪುತ್ರನನ್ನು ಯುವರಾಜನನ್ನಾಗಿ ನೇಮಕ ಮಾಡಲಾಗುತ್ತಿತ್ತು ಎಂಬುದು ಇವರಿಂದ ಸ್ಪಷ್ಟವಾಗುತ್ತದೆ. ಜ್ಯೇಷ್ಠಪುತ್ರನಲ್ಲದೆ ಇತರ ಪುತ್ರರು ಈ ಸ್ಥಾನಕ್ಕೆ ಹೆಚ್ಚು ಸಮರ್ಥರು ಎಂದು ರಾಜನಿಗೆ ಅನ್ನಿಸಿದರೆ ಆಗ ಬೇರೆಯವರನ್ನು

1. ಇಂ. ಆಂಟಿಕ್ವೆರಿ, VIII. ಪು. 434.

ಆಯ್ಕೆ ಮಾಡಬಹುದಾಗಿತ್ತು. ಯುವರಾಜನನ್ನು ರಾಜ್ಯದ ಬೇರೆ ಪ್ರಾಂತದಲ್ಲಿ ಆಡಳಿತಗಾರನನ್ನಾಗಿ ಮಾಡಲಾಗುತ್ತಿತ್ತು. ಅಥವಾ ಆಡಳಿತ ವಿಷಯಗಳಲ್ಲಿ ಮತ್ತು ಯುದ್ಧ ಕಾರ್ಯಗಳಲ್ಲಿ ರಾಜನಿಗೆ ನೆರವಾಗಲು ರಾಜಧಾನಿಯಲ್ಲಿಯೇ ಆತನನ್ನು ಇರಿಸಿಕೊಳ್ಳಲಾಗುತ್ತಿತ್ತು.

ಬಾದಾಮಿಯ ಚಾಲುಕ್ಯರ ಕಾಲವನ್ನು ಗಮನಿಸೋಣ—ಈ ಸಮಸ್ಯೆಗೆ ಸಂಬಂಧಿಸಿದಂತೆ ನಮಗೆ ಹೆಚ್ಚಿನ ಮಾಹಿತಿ ದೊರೆಯುತ್ತದೆ. ಸಮೃದ್ಧ ಶಾಸನ ಸಂಪತ್ತು ಲಭ್ಯವಾಗಿರುವುದೇ ಇದಕ್ಕೆ ಕಾರಣವಾಗಿದೆ. ಇವು ಈ ಸಮಸ್ಯೆಗೆ ಸಂಬಂಧಿಸಿದಂತೆ ಸಾಕಷ್ಟು ಬೆಳಕು ಚೆಲ್ಲುತ್ತವೆ. ಜ್ಯೇಷ್ಠ ಪುತ್ರನ ಹಕ್ಕುಸಾಧನೆಗೆ ಅನೇಕವೇಳೆ ಪುರಸ್ಕಾರ ಲಭಿಸುತ್ತಿರಲಿಲ್ಲ ಎಂಬುದೂ ನಮ್ಮ ಗಮನಕ್ಕೆ ಬರುತ್ತದೆ. ಮೊದಲನೆ ಕೀರ್ತಿವರ್ಮನ ಉತ್ತರಾಧಿಕಾರಿಯಾಗಿ ಆವನ ಸೋದರ ಮಂಗಳೇಶ ಬಂದ. ವಾಸ್ತವವಾಗಿ, ಕೀರ್ತಿವರ್ಮನ ಪುತ್ರರಿದ್ದು, ಇವರು ಸಹಜ ಉತ್ತರಾಧಿಕಾರಿಗಳಾಗಿದ್ದರೂ ಆ ರೀತಿ ಮಾಡಲಾಗಿತ್ತು. ರಾಜಕುಮಾರ ಯುವರಾಜನೆಂದು ನಾಮಕರಣಗೊಳ್ಳುವ ಪೂರ್ವದಲ್ಲಿ ವಿವಿಧ ಶಾಸ್ತ್ರಗಳು, ಪುರಾಣಗಳು, ರಾಜ್ಯನೀತಿ ಮತ್ತು ಧರ್ಮಗ್ರಂಥಗಳಲ್ಲಿ ಜ್ಞಾನ ಸಂಪಾದಿಸುವುದರ ಜೊತೆಗೆ ಸಮರಕಲೆಯಲ್ಲಿಯೂ ತರಬೇತಿ ಪಡೆದುಕೊಳ್ಳಬೇಕಾಗಿತ್ತು. ರಾಜಕುಮಾರರ ಶಿಕ್ಷಣ ಮತ್ತು ತರಬೇತಿಯನ್ನು ಸೂಕ್ತವಾಗಿ ವ್ಯವಸ್ಥೆಗೊಳಿಸಲಾಗುತ್ತಿತ್ತು ಎಂಬ ಬಗ್ಗೆ ಚಾಲುಕ್ಯರ ದಾಖಲೆಗಳು ಸಾಕ್ಷ್ಯಗಳನ್ನು ಒದಗಿಸುತ್ತವೆ.[1] ಮಹಾಕೂಟ ಸ್ತಂಭಶಾಸನವು ಮಂಗಳೇಶನನ್ನು ರಾಜತಂತ್ರನಿಪುಣನೆಂದು ವಿವರಿಸುತ್ತದೆ. ಯುವರಾಜನು ಕೂಡ ಆಡಳಿತಾತ್ಮಕ ವ್ಯವಹಾರಗಳಲ್ಲಿ ರಾಜನೊಡನೆ ಪಾಲ್ಗೊಂಡಿದ್ದನು. ಮೊದಲನೆಯ ವಿಕ್ರಮಾದಿತ್ಯನು ತನ್ನ ಜೀವಿತಾವಧಿಯಲ್ಲಿ ಆಡಳಿತಕಾರ್ಯಗಳಲ್ಲಿ ತನ್ನ ಮಗ ವಿನಯಾದಿತ್ಯನನ್ನು ಜೊತೆಗೂಡಿಸಿಕೊಂಡಿದ್ದ. ಯುವರಾಜನಿಗೆ ಹಲವಾರು ಆಡಳಿತಾತ್ಮಕ ಅಧಿಕಾರಗಳನ್ನು ನೀಡಲಾಗಿದ್ದು, ಪರಿಸ್ಥಿತಿಗಳಿಗೆ ಅನುಗುಣವಾಗಿ ಇವು ವ್ಯತ್ಯಯಗೊಳ್ಳುತ್ತಿದ್ದವು. ದಾನಗಳನ್ನು ನೀಡುವ ಅಧಿಕಾರ ಯುವರಾಜನಿಗೆ ಇದ್ದಿತು. ಯುವರಾಜ ವಿಷ್ಣುವರ್ಧನನು ಬ್ರಾಹ್ಮಣರಿಗೆ ಭೂದಾನ ಮಾಡಿ ಸತಾರಾ (ತಾಮ್ರ) ಶಾಸನಗಳನ್ನು ಹೊರಡಿಸಿದ.[2] ಯುವರಾಜ ಶಿಲಾದಿತ್ಯನು ಕೂಡ ದಾನಗಳನ್ನು ಮಾಡಿದ್ದ.[3] ಕೆಲವು ಸಲ ಅವರು ರಾಜರ ಪ್ರತಿನಿಧಿಗಳಾಗಿಯೂ ವರ್ತಿಸುತ್ತಿದ್ದರು. ಲಕ್ಷ್ಮೇಶ್ವರದ ಮಹಾಜನರು ಮತ್ತು ದೊರೆ ವಿಜಯಾದಿತ್ಯ—ಇವರ ನಡುವೆ ನಡೆದ ಒಪ್ಪಂದ ಕಾರ್ಯದಲ್ಲಿ ವಿಜಯಾದಿತ್ಯನನ್ನು

1. ಇಂ. ಆಂಟಿಕ್ವೆರಿ. VII, ಪು. 363
2. ಅದೇ, XIX, ಪು. 303
3. ಎ. ಇ. XXXIV, ಪು. 117

ಪ್ರತಿನಿಧಿಸುತ್ತಿದ್ದ ಯುವರಾಜ ವಿಕ್ರಮಾದಿತ್ಯ ಒಪ್ಪಂದಗಳನ್ನು ಸ್ವೀಕರಿಸಿದ್ದ.[1] ಸಾಮಾನ್ಯವಾಗಿ ಯುವರಾಜನು ಸೇನಾಕಾರ್ಯಾಚರಣೆಗಳಲ್ಲಿ ರಾಜನೊಡನೆ ತೆರಳುತ್ತಿದ್ದ. ಇದರಿಂದ ಅವನಿಗೆ ಸಮರಕಲೆಯಲ್ಲಿ ತರಬೇತಿ ಪಡೆಯಲು ಅವಕಾಶ ದೊರೆಯುತ್ತಿತ್ತು. ವಿನಯಾದಿತ್ಯ ಮತ್ತು ವಿಜಯಾದಿತ್ಯರು ದಕ್ಷಿಣದ ಬಲ (ರಾಜ್ಯ)ಗಳ ವಿರುದ್ಧ ಸಮರ ಕಾರ್ಯಾಚರಣೆಯಲ್ಲಿ (ದಾಳಿ) ಮೊದಲನೆ ವಿಕ್ರಮಾದಿತ್ಯನೊಡನೆ ಹೋಗಿದ್ದರು.[2] ಎರಡನೇ ವಿಕ್ರಮಾದಿತ್ಯನು ಪಲ್ಲವರ ವಿರುದ್ಧ ಚಾಲುಕ್ಯ ಸೇನೆಯ ನಾಯಕತ್ವ ವಹಿಸಿದ್ದ; ಆಗಿನ್ನೂ ಅವನು ಯುವರಾಜನಾಗಿದ್ದ.[3] ಎರಡನೇ ಕೀರ್ತಿವರ್ಮನು ಇನ್ನೂ ಯುವರಾಜ ನಾಗಿದ್ದಾಗಲೇ ಪಲ್ಲವರ ವಿರುದ್ಧ ಕೊನೆಯ ದಂಡಯಾತ್ರೆಯ ನಾಯಕತ್ವ ವಹಿಸಿದ್ದ. ಸಮರ ಕಾರ್ಯಾಚರಣೆಯಲ್ಲಿ ಶಿಕ್ಷಣ ಮತ್ತು ತರಬೇತಿ ನೀಡುವ (ಪಡೆಯುವ) ಸಲುವಾಗಿ, ಮೊದಲ ಚಾಲುಕ್ಯರ ಅವಧಿಯಲ್ಲಿ ಯುವರಾಜರು ಯುದ್ಧ ಕಾರ್ಯಾ ಚರಣೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಎಂಬ ಅಂಶ ಈ ನಿದರ್ಶನಗಳಿಂದ ಸ್ಪಷ್ಟಗೊಳ್ಳು ತ್ತದೆ.

ತಲಕಾಡಿನ ಗಂಗರ ಕಾಲದಲ್ಲಿಯೂ, ಯುವರಾಜ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಇದೇ ವ್ಯವಸ್ಥೆ ಮುಂದುವರಿದಿತ್ತು. ಇಮ್ಮಡಿ ಶಿವಮಾರ ಬಂಧನ ದಲ್ಲಿದ್ದಾಗ, ಮಾರಸಿಂಹನು ಯುವರಾಜನಾಗಿದ್ದನು. ರಾಜ್ಯಾಡಳಿತ ನಿರ್ವಹಿಸಿದ್ದ ಶ್ರೀ ಪುರುಷ ರಾಜನಾಗುವ ಮೊದಲು ಸ್ವಲ್ಪಕಾಲ ಯುವರಾಜನಾಗಿ ರಾಜ್ಯಭಾರ ಮಾಡಿದ. ಮೊದಲನೆಯ ಬೂತುಗನು ರಾಜಮಲ್ಲನ ಆಳ್ವಿಕೆಯಲ್ಲಿ ಯುವರಾಜ ನಾಗಿದ್ದ ಮತ್ತು ಕೊಂಗಾಳನಾಡು ಮತ್ತು ಪೊನ್ನಾಡುಗಳನ್ನು ಆಳುತ್ತಿದ್ದ. ಅವನ ಮಗ ಎರೆಯಪ್ಪ ಕೂಡ ಯುವರಾಜನಾಗಿ ಇದೇ ಪಾತ್ರ ವಹಿಸಿದ್ದ. ಅವನು ಕೊಂಗಾಳನಾಡು—8000—ಇದನ್ನು ಆಳುತ್ತಿದ್ದ. ಯುವರಾಜನ ಪದವಿ ಕೇವಲ ಅಲಂಕಾರಿಕ (ನಾಮ ಮಾತ್ರ)ವೇ ಆಗಿರದೆ, ಅದು ಕ್ರಿಯಾಶೀಲವಾದುದೂ ಆಗಿತ್ತು ಎಂಬುದನ್ನು ಈ ನಿದರ್ಶನಗಳು ಸಮರ್ಥಿಸುತ್ತವೆ. ಯುವರಾಜರು ಕೆಲವೊಮ್ಮೆ ಪ್ರಾಂತಗಳ ಸಂಪೂರ್ಣ ಮೇಲ್ವಿಚಾರಣೆಯಲ್ಲಿರುತ್ತಿದ್ದರು ಮತ್ತು ಅನೇಕ ವೇಳೆ ಅವರನ್ನು ದಂಡಯಾತ್ರೆಗಳಲ್ಲೂ ಕಳುಹಿಸಲಾಗುತ್ತಿತ್ತು. ಸರ್ಕಾರದ (ಆಡಳಿತ) ಸದಸ್ಯನಾಗಿ ಆಡಳಿತ ವಿಷಯಗಳಲ್ಲಿ ಅವರಿಗೆ ಸಂಪೂರ್ಣ ಅಧಿಕಾರವಿತ್ತು. ಗ್ರಾಮ ಗಳನ್ನು ದಾನ ಮಾಡುವುದು ಮತ್ತು ತೆರಿಗೆ ಮನ್ನಾ ಮಾಡುವುದೂ ಸೇರಿದಂತೆ ಎಲ್ಲ ರಾಜಸ್ಥಾನಮಾನಗಳು ಅವರ ಪಾಲಿಗೆ ಇರುತ್ತಿದ್ದವು. ಮಾರಸಿಂಹನು, ತನ್ನ ತಂದೆ ರಾಜ್ಯಭ್ರಷ್ಟತೆಯಿಂದ ಮುಕ್ತನಾದ ಮೇಲೂ, ತಾನೇ ರಾಜನೆಂಬಂತೆ ಆಡಳಿತಾತ್ಮಕ

1. ಎ.ಇ. XIV, ಪು. 188
2. ಯಾಜ್ದಾನಿ (ಸಂ.) : ಅರ್ಲಿ ಹಿಸ್ಟರಿ ಆಫ್ ಡೆಖನ್, ಪು. 2241
3. ಆನ್ಯುಯಲ್ ರಿಪೋರ್ಟ್, 1934-35, ಪು. 90

ಕರ್ತವ್ಯಗಳನ್ನು ಪೂರ್ಣವಾಗಿ ನಿರ್ವಹಿಸುತ್ತಿದ್ದನು. ಯುವರಾಜನಾಗಿ ಅವನಿಗೆ ಸಮಸ್ತ ರಾಜಾಧಿಕಾರಗಳೂ ಇದ್ದವು. ಜೈನ ಉಪಾಧ್ಯಾಯರಿಗೆ ಅನೇಕ ದಾನಗಳನ್ನು ಮಾಡಿದ್ದು, ತೆರಿಗೆ ಪಾವತಿ ಮಾಡುವುದರಿಂದ ವಿನಾಯಿತಿಗಳನ್ನು ನೀಡಿದ್ದರ ಬಗ್ಗೆ ಮನ್ನೆ ತಾಮ್ರ ಶಾಸನಗಳು ಉಲ್ಲೇಖಿಸುತ್ತವೆ.[1] ಗಂಜಾಂ ದಾನಶಾಸನವು, ಯುವರಾಜನಾಗಿ ಮಾರಸಿಂಹನು ಸರ್ವಮಾನ್ಯವಾಗಿ ಬ್ರಾಹ್ಮಣರಿಗೆ ಗ್ರಾಮಗಳನ್ನು ನೀಡಿದುದರ ಬಗ್ಗೆ ವಿವರಿಸುತ್ತದೆ.[2] ತೆರಿಗೆ ವಿಧಿಸುವುದು ಸೇರಿದಂತೆ ಕಂದಾಯ ಆಡಳಿತ ವಿಷಯಗಳಲ್ಲಿ ಯುವರಾಜನಿಗೆ ಪೂರ್ಣ ಅಧಿಕಾರಗಳು ಇದ್ದವು ಎಂಬುದನ್ನು ಈ ನಿದರ್ಶನಗಳು ಸಮರ್ಥಿಸುತ್ತವೆ. ಹೀಗೆ ಗಂಗರ ಕಾಲದಲ್ಲಿ ಯುವರಾಜರು ಸಕಲ ಅಧಿಕಾರಗಳೊಡನೆ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಲವು ನಿದರ್ಶನಗಳು ನಮಗೆ ಲಭಿಸುತ್ತವೆ. ಅವರಿಗೆ ಆಡಳಿತಾತ್ಮಕ ನಿಯಂತ್ರಣ, ಸೇನಾ ಕರ್ತವ್ಯಗಳು, ಧಾರ್ಮಿಕ ಕರ್ತವ್ಯಗಳು ಮತ್ತು ಎಲ್ಲಾ ಧರ್ಮಗಳ ದೇವಾಲಯಗಳ ನಿರ್ಮಾಣ ಮಾಡಿ ಅನೇಕ ಧಾರ್ಮಿಕ ಸಂಸ್ಥೆಗಳಿಗೆ ದತ್ತಿ ನೀಡುವುದು ಇತ್ಯಾದಿ ಕರ್ತವ್ಯಗಳು ಇದ್ದುವು ಈ ರೀತಿಯಲ್ಲಿ ಯುವರಾಜರು ಸದಾ ಕ್ರಿಯಾಶೀಲರಾಗಿರಬೇಕಾಗಿತ್ತು.

ರಾಷ್ಟ್ರಕೂಟರ ಕಾಲದಲ್ಲಿ ಯುವರಾಜನಿಗೆ ಉತ್ತಮ ಸ್ಥಾನಮಾನವಿತ್ತು ಎಂಬುದು ದಾಖಲೆಗಳಿಂದ ತಿಳಿದು ಬರುತ್ತದೆ. ಆಲ್ಟೇಕರರ ಪ್ರಕಾರ, ರಾಜಕುಮಾರನಿಗೆ ಯುವರಾಜನೆಂದು ಪಟ್ಟಾಭಿಷೇಕ ಮಾಡದ ಹೊರತು ಅವನನ್ನು ಯುವರಾಜ ಎಂದು ಪರಿಗಣಿಸುವಂತಿರಲಿಲ್ಲ. ರಾಜಕುಮಾರನಿಗೆ 24 ವರ್ಷಗಳು ತುಂಬುವವರೆಗೆ ಅವನಿಗೆ ಯುವರಾಜ ಪಟ್ಟ ಕಟ್ಟುತ್ತಿರಲಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.[3] ರಾಜನಿಗೆ ಪುತ್ರ ಸಂತಾನವಿಲ್ಲದಿದ್ದರೆ ಅಥವಾ ಇರುವ ಪುತ್ರ ಅಪ್ರಾಪ್ತ ವಯಸ್ಕನಾಗಿದ್ದರೆ ಮತ್ತು ಆ ಸಮಯದಲ್ಲಿ ಕ್ಷೋಭೆ ತಲೆದೋರಿದ್ದರೆ, ಕೆಲವೊಮ್ಮೆ ರಾಜನ ತಮ್ಮನನ್ನು ಯುವರಾಜನನ್ನಾಗಿ ಮಾಡಲಾಗುತ್ತಿತ್ತು. ಜ್ಯೇಷ್ಠ ಪುತ್ರನಾಗಿರುವುದಷ್ಟೇ ಅಲ್ಲದೆ ಸಾಮರ್ಥ್ಯ ಮತ್ತು ದಕ್ಷತೆ ಇವು ಕೂಡ ಪರಿಗಣನೆಗೆ ಬರುತ್ತಿದ್ದವು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ರಾಷ್ಟ್ರಕೂಟರ ಕಾಲದಲ್ಲಿ ಯುವರಾಜನಿಗೆ ಸಾಮಂತನ ಸ್ಥಾನಮಾನವಿದ್ದಿತು. ಅವನಿಗೆ ಪಂಚ ಮಹಾಶಬ್ದ ಎಂಬ ಬಿರುದು ಕೂಡ ಇದ್ದಿತು. ಯುವರಾಜಾಧಿಕಾರದ ಸಂಕೇತವಾಗಿ ಅವನಿಗೆ ಕಂಠಹಾರ ನೀಡಲಾಗಿರುತ್ತಿತ್ತು ಮೂರನೇ ರಾಷ್ಟ್ರಕೂಟ ಗೋವಿಂದನು ತನ್ನ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ತನಗೆ ನೀಡಲಾದ ಕಂಠಹಾರದಿಂದ ತನಗೆ ಸಮಾಧಾನವಾಯಿತೆಂದು ತನ್ನ ತಂದೆಗೆ ತಿಳಿಸಿದ ವಿಷಯದಿಂದ ಇದು

1. ಎ. ಇ. IX, ಪು. 200
2. ಎ. ಕ; III ಹೊಸ್ರು 92
3. ಆಲ್ಟೇಕರ್, ರಾಷ್ಟ್ರಕೂಟಾಸ್ ಅಂಡ್ ದೇರ್ ಟೈಮ್ಸ್, ಪು. 152

ಸ್ಪಷ್ಟವಾಗುತ್ತದೆ.[1] ಎಲ್ಲ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಸಚಿವ ಮಂಡಲದ ಸಂಪೂರ್ಣ ಸದಸ್ಯನಾಗಿ ಯುವರಾಜ ಇರುತ್ತಿದ್ದನು. ಆಳುವ ಚಕ್ರವರ್ತಿ ಅಥವಾ ರಾಜರು ವಯೋವೃದ್ಧರಾಗಿದ್ದು ಮತ್ತು ನಿವೃತ್ತಿ ಪಡೆಯುವ ಧಾರ್ಮಿಕ ಒಲವುಳ್ಳ (ಮನಃ ಪ್ರವೃತ್ತಿಯ) ವರಾಗಿದ್ದ ಸಂದರ್ಭದಲ್ಲಿ—ಮೊದಲನೆ ಅಥವಾ ಮೂರನೆಯ ಅಮೋಘ ವರ್ಷನಂತೆ—ಯುವರಾಜನು ಆಳುವ ದೊರೆಯ ಎಲ್ಲ ಅಧಿಕಾರಗಳನ್ನು ಚಲಾಯಿಸುತ್ತಿದ್ದನು. ಸಾಮಾನ್ಯವಾಗಿ ಯುವರಾಜನು ರಾಜಧಾನಿಯಲ್ಲಿ ಇರುತ್ತಿದ್ದನು. ನಾವು ಈಗಾಗಲೇ ಗಮನಿಸಿರುವ ಹಿಂದಿನ ಸಂತತಿ (ರಾಜವಂಶ)ಗಳಂತೆ, ರಾಷ್ಟ್ರಕೂಟರ ಕಾಲದಲ್ಲಿ ಯುವರಾಜ ರಾಜಧಾನಿಯ ಹೊರಗೆ ಹೋಗುವಂತೆ ಯಾವಾಗಲೂ ನಿಯೋಜಿಸಲ್ಪಟ್ಟಿಲ್ಲ. ಇದಕ್ಕೆ ಕಾರಣ ರಾಷ್ಟ್ರಕೂಟರ ಕಾಲದಲ್ಲಿ ನಡೆಯುತ್ತಿದ್ದ ಉತ್ತರಾಧಿಕಾರ ಯುದ್ಧಗಳೇ ಇದ್ದಿರಬೇಕು ಎಂದು ಅಲ್ಟೇಕರ್ ಸೂಚಿಸುತ್ತಾರೆ. ಸಾಧಾರಣವಾಗಿ ರಾಷ್ಟ್ರಕೂಟರು ಯುವರಾಜನಿಗಿಂತ ಹೆಚ್ಚಾಗಿ ಅವನ ಕಿರಿಯ ಸೋದರರು ಅಥವಾ ರಕ್ತ ಸಂಬಂಧಿಗಳನ್ನು ನಿಯೋಜಿಸುತ್ತಿದ್ದರು. ಅತೃಪ್ತ ರಕ್ತ ಸಂಬಂಧಿಗಳ ಬಂಡಾಯಗಳ ಬಗ್ಗೆ ರಾಜನಿಗೆ ಸದಾ ಭೀತಿಯಿರುತ್ತಿದ್ದುದರಿಂದ ಆಗಿನ ರಾಜಕೀಯ ಪರಿಸ್ಥಿತಿಗಳಲ್ಲಿ ಯುವರಾಜನಾದವನು ರಾಜಧಾನಿಯಲ್ಲಿ ಇರುವ ಅಗತ್ಯವಿರುತ್ತಿದ್ದು, ಹೀಗೆ ಯುವರಾಜನು ಸಮೀಪವಿರುತ್ತಿದ್ದುದರಿಂದ ರಾಜನಿಗೆ ಸ್ಥೈರ್ಯ–ಧೈರ್ಯಗಳ ಜೊತೆಗೆ ನೆಮ್ಮದಿ ಇರುತ್ತಿತ್ತು.

ಕಲ್ಯಾಣದ ಚಾಲುಕ್ಯರ ಕಾಲಕ್ಕೆ ಬಂದರೆ ನಮಗೆ ಈ ನಿಟ್ಟಿನಲ್ಲಿ ಇನ್ನೂ ಹೆಚ್ಚು ಮಾಹಿತಿ ಲಭಿಸುತ್ತದೆ. ಯುವರಾಜನು ಸಾಮಾನ್ಯವಾಗಿ ಎರಡು ಮುಖ್ಯ ವಿಭಾಗಗಳನ್ನು ಎಂದರೆ ಬೆಳವಲ 300 ಮತ್ತು ಪುಲಿಗೆರೆ 300—ಆಳುತ್ತಿದ್ದುದು ಕಂಡುಬರುತ್ತದೆ. ಯುವರಾಜನಾಗಿ ಎರಡನೆಯ ಸೋಮೇಶ್ವರನು ಯುವರಾಜ ಪದವಿಯ ಸಂಕೇತವಾದ ಕಂಠಹಾರವನ್ನು ಧರಿಸಿದ್ದುದು ಕಂಡುಬರುತ್ತದೆ. ಒಂದು ಮುಖ್ಯವಾದ ಸಂಗತಿಯೆಂದರೆ, ಸಮರ್ಥರಾದ ರಾಜಮನೆತನದವರು ಲಭಿಸದಿದ್ದರೆ ನಂಬಿಕಸ್ಥರಾದ ಅಧಿಕಾರಿಯನ್ನು ಕೂಡ ಯುವರಾಜವಾಗಿ ನೇಮಿಸುತ್ತಿದ್ದರು ಎಂಬುದು. ಇದಕ್ಕೆ ಅತ್ಯುತ್ತಮ ನಿದರ್ಶನವೆಂದರೆ ಯುವರಾಜನಾಗಿ ಬೆಳವೊಲ ಮತ್ತು ಪುಲಿಗೆರೆ 300ನ್ನು ಆಳುತ್ತಿದ್ದನೆಂದು ಹೇಳಲಾಗಿರುವ ಶೋಭನರಸ[2], ಯುವರಾಜನಿಗೆ ನೀಡಲಾಗುತ್ತಿದ್ದ ತರಬೇತಿಗೆ ಸಂಬಂಧಿಸಿದಂತೆ ಖ್ಯಾತ ಕನ್ನಡ ಕವಿ—ರತ್ನತ್ರಯರಲ್ಲಿ ಒಬ್ಬನಾದ—ರನ್ನನ ಸಾಕ್ಷ್ಯಾಧಾರವಿದೆ. ರನ್ನ 'ಗದಾಯುದ್ಧ'ದಲ್ಲಿ, ಶತ್ರು ರಾಜರ ವಿರುದ್ಧ ಯುದ್ಧಗಳಲ್ಲಿ ತನ್ನ ತಂದೆಗೆ ನೆರವಾಗುತ್ತಿದ್ದ ಇರಿವಬೆಡಂಗನ ಬಗ್ಗೆ ಉಲ್ಲೇಖಿಸಿದ್ದಾನೆ. ಈ ಯುವರಾಜನನ್ನು 'ಮಹಾಮಂಡಲೇಶ್ವರ'ನೆಂದು ಮತ್ತು

---

1. ಎ. ಇ. IV, ಪು. 242
2. ಅದೇ. XXXIII ಪು. 181

ಉತ್ತರ ಪಾರಮಾರರ ವಿರುದ್ಧ ಹೋಗುತ್ತಿರುವನು ಎಂದು ಚಿಕ್ಕೆರೂರಿನ ಕ್ರಿ.ಶ. 995ರ ಶಾಸನ ಉಲ್ಲೇಖಿಸಿದೆ.[1] ಚಾಲುಕ್ಯರ ಕಾಲದಲ್ಲಿ ಯುವರಾಜರು ಸಾಮಾನ್ಯವಾಗಿ ಆಡಳಿತಾಧಿಕಾರಿಗಳ ಅಧಿಕಾರದಲ್ಲಿದ್ದುದು ಗಮನಿಸುತ್ತೇವೆ. ಆರನೇ ವಿಕ್ರಮಾದಿತ್ಯನು ಚೋಳ ಸಾಮ್ರಾಜ್ಯದ ಗಡಿಗಳಲ್ಲಿದ್ದ ಗಂಗವಾಡಿ ಮತ್ತು ನೊಳಂಬವಾಡಿ ಪ್ರಾಂತ್ಯಗಳನ್ನು ಆಳುತ್ತಿದ್ದನು. ಈ ಪ್ರಾಂತ ತುಂಬ ಮುಖ್ಯವಾದುದಾಗಿತ್ತು ಮತ್ತು ತುಂಬ ನಂಬಿಕಸ್ಥನಾದ ವ್ಯಕ್ತಿಯನ್ನು ಮಾತ್ರವೇ ಈ ಸ್ಥಳಕ್ಕೆ ನೇಮಿಸಬೇಕಾಗಿತ್ತು. ಆರನೆಯ ವಿಕ್ರಮಾದಿತ್ಯನ ತಮ್ಮ ಜಯಸಿಂಹನು ಯುವರಾಜನಾಗಿದ್ದ ಮತ್ತು ತನ್ನ ಅಣ್ಣನ ವಿರುದ್ಧ ಬಂಡಾಯವೇಳುವವರೆವಿಗೂ ಬೆಳವೊಲ 300, ಪುಲಿಗೆರೆ 300 ಮತ್ತು ಬನವಾಸಿ ನಾಡುಗಳನ್ನು ಆಳುತ್ತಿದ್ದ. ಈ ರೀತಿಯಲ್ಲಿ ಚಾಲುಕ್ಯರ ಕಾಲದಲ್ಲಿ ಯುವರಾಜ ತುಂಬ ಪ್ರಮುಖನಾದ ವ್ಯಕ್ತಿಯಾದ ಮತ್ತು ಈ ಸ್ಥಾನಕ್ಕೆ ಅತ್ಯಂತ ಸಮರ್ಥನಾದ ಪುತ್ರ ಅಥವಾ ಸೋದರನನ್ನು ನೇಮಿಸುವುದು ಪದ್ಧತಿಯಾಗಿತ್ತು. ಅವರಿಗೆ ಮುಖ್ಯವಾದ ಆಡಳಿತ ವಿಭಾಗಗಳನ್ನು ವಹಿಸಲಾಗುತ್ತಿತ್ತು ಹಾಗೂ ದಂಡಯಾತ್ರೆಗಳನ್ನು ಕೈಗೊಳ್ಳುವಂತೆ ಸೂಚಿಸಲಾಗುತ್ತಿತ್ತು.

ಹೊಯ್ಸಳರ ಕಾಲದಲ್ಲಿ, ಯುವರಾಜರ ಅದೇ ಸ್ಥಾನಮಾನ ಮುಂದುವರೆಯಿತು. ಕೆಲವೊಮ್ಮೆ ಅದು ಅಸಂಗತವಾಗಿರುತ್ತಿತ್ತು ; ಏಕೆಂದರೆ ಅವನು ಜಿಲ್ಲೆಯ ಆಡಳಿತಗಾರನಾಗಿಯಷ್ಟೇ ವರ್ತಿಸುತ್ತಿದ್ದ ಹಾಗೂ ಸಾಮಾನ್ಯ ದಂಡನಾಯಕನಿಗಿಂತ ಮೇಲ್ದರ್ಜೆಯವನೂ ಆಗಿರುತ್ತಿರಲಿಲ್ಲ. ಹೊಯ್ಸಳ ರಾಜರು ಯುವರಾಜ ಪದವಿಯನ್ನು ತಮ್ಮ ಪುತ್ರರಿಗೆ ತರಬೇತಿ ನೀಡುವ ಹುದ್ದೆಯಷ್ಟೇ ಎಂದು ಭಾವಿಸಿದ್ದಂತೆ ತೋರುತ್ತದೆ. ವಿಶಾಲವಾದ ಸಾಮ್ರಾಜ್ಯವನ್ನು ಆಳುವಂಥ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವ ಉನ್ನತ ಕರ್ತವ್ಯಭಾರಕ್ಕೆ ಅವರನ್ನು ಸಿದ್ಧಪಡಿಸಲು ತರಬೇತಿ ನೀಡುವಂತೆ ಭಾವಿಸಿದ್ದರು. ಯುವರಾಜರ ಸೇನಾಕರ್ತವ್ಯಗಳ ಪೈಕಿ ಮಹಾಮಂಡಲೇಶ್ವರ, ಅಥವಾ ಸಾಮಂತರ ವಿರುದ್ಧ ರಾಜರ ಸೇನೆಯ ದಂಡಯಾತ್ರೆಯಲ್ಲಿ ಅದರ ಮುಂದಾಳತ್ವ ವಹಿಸುವುದು ಸೇರಿತ್ತು. ಈ ಮಹಾಮಂಡಲೇಶ್ವರರು ಅಥವಾ ಸಾಮಂತರು ಆ ಕಾಲದ ರಾಜಕೀಯ ಸ್ಥಿತಿಗತಿಗಳನ್ನು ಅವಲಂಬಿಸಿ ಪಕ್ಷಗಳನ್ನು ಬದಲಾಯಿಸುತ್ತಿದ್ದುದರಿಂದ ಹೀಗೆ ಮಾಡಬೇಕಾಗುತ್ತಿತ್ತು. ಇಂಥ ಸಂದರ್ಭಗಳಲ್ಲಿ ಯುವರಾಜನ ಬಗ್ಗೆ ರಾಜನಿಗೆ ಸಂಪೂರ್ಣ ಭರವಸೆ ಇರುತ್ತಿದ್ದುದರಿಂದ ಅವನನ್ನೇ ದಂಡಯಾತ್ರೆಗೆ ಕಳುಹಿಸಲಾಗುತ್ತಿತ್ತು. ನಾವು ಹೊಯ್ಸಳರ ಯುವರಾಜರ ಕೆಲವು ಸ್ಪಷ್ಟವಾಗಿರುವ ಪ್ರಕರಣಗಳನ್ನು ಗಮನಿಸಬಹುದು. ಎರೆಯಂಗದೇವನು ಸುದೀರ್ಘಕಾಲ ಯುವರಾಜನಾಗಿದ್ದ ; ಅವನು ಯುವರಾಜನಾಗಿ ಸುಮಾರು 33 ವರ್ಷಗಳ ಕಾಲ ಆಳ್ವಿಕೆ ನಡೆಸಿದಂತೆ ತೋರುತ್ತದೆ. ಮೊದಲನೆಯ ಬಲ್ಲಾಳನು ತನ್ನ

---

1. ಎ. ಇ. XXXIII ಪು. 181

ತಮ್ಮ ವಿಷ್ಣುವರ್ಧನನನ್ನು ಯುವರಾಜನಾಗಿಸಿದ್ದ. ಮೊದಲನೆಯ ಬಲ್ಲಾಳ ಕಾಲವಾದ ನಂತರವಷ್ಟೇ ವಿಷ್ಣುವರ್ಧನನು ರಾಜನಾದ. ವಿಷ್ಣುವರ್ಧನ ತನ್ನ ವಿಜಯದ ನೆನಪಿಗಾಗಿ ವಿಜಯನಾರಸಿಂಹ ಎಂಬ ಹೆಸರನ್ನು ತನ್ನ ಮಗನಿಗೆ ನೀಡಿ ಯುವರಾಜನನ್ನಾಗಿ ಮಾಡಿದ. ಮೊದಲನೆಯ ಶಾಸನದಲ್ಲಿ ಎರಡನೇ ಬಲ್ಲಾಳನನ್ನು 1165ರಲ್ಲಿ ಯುವರಾಜ ಎಂದೇ ಪ್ರಸ್ತಾಪಿಸಿದೆ. ಅದೇ ರೀತಿ ಇಮ್ಮಡಿ ಬಲ್ಲಾಳ ತನ್ನ ಪುತ್ರ ನರಸಿಂಹನಿಗೆ ಕೇವಲ ಆರು ವರ್ಷಗಳಾಗಿದ್ದಾಗಲೇ ಅವನಿಗೆ ಯುವರಾಜ ಪಟ್ಟ ಕಟ್ಟಿದ. ಈ ರೀತಿಯಲ್ಲಿ ಹೊಯ್ಸಳರು ಯುವರಾಜ ಪದವಿಯನ್ನು ನೆಲೆಗೊಳಿಸಿದರು.

ಕೊನೆಯದಾಗಿ, ದೇವಗಿರಿಯ ಸೇವುಣರ ವಿಷಯವನ್ನು ಪರಿಶೀಲಿಸೋಣ. ಈ ಅವಧಿಯಲ್ಲಿ, ಜ್ಯೇಷ್ಠಪುತ್ರನನ್ನು ಅಥವಾ ಅತ್ಯಂತ ಸಮರ್ಥನಾದ ಪುತ್ರನನ್ನು ಯುವರಾಜನನ್ನಾಗಿ ನೇಮಿಸುವ ಪದ್ಧತಿ ಆಚರಣೆಯಲ್ಲಿತ್ತು. ಸಾಧಾರಣವಾಗಿ ಅವನು ರಾಜನೊಡನೆ ಆಡಳಿತಗಾರನಾಗಿ ಸಂಬಂಧಪಡೆದಿರುತ್ತಿದ್ದ ಮತ್ತು ಆಡಳಿತದಲ್ಲಿ ಅನುಭವ ಪಡೆಯುತ್ತಿದ್ದ. ಸಿಂಘಣನ ಪುತ್ರ ಜೈತುಗಿಯು ಆಡಳಿತಗಾರನಾಗಿದ್ದ. ಜೈತುಗಿಯ ಪುತ್ರ ಕೃಷ್ಣನು ಹೊಯ್ಸಳರ ವಿರುದ್ಧದ ಸಿಂಘಣನ ದಂಡಯಾತ್ರೆಗಳಲ್ಲಿ ಪಾಲ್ಗೊಂಡಿದ್ದ. ಕೃಷ್ಣನ ಸೋದರ ಮಹಾದೇವನು ಕೃಷ್ಣನ ಯುವರಾಜನಾಗಿದ್ದ ಮತ್ತು ಅವನ ದಂಡಯಾತ್ರೆಗಳಲ್ಲಿ ಭಾಗವಹಿಸಿದ್ದ. ರಾಮಚಂದ್ರನ ಪುತ್ರರಾದ ಸಿಂಘಣ ಮತ್ತು ಭಿಲ್ಲಮರು ಕೂಡ ಅವನ ದಂಡಯಾತ್ರೆಯಲ್ಲಿ ನೆರವು ನೀಡಿದ್ದರು. ದೊರೆ ಸಿಂಘಣನಿಗೆ ಸಮರಗಜಗಳ ನಿರ್ವಹಣೆಯ ಕಲೆಯಲ್ಲಿ ಜನಾರ್ದನನಿಂದ ಅವನು ಯುವರಾಜನಾಗಿರುವಾಗಲೇ ತರಬೇತಿ ದೊರೆತಿತ್ತು. ಹಾಗಾಗಿ ಸೇವುಣರ ಕಾಲದಲ್ಲಿಯೂ ಅದೇ ಪರಿಸ್ಥಿತಿ ಮುಂದುವರೆಯಿತು.

ಮೇಲ್ಕಂಡ ಅಂಶಗಳಿಂದ ಈ ಮುಂದಿನ ತೀರ್ಮಾನಗಳಿಗೆ ಬರಬಹುದು ಎಂದು ತೋರುತ್ತದೆ. ಕರ್ನಾಟಕದ ರಾಜ್ಯಾಡಳಿತ ಕ್ರಮದಲ್ಲಿ ಯುವರಾಜನ ಸ್ಥಾನಮಾನವನ್ನು ರಾಜ್ಯ (ಆಡಳಿತ)ದ ಮುಖ್ಯ ಅಂಶವೆಂದು ಮಾನ್ಯಮಾಡಲಾಗಿತ್ತು. ರಾಜರು ಭವಿಷ್ಯದ ಘರ್ಷಣೆಗಳನ್ನು ತಪ್ಪಿಸುವ ಸಲುವಾಗಿ ಸಾಮಾನ್ಯವಾಗಿ ತಾವು ಇರುವಾಗಲೇ ತಮ್ಮ ನಂತರದ ರಾಜ ಯಾರು ಎಂಬುದನ್ನು ನಿರ್ಧರಿಸುವ ಬಗ್ಗೆ ವಿಶೇಷ ಗಮನಹರಿಸುತ್ತಿದ್ದರು. ಸಾಧಾರಣವಾಗಿ ಜ್ಯೇಷ್ಠಪುತ್ರನಿಗೆ ಈ ಹುದ್ದೆ ಪ್ರಾಪ್ತವಾಗುತ್ತಿತ್ತು; ಆದರೆ ದಕ್ಷತೆಯನ್ನು ಸಹ ಮುಖ್ಯವಾಗಿ ಪರಿಗಣಿಸಲಾಗುತ್ತಿತ್ತು. ರಾಜ್ಯದ ಹಿತಾಸಕ್ತಿಗಳಿಂದ ಅನ್ಯತ್ರ ಅಗತ್ಯವಾದಲ್ಲಿ ಇತರ ಪುತ್ರರನ್ನು ಯುವರಾಜರನ್ನಾಗಿ ನೇಮಿಸಲು ಕೂಡ ರಾಜ ಹಿಂಜರಿಯುತ್ತಿರಲಿಲ್ಲ. ಪಟ್ಟಾಭಿಷೇಕ ವಿಜೃಂಭಣೆಯಿಂದ ನಡೆಯುತ್ತಿತ್ತು; ಅದನ್ನು ಯುವರಾಜನೇ ತಮ್ಮ ಭವಿಷ್ಯದ ದೊರೆ ಎಂದು ಅಧಿಕಾರಿಗಳು ಹಾಗೂ ಸಾರ್ವಜನಿಕರು ಘೋಷಿಸುವಂಥ ಒಂದು ವಿಶೇಷ ಅವಕಾಶವಾಗಿಸಿಕೊಳ್ಳಲಾಗುತ್ತಿತ್ತು. ಅವರನ್ನು ಮುಖ್ಯವಾದ ಹಾಗೂ ಸೂಕ್ಷ್ಮವಾದ (ಆಯಕಟ್ಟಿನ) ರಾಜಕೀಯ ಪ್ರದೇಶಗಳ ಆಡಳಿತಾಧಿಕಾರಿಗಳನ್ನಾಗಿ

ನೇಮಕ ಮಾಡಲಾಗುತ್ತಿತ್ತು; ಇದರಿಂದ ಅವರು ಶತ್ರುಗಳ ಬಗ್ಗೆ ಕಟ್ಟೆಚ್ಚರ ವಹಿಸಬಹುದಾಗಿತ್ತು. ಯುವರಾಜನಿಗೆ ತನ್ನ ಉನ್ನತ ಹುದ್ದೆಯ ಸಂಕೇತವಾಗಿ ಕಂಠಹಾರವನ್ನು ನೀಡಲಾಗುತ್ತಿತ್ತು. ಅವರು ದಂಡೆಯಾತ್ರೆಗಳಲ್ಲೂ ಕೂಡ ಪಾಲ್ಗೊಳ್ಳುತ್ತಿದ್ದರು. ಆ ಮೂಲಕ ಸಮರ ಕಾರ್ಯಾಚರಣೆಗಳ ಅಗತ್ಯ ತರಬೇತು ಪಡೆಯುತ್ತಿದ್ದರು. ಈ ರೀತಿಯಲ್ಲಿ ಯುವರಾಜನ ಸ್ಥಾನ (ಹುದ್ದೆ) ಭವಿಷ್ಯದ ರಾಜತ್ವಕ್ಕಾಗಿ ಸ್ವಲ್ಪಮಟ್ಟಿಗೆ ಶಿಷ್ಯವೃತ್ತಿಯಿದ್ದಂತೆ ಇರುತ್ತಿತ್ತು. ಪ್ರಾಚೀನ ಕರ್ನಾಟಕದಲ್ಲಿ ವಿವಿಧ ರಾಜರ ಮತ್ತು ರಾಜ್ಯಗಳ ಸೂಕ್ತವಾದ ಆಳಿಕೆ ಮತ್ತು ಅಭಿವೃದ್ಧಿಗಾಗಿ ಈ ತರಬೇತಿ ಅಗತ್ಯವಾಗಿತ್ತು. ಇದು ಅರ್ಥಶಾಸ್ತ್ರ ಕುರಿತು ಲೇಖಕರು ಪ್ರತಿಪಾದಿಸಿದ್ದ ಅಖಿಲ ಭಾರತ ನೀತಿಗೆ ಅನುಗುಣವಾಗಿತ್ತು.

ಕೆ. ಎಂ. ಮೈತ್ರಿ

ಬೀದರ ಜಿಲ್ಲೆಯ ಗೊಂಡಜಾತಿ ಪ್ರಮಾಣ ಪತ್ರದ ಕಗ್ಗಂಟು

[ಈ ಲೇಖನ ಶಾಸ್ತ್ರೀಯವಾಗಿದ್ದು ಗೊಂಡಪದದ ಉತ್ಪತ್ತಿ ಹಾಗೂ ಅರ್ಥ ಕುತೂಹಲಕಾರಿಯಾಗಿದೆ. ಬೀದರ ಜಿಲ್ಲೆಯ ಗೊಂಡ ಜನಾಂಗಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಲೇಖಕರು ಸಕಾರಣವಾಗಿ ಇಲ್ಲಿ ವಾದಿಸಿದ್ದಾರೆ. –ಸಂ.]

ಬೀದರ್ ಕರ್ನಾಟಕದ ಒಂದು ಪುಟ್ಟ ಜಿಲ್ಲೆ. ಅಲ್ಲಿಯ ಮೂಲನಿವಾಸಿಗಳು ಗೊಂಡರು. ಅವರು ದ್ರಾವಿಡ ಮೂಲದವರು. ಅವರಿಗೆ ಧನಗರ ಮತ್ತು ಕುರುಬ ಎಂಬ ಹೆಸರುಗಳಿಂದಲೂ ಪರಿಚಯಿಸಲಾಗುವುದು. ಅವು ಅವರ ಕಸಬಾಧಾರಿತ ಹೆಸರುಗಳು. ಸಂವಿಧಾನಾತ್ಮಕ ಸೌಲಭ್ಯಗಳ ಕಲ್ಪನೆ ಮೂಡುತ್ತಿದ್ದಂತೆ ಅವರು ಗೊಂಡ (ಪರಿಶಿಷ್ಟ ವರ್ಗ) ಜಾತಿ ಪ್ರಮಾಣ ಪತ್ರ ಪಡೆಯಲಾರಂಭಿಸಿದ್ದಾರೆ. ಆದರೆ ಸರಕಾರಿ ಅಧಿಕಾರಿಗಳಿಗೆ ಇದೊಂದು ಬಿಡಿಸಲಾಗದ ಒಗಟಾಗಿದೆ. ಧನಗರ ಹಾಗೂ ಕುರುಬ ಎಂಬ ಬೇರೆ ಬೇರೆ ಹೆಸರುಗಳಿಂದ ಪರಿಚಯಗೊಳ್ಳುವ ಗೊಂಡರು ವಾಸ್ತವಿಕವಾಗಿ ಗೊಂಡರೇ–ಎನ್ನುವ ಸಾರ್ವಜನಿಕರ ಪ್ರಶ್ನೆಯೇ ಈ ಒಗಟಾಗಿದೆ. ಆ ಒಗಟು ಅಥವಾ ಕಗ್ಗಂಟು ಬಿಡಿಸುವ ಪ್ರಯತ್ನವೇ ಈ ಲೇಖನದ ಉದ್ದೇಶವಾಗಿದೆ.

ಬೀದರ ಜಿಲ್ಲೆಯ ಗೊಂಡ ಜಾತಿ ಪ್ರಮಾಣ ಪತ್ರದ ಒಗಟನ್ನು ಬಿಡಿಸುವ ಮುನ್ನ ಗೊಂಡ ಪದದ ನಿಷ್ಪತ್ತಿ ಹಾಗೂ ಗೊಂಡರೆಂದರೆ ಯಾರು? ಎಂಬುದು ಅರಿಯುವುದು ಅವಶ್ಯಕ.

ಗೊಂಡ ಪದದ ನಿಷ್ಪತ್ತಿ ಮತ್ತು ಅರ್ಥ

'ಗೊಂಡ' ಪದದ ಉತ್ಪತ್ತಿ "ಬಗೆ ಹರಿಯದೆ ನೆನೆಗುದಿಯಲ್ಲಿರುವುದೆಂದು'' ಹಲವಾರು ತಜ್ಞರ ಅಭಿಪ್ರಾಯವಾಗಿದೆ. 'ಗೊಂಡ' ಶಬ್ದವು ತೆಲಗು ಭಾಷೆಯ 'ಕೊಂಡ' ಎಂಬ ಪದದಿಂದ ಬಂದದ್ದೆಂದು ಭಾಷಾ ವಿಜ್ಞಾನಿಗಳ ಅಭಿಪ್ರಾಯ.

"ಕೊಂಡ" ಎಂದರೆ ತೆಲಗು ಭಾಷೆಯಲ್ಲಿ ಗುಡ್ಡ ಅಥವಾ ಬೆಟ್ಟ (ಪರ್ವತ) ಎಂದು ಅರ್ಥ. ಕಾಲ ಕ್ರಮೇಣ 'ಕ' ಕಾರ ಘೋಷ ಧ್ವನಿಯಾಗಿ 'ಗ' ಕಾರವಾಗಿ 'ಗೊಂಡ' ಎಂದು ರೂಪಾಂತರ ಹೊಂದಿರಬೇಕೆಂದು ಹಿಸ್ಲೋಪರ ವಾದವಾಗಿದೆ (ರಸೇಲ್ ಆರ್ ವಿ: 1975 ; 42—43).

ಜನರಲ್ ಕನ್ನಿಂಗ್ ಹ್ಯಾಮರು 'ಗೊಂಡ' ಪದವು ಗೌಡ ಎಂಬ ಶಬ್ದದಿಂದ ಉತ್ಪನ್ನವಾಗಿ ಅದು ಗೌರ, ಗೋದ ಹಾಗೂ ಕೋದಗಳಾಗಿ ಪರಿವರ್ತನೆ ಹೊಂದಿ ಅನಂತರ 'ಗೊಂಡ' ಆಯಿತೆಂದು ಹೇಳುತ್ತಾರೆ (ವಿಶ್ವಕೋಶ : ಸಂಪುಟ : 6 : 1973 : 528—529).

'ಗೊಂಡ' ಎಂಬ ಪದವು 'ಗೋ' ಮತ್ತು 'ಅಂಡ' ಎಂಬ ಎರಡು ಶಬ್ದಗಳಿಂದ ಕೂಡಿದೆ. 'ಗೋ' ಎಂದರೆ 'ಭೂಮಿ' ಮತ್ತು 'ಅಂಡ' ಎಂದರೆ ಪುತ್ರ ಎಂದರ್ಥ. 'ಗೊಂಡ' ಪದದ ಅರ್ಥ ಭೂಮಿಯ ಪುತ್ರ ಎಂದಾಗುತ್ತದೆ (ವಿಠಲಸಿಂಹ ಧುರ್ವೆ : 1990 : 7).

ತಜ್ಞರ ವಾದಗಳಾಗಲಿ, ಅಥವಾ ಅಭಿಪ್ರಾಯಗಳಾಗಲಿ ಅಸತ್ಯವೆಂದು ಅಲ್ಲಗಳೆಯುವಂತಿಲ್ಲ. 'ಗೊಂಡ' ಪದವು ಮೂಲತ: ಬೆಟ್ಟ, ಗುಡ್ಡ ಪ್ರದೇಶವಾಚಕವಾಗಿ ನಂತರ ಜನಾಂಗವಾಚಕವಾಗಿರುವುದು ಕಂಡುಬರುವುದು.

ಮೂಲವಾಗಿ ಗೊಂಡ ಪದದ ಉದಯವು ಕನ್ನಡ ಭಾಷೆಯ ಜನಾಂಗದಿಂದಾಗಿರಲು ಸಾಧ್ಯತೆಗಳಿವೆ. ಅದು 'ಗೊ' ಮತ್ತು ಅಂಡ ಎಂಬ ನುಡಿಗಟ್ಟಿನಿಂದಾಗಿ ಸೃಷ್ಟಿ, ಸ್ಥಿತಿ, ಲಯಗಳ ಪ್ರತೀಕ ಹಾಗೂ ಪ್ರತ್ಯಯವಾಗಿ ಬಳಕೆಯಾಗುವುದು.

ಗೊಂಡ ಪದದ ಒಳಾರ್ಥವನ್ನು ಒಡೆದು ನೋಡಿದಾಗ ಅದರ ಅರ್ಥ ಸ್ಪಷ್ಟವಾಗುವುದು. ಅದರ ಮೂಲ 'ಗೋ+ಅ' ಎಂಬೆರಡಕ್ಷರಗಳಿಂದ ಉಂಟಾಗಿರಬಹುದು. ಕನ್ನಡ ನಿಘಂಟುಗಳಲ್ಲಿ 'ಗೋ' ಎಂದರೆ ಗೋವು, ಭೂಮಿ, ಬೆಟ್ಟ ಮತ್ತು 'ಅ' ಎಂದರೆ ಅಜ (ಆಡು ಅಥವಾ ಮೇಕೆ, ಮೇಷ ಅಥವಾ ಕುರಿ) ಎಂಬರ್ಥಗಳೂ ಇವೆ. ಗೋವು (ದನ) ಗಳ ಪಾಲಕರು ಗೋಪಾಲಕರು ಅಥವಾ ದ(ಧ)ನಗಾರರಾದರೆ ; ಅಜ (ಕುರಿ)ಗಳ ಪಾಲಕರು ಅಜಪಾಲಕರು ಅಥವ ಕುರಿಗಾರರು ಆಗಿರುವರು. ಕುರಿಗಾರರು, ದ (ಧ)ನಗಾರರು ಬೇರೆಯಲ್ಲ, ಅವರು ಮೂಲತಃ ಪಶುಪಾಲಕರೆಂದರ್ಥ. 'ಗೋ' ಎಂದರೆ 'ಭೂಮಿ' ಅದರಂತೆ 'ಕುರು' ಎಂದರೂ ಭೂವಿಶೇಷ ಆದುದರಿಂದ ಗೋಪನೆಂದರೂ ಭೂಪತಿ ಕುರು(ಂ)ಬನೆಂದರೂ ಭೂಪತಿ (ಜೋಶಿ ಶಂ,ಬಾ : 1966 : 37).

'ಗೋ' ಎಂದರೆ 'ಭೂಮಿ' ಅದು ಗೋಲಾಕಾರವಾಗಿದೆ. 'ಅ' ಎಂದರೆ 'ಆಡು' ಅಥವ ಕುರಿ ಅವುಗಳ ಹಿಕ್ಕೆಯು ಗೋಲ (ಅಂಡ) ಆಕಾರವಾಗಿದ್ದು ಭೂಮಿಯ ಪ್ರತಿ ರೂಪವಾಗಿದೆ. ಹೀಗೆ ಗೋ+ಅಂಡ, ಗೋಂಡ, ಗೊಂಡ ಎಂದು ಎನಿಸಿರಲು ಸಾಧ್ಯತೆಗಳಿವೆ.

‘ಗೊಂಡಾರಣ್ಯ’ ಈ ಪದದಲ್ಲಿ ಭಿನ್ನ ಭಾಷೆಯ ಎರಡು ಶಬ್ದಗಳಿವೆ. ಗೊಂಡ+ಅರಣ್ಯ. ಒಂದು ದೇಶಿಯ ನುಡಿ ಇನ್ನೊಂದು ಸಂಸ್ಕೃತ ಪದ. ‘ಗೊಂಡಾರಣ್ಯ’ ಎಂಬೀ ಬಗೆಯ ಪದ+ಪ್ರಯೋಗವು ಇವೆರಡೂ ಜನ ಒಗ್ಗಿಕೊಂಡು ಒಡಗೂಡಿ ಬಾಳತೊಡಗಿದುದರ ಸಂಕೇತವಾಗಿದೆ.

ಗೊಂಡರು ಗೊಂಡಾರಣ್ಯದ ಮೂಲನಿವಾಸಿಗಳು. ಪೃಥ್ವಿಯ 5 ಖಂಡಗಳಿಗೆ ಗೊಂಡಾನಾ ಖಂಡಗಳೆಂದು ಪರಿಚಯಿಸುವರು. ಅವು: (1) ಏಷ್ಯಾ (ಭಾರತ) (2) ಆಫ್ರಿಕಾ (3) ದಕ್ಷಿಣ ಅಮೇರಿಕ (4) ಅಂಟಾರ್ಟಿಕಾ (5) ಆಸ್ಟ್ರೇಲಿಯ. ಗೊಂಡಾನದ ಆದಿ ಜನಾಂಗವೂ ಗೊಂಡರೆ. ಅವರು ಬೇಟೆಗಾರಿಕೆ, ಪಶುಪಾಲನೆಯಿಂದ ನಿಧಾನವಾಗಿ ಕೃಷಿಯತ್ತ ಕೂಡಿಕೊಳ್ಳುತಿದ್ದಾರೆ.

ಗೊಂಡರ ಹುಟ್ಟಿನ ಬಗ್ಗೆ ಹಲವಾರು ಐತಿಹ್ಯಗಳು, ಪೌರಾಣಿಕ ಮತ್ತು ದಂತಕಥೆಗಳಿವೆ. ಅವುಗಳಲ್ಲೊಂದು ಹೀಗಿದೆ: “ಮುದ್ದುಗೊಂಡ ಮುದ್ದಮ್ಮರಿಂದ ಗೊಂಡ ಜನಾಂಗ ಹುಟ್ಟಿತು. ಆದಿಗೊಂಡನು ಮುದ್ದುಗೊಂಡನ ಮಗ. ಆದಿಗೊಂಡನ ಹೆಂಡತಿ ಆದಮ್ಮ. ಅವರ ಪುತ್ರರಾದ ಅಮರಗೊಂಡ, ಶಿವಗೊಂಡ, ಬೆಟ್ಟದ ಬೀರುಗೊಂಡ, ಮಾರುಗೊಂಡ, ನೊರಡಿ ಮುದ್ದುಗೊಂಡ, ಕಡೆ ಹುಟ್ಟಿದ ಉಂಡಾಡಿ ಪದ್ಮಗೊಂಡ” (ಚನ್ನಮಲ್ಲಿಕಾರ್ಜುನ : 1958 : 347) ಇವರ ವಂಶ ಜರಿಗೊಂಡರೆಂದು ಹಾಲ್ಮತ ಪುರಾಣದಲ್ಲಿ ಉಲ್ಲೇಖಗೊಂಡಿದೆ. ಹೀಗೆ ‘ಗೊಂಡ’ ಪದ ಪ್ರತ್ಯಯಗೊಂಡ ಹೆಸರುಗಳುಳ್ಳ ಸಾಂಪ್ರದಾಯಿಕ ಪಶುಪಾಲಕರೇ ‘ಗೊಂಡ’ ಜನಾಂಗವೆಂದು ಸ್ಪಷ್ಟವಾಗುವುದು.

“ಗೊಂಡರು ರಾಜಪುತ್ರರು ಆದರೆ ಬುಡಕಟ್ಟಿನವರು. ಅವರು ಸಾಮಾನ್ಯವಾಗಿ ಬೀದರ್, ಗುಲಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ವಾಸಿಸುವರು ವಾಸ್ತವದಲ್ಲಿ ಅವರು ಆಂಧ್ರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಕಂಡು ಬರುವರು. ಇಂದಿಗೂ ಅವರಲ್ಲಿ ಖಂಡಗೊಂಡ, ಬೀರಗೊಂಡ, ಜಟಗೊಂಡ, ಹುಲಗೊಂಡ, ಮಲಗೊಂಡ, ಚನಗೊಂಡ, ರಾಮಗೊಂಡ, ತುಳಜಗೊಂಡ, ಶಿವಗೊಂಡ, ಶಣಗೊಂಡ ಎಂಬೀಗೊಂಡ ಪದ ಪ್ರತ್ಯಯಗೊಳ್ಳುವ ಹೆಸರುಗಳು ಕಂಡು ಬರುತ್ತವೆ. ಅವರ ಹಲವಾರು ಸಂಪ್ರದಾಯಗಳು ಹಾಗೂ ಹವ್ಯಾಸಗಳು ಕುರುಬ ಜನಾಂಗಕ್ಕೆ ಹೋಲಿಕೆಯಾಗುತ್ತವೆ” (ಡಾ.ಶಶಿ.ಎಸ್.ಎಸ್. 1978 ; 61). ಗೊಂಡರ ಪೌರಾಣಿಕ ಅಂಶಗಳಿಗೆ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಡಾ. ಎಸ್. ಎಸ್. ಶಶಿಯವರ ಸಂಶೋಧಿತ ಅಂಶಗಳು ಪುಷ್ಟಿ ನೀಡುತ್ತವೆ.

ಬೀದರ್ ಜಿಲ್ಲೆಯ ಗೊಂಡರು ಪಶುಪಾಲಕರು. ಕುರಿ ಹಾಗೂ ದನಗಳ ಪಾಲನೆಯಿಂದಾಗಿ ಅವರಿಗೆ ಕುರುಬ ಮತ್ತು ದ(ಧ)ನಗರ ಎಂತಲೂ ಕರೆಯುವುದುಂಟು. ಆಂಧ್ರಪ್ರದೇಶ ಹಾಗೂ ಮಧ್ಯಪ್ರದೇಶದ ಗೊಂಡರಿಗೂ ಕಸುಬಾಧಾರಿತ ಪದಗಳು ಬಳಕೆಯಾಗುವುವು. ಉದಾಹರಣೆ ಕೋಯತ್ತುರಗೊಂಡ (ಕುರುಬ), ಗೋವಾರಿ

ಗೊಂಡ (ದನಗಾರ), ರಾಜಗೊಂಡ ಇತ್ಯಾದಿ 42 ಉಪಸಂಗಡಗಳು ಗೊಂಡ ಜನಾಂಗಕ್ಕೆ ಸಂಬಂಧಿಸಿವೆ.

ಭೌಗೋಳಿಕ ಪರಿಸರ

ಬೀದರ್ ಜಿಲ್ಲೆಯು ಆಂಧ್ರಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಗಡಿಗಳಿಂದ ಆವೃತಗೊಂಡಿದೆ. ಅದು 17° 35′ ಹಾಗೂ 18° 25′ ಉತ್ತರ ಅಕ್ಷಾಂಶ ಹಾಗೂ 76° 42′ ಮತ್ತು 77° 39′ ಪೂರ್ವ ರೇಖಾಂಶಗಳ ನಡುವೆ ಗುರುತಿಸಲಾಗುತ್ತದೆ. ಅದರ ಭೂವಿಸ್ತೀರ್ಣ 5448 ಚ ಕಿ. ಮೀಟರಾಗಿದ್ದು ಕರ್ನಾಟಕದ ಭೂವಿಸ್ತೀರ್ಣದಲ್ಲಿ ಅದರ ಸ್ಥಾನ 17 ನೆಯದಾಗಿದೆ. ಅದು ಸಮುದ್ರಮಟ್ಟದಿಂದ ಸರಾಸರಿ 914 ಮೀಟರ್ ಎತ್ತರದಲ್ಲಿದೆ. ಅದರೆ ಶೇಕಡ 80 ರಷ್ಟು ಪ್ರದೇಶ ಗೋದಾವರಿ ಜಲಾನಯನಕ್ಕೆ ಸಂಬಂಧಿಸಿದೆ. ಹವಾಮಾನ ಹಿತಕರವಾಗಿದ್ದು ಸಣ್ಣ ಪುಟ್ಟ ಬೆಟ್ಟಗಳಿಂದ ಕೂಡಿದೆ. ಭೌಗೋಳಿಕ ಪ್ರದೇಶದ ಭಿನ್ನತೆಯಿಂದಾಗಿ ಕಸುಬು, ಭಾಷೆ ಹಾಗೂ ಜನಾಂಗದ ಸಂಸ್ಕೃತಿಯಲ್ಲಿಯೂ ಭಿನ್ನತೆ ಕಂಡು ಬರುವುದು ಸರ್ವೇ ಸಾಮಾನ್ಯ. ಆದಿವಾಸಿಗಳು ಪ್ರಕೃತಿ ಪ್ರಿಯರು, ಸರಳ ಜೀವಿಗಳು ಹಾಗೂ ಕಠಿಣ ಪರಿಶ್ರಮಿಗಳಾಗಿರುವರು.

ಜನಸಂಖ್ಯೆ

ಪ್ರಸ್ತುತ ಅಧ್ಯಯನದ ಪ್ರಕಾರ ಬೀದರ್ ಜಿಲ್ಲೆಯ 540 ಪ್ರದೇಶ (ಗ್ರಾಮ) ಗಳಲ್ಲಿ ಗೊಂಡರು ನೆಲೆಸಿರುತ್ತಾರೆ. ಅವರ 14,835 ಕುಟುಂಬಗಳಲ್ಲಿ 97,531 ಜನರಿದ್ದು, ಅದರಲ್ಲಿ 51,401 ಪುರುಷರು ಹಾಗೂ 46,130 ಸ್ತ್ರೀಯರಿದ್ದಾರೆ. ಜಿಲ್ಲೆಯಲ್ಲಿ ಗೊಂಡರ ಜನಸಾಂದ್ರತೆ ಪ್ರತಿ ಕಿ.ಮೀಟರಿಗೆ 18 ; ಅವರಲ್ಲಿ ಶೇಕಡ 97 ರಷ್ಟು ಗ್ರಾಮೀಣ ಗುಡ್ಡಗಾಡುಗಳಲ್ಲಿ ನೆಲೆಸಿದರೆ, ಕೇವಲ ಶೇಕಡ 3 ರಷ್ಟು ಮಾತ್ರ ನಗರವಾಸಿಗಳಾಗಿರುತ್ತಾರೆ.

ಗೊಂಡರು ಸಾಂಪ್ರದಾಯಿಕ ಅಲೆಮಾರಿ ಪಶುಪಾಲನೆಯಿಂದ ವಿಮುಖರಾಗುತ್ತ ಕೃಷಿ ಕಾರ್ಮಿಕರಾಗಿ ಕೃಷಿಕರಾಗಿ ಪರಿವರ್ತನೆಗೊಳ್ಳುತಿದ್ದಾರೆ. ಬೃಹತ್ ಕೈಗಾರಿಕೆಗಳಿಂದಾಗಿ ಗೊಂಡರ ಗೃಹಕೈಗಾರಿಕೆಯಾದ ಕಂಬಳಿ ನೆಯ್ಗೆ ನೆಲಕಚ್ಚಿದೆ. ಗ್ರಾಮೀಣ ಗುಡ್ಡಗಾಡುಗಳಲ್ಲಿ ಇಂದಿಗೂ ಗೊಂಡರಲ್ಲಿ ಅಧಿಕ ಪಶುಪಾಲನೆ ಕಂಡುಬರುತ್ತದೆ.

ಗೊಂಡರ ಸಾಂಪ್ರದಾಯಿಕ ಕಸುಬಿನಲ್ಲಿ ವ್ಯತ್ಯಾಸವಾದಂತೆ ಅವರ ಜೀವನ ವಿಧಾನದಲ್ಲಿಯೂ ವ್ಯತ್ಯಾಸವಾಗುವುದರಿಂದ ಆದಿವಾಸಿಗಳ ಲಕ್ಷಣಗಳು ಮರೆಯಾದುದು ಸಾರ್ವತ್ರಿಕ ಸತ್ಯವಾಗಿದೆ. ಪರಿಸರಕ್ಕೆ ತಕ್ಕಂತೆ ವ್ಯಕ್ತಿ ಬದಲಾಗುವುದರಲ್ಲಿ ತಪ್ಪೇನಿದೆ ? ಬದಲಾಗುವ ವೈಜ್ಞಾನಿಕ ಯುಗಕ್ಕೆ ಸ್ಪಂದಿಸಲೆಂದೇ ಸರಕಾರ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಸಂವಿಧಾನಾತ್ಮಕ ಸೌಲಭ್ಯಗಳನ್ನು ಕಲ್ಪಿಸಿದೆ.

ಆದರೆ ಬೀದರ್ ಜಿಲ್ಲೆಯಲ್ಲಿಯ ಪರಿಶಿಷ್ಟ ವರ್ಗದವರಿಗೆ ಸಂವಿಧಾನಾತ್ಮಕ ಸೌಲಭ್ಯಗಳನ್ನು ಪೂರೈಸಲು ಸರಕಾರ ಮೀನಮೇಷ ಮಾಡುತ್ತಿರುವುದು ವಿಪರ್ಯಾಸವೇ ಸರಿ.

ಆದಿವಾಸಿಗಳ ಗುಣಲಕ್ಷಣಗಳ ಆಧಾರದ ಮೇಲೆ ಭಾರತದ ಸಂವಿಧಾನ ಪ್ರಪ್ರಥಮವಾಗಿ 1950ರ ಸೆಪ್ಟೆಂಬರ್ 6 ರಂದು ಹೈದರಾಬಾದ್ ರಾಜ್ಯದ ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ 9 ಬುಡಕಟ್ಟುಗಳನ್ನು ಸೇರಿಸಿತ್ತು. ಅವುಗಳಲ್ಲಿ ಗೊಂಡ (ನೈಕಪೋಡ ಮತ್ತು ರಾಜಗೊಂಡ ಸೇರಿ) ಬುಡಕಟ್ಟು ಕ್ರ. ಸಂಖ್ಯೆ 4 ರಲ್ಲಿ ಕಂಡುಬರುತ್ತದೆ. ಬೀದರ್, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳು 1956ರ ನವೆಂಬರ 1ರ ವರೆಗೆ ಹೈದರಾಬಾದ್ ರಾಜ್ಯಕ್ಕೆ ಸೇರಿದ್ದವು ಭಾರತದಲ್ಲಿ ಜನಗಣತಿ ಪ್ರಾರಂಭವಾದಾಗಿನಿಂದಲೂ ಬೀದರ್, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಗೊಂಡ ಬುಡಕಟ್ಟಿನವರ ಉಲ್ಲೇಖವಿದೆ. ಭಾಷಾವಾರು ಪ್ರಾಂತ ರಚನೆಯಲ್ಲಿ ಹೈದರಾಬಾದ ರಾಜ್ಯದ 3 ; ಮುಂಬೈ ಪ್ರಾಂತದ 4 ; ಮದ್ರಾಸ್ ರಾಜ್ಯದ 2 ಜಿಲ್ಲೆಗಳು ಹಾಗೂ ಕೊಡಗು ರಾಜ್ಯದ ಕೊಡಗು ಹೀಗೆ ಒಟ್ಟು 10 ಜಿಲ್ಲೆಗಳು ಮೈಸೂರು ರಾಜ್ಯಕ್ಕೆ ಸೇರಿ ಒಟ್ಟು 19 ಜಿಲ್ಲೆಗಳ ಮೈಸೂರು ರಾಜ್ಯವಾಗಿ ರೂಪುಗೊಂಡಿತು. ಆದರೆ ಮೈಸೂರು ರಾಜ್ಯದ 19 ಜಿಲ್ಲೆಗಳಲ್ಲಿ ಬೀದರ್ ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಜಿಲ್ಲೆಗಳಲ್ಲಿ 1951ರ ಜನಗಣತಿಯಲ್ಲಿ ಗೊಂಡರ ಉಲ್ಲೇಖವಿಲ್ಲ.

ಭಾಷಾವಾರು ಪ್ರಾಂತರಚನೆಯಿಂದಾಗಿ ರಾಜ್ಯಗಳ ಭೌಗೋಳಿಕ ಚಿತ್ರಣ ವ್ಯತ್ಯಾಸಗೊಂಡಿತು. ಹೀಗಾಗಿ ಭಾರತ ಸರಕಾರ ಸಂವಿಧಾನದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಪರಿಷ್ಕೃತ ಪಟ್ಟಿಯೊಂದನ್ನು 29ನೇ ಅಕ್ಟೋಬರ್ 1956 ರಂದು ಹೊರಡಿಸಿತು. ಅದರಂತೆ ಬೀದರ, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಿಗೆ ಸೀಮಿತಗೊಂಡ ಗೊಂಡ (ನೈಕಪೋಡ ಮತ್ತು ರಾಜಗೊಂಡ ಸೇರಿ) ಬುಡಕಟ್ಟು ಹಾಗೂ ಬೆಳಗಾಂವ, ವಿಜಾಪುರ, ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಸೀಮಿತಗೊಂಡ ಗೊಂಡ ಅಥವಾ ರಾಜಗೊಂಡ ಬುಡಕಟ್ಟುಗಳು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿದ್ದವು. 1961ರ ಜನಗಣತಿಯ ಪ್ರಕಾರ ಬೀದರ್ ಜಿಲ್ಲೆಯಲ್ಲಿ ಒಟ್ಟು 681 ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 109 ಗೊಂಡರಿದರೆಂದು ವರದಿಯಾಗಿದೆ. ಈ ಹಿಂದಿನ ಜನಗಣತಿಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಗೊಂಡರಿಗೆ ಹಾಲಕ್ಕಿ ಗೊಂಡರೆಂದು ಮಧ್ಯಮ ವರ್ಗದ ಪಟ್ಟಿಯಲ್ಲಿ ಗಣತಿ ಮಾಡಿರುವಂತೆ ಕಂಡುಬರುತ್ತದೆ

ಕರ್ನಾಟಕ ರಾಜ್ಯದಲ್ಲಿ ಬೀದರ್ ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಿಗೆ ಸೀಮಿತಗೊಂಡ ಜನಾಂಗದ ಭೌಗೋಳಿಕ ವ್ಯಾಪ್ತಿ ಕರ್ನಾಟಕದಾದ್ಯಂತ ವಿಸ್ತರಿಸಿ ದಿನಾಂಕ 27-7-1977 ರಂದು ಭಾರತ ಸರಕಾರ ಅಧಿಸೂಚನೆ ಹೊರಡಿಸಿತು. ಆ ಪಟ್ಟಿಯಲ್ಲೇ ಕರ್ನಾಟಕದಲ್ಲಿ ಒಟ್ಟು 49 ಬುಡಕಟ್ಟುಗಳನ್ನು

ಗುರುತಿಸಿದೆ. ಆ ಪಟ್ಟಿಯನ್ನೆ 1981 ಹಾಗೂ 1991ರ ಜನಗಣತಿಯಲ್ಲಿ ಬಳಸಲಾಯಿತು.

ಬೀದರಿನ ಗೊಂಡರಿಗೆ ಸಂವಿಧಾನಾತ್ಮಕ ಸೌಲಭ್ಯಗಳ ಕಲ್ಪನೆ ಪ್ರಾರಂಭದಲ್ಲಿರಲಿಲ್ಲ. 1958ರಲ್ಲಿ ಪ್ರಥಮವಾಗಿ ಗೊಂಡ (ಪರಿಶಿಷ್ಟ ವರ್ಗ) ಜಾತಿ ಪ್ರಮಾಣ ಪತ್ರ ಪಡೆದ ದಾಖಲೆಯಿದೆ 1962ರ ವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಅಪವ್ಯಯ ಮತ್ತು ಸ್ಥಗಿತತೆ ಹೆಚ್ಚಾಗಿರುವುದರಿಂದ ಗೊಂಡ ಜಾತಿ ಪ್ರಮಾಣ ಪತ್ರ ಪಡೆಯುವವರ ಸಂಖ್ಯೆ ಬೆರಳೆಣಿಕೆಯಷ್ಟಿತ್ತು. ಆದರೆ 1962 ರಿಂದ 1971 ರವರೆಗೆ ಕೆಲವು ಅಧಿಕಾರಿಗಳು ಗೊಂಡ ಜಾತಿ ಪ್ರಮಾಣಪತ್ರ ಕೊಡುವುದರ ಬದಲಾಗಿ ಕುರಿಗಳನ್ನು ಸಾಕುತ್ತಾ ಕಾಡುಗಳನ್ನು ಅಲೆಯುವುದರಿಂದ ಇವರಿಗೆ ಕಾಡು ಕುರುಬ (ಪರಿಶಿಷ್ಟ ವರ್ಗ) ಜಾತಿ ಪ್ರಮಾಣ ಪತ್ರ ಕೊಡಲಾರಂಭಿಸಿದರು. ವಾಸ್ತವವಾಗಿ ಆ ಅವಧಿಯಲ್ಲಿ ಸಂವಿಧಾನಬದ್ಧವಾಗಿ ಕಾಡು ಕುರುಬ ಜನಾಂಗ ಹಳೆ ಮೈಸೂರಿನ 9 ಜಿಲ್ಲೆಗಳಲ್ಲಿ ಮಾತ್ರ ಪರಿಶಿಷ್ಟ ವರ್ಗದ ಪಟ್ಟಿಯಲ್ಲಿರುವರು. ಬೀದರ್ ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಕಾಡುಕುರುಬ ಬುಡಕಟ್ಟು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿರಲಿಲ್ಲ. ಆದರೂ ಈ ತಪ್ಪು ಅಧಿಕಾರಿಗಳ ನಿರ್ಲಕ್ಷತೆಯಿಂದ ನಡೆದು ಹೋಗಿದೆ.

ಸಂವಿಧಾನಬದ್ಧ ಸೌಲಭ್ಯಗಳ ಅರಿವು ಮೂಡುತ್ತಿದ್ದಂತೆ ಜಿಲ್ಲೆ ಹಾಗೂ ವಿಭಾಗ ಮಟ್ಟದಲ್ಲಿ ಗೊಂಡರ ಸಂಘಟನೆಗಳು ಅಂಕುರಿಸಿದವು. ಜಿಲ್ಲೆಯ ಅಧಿಕಾರಿಗಳಿಗೆ ಹಾಗೂ ಸರಕಾರಕ್ಕೆ ಜನಾಂಗದ ಸ್ಪಷ್ಟ ಚಿತ್ರಣ ನೀಡಿದ್ದರ ಫಲವಾಗಿ ಅಧಿಕಾರಿಗಳು ತಾವು ಆ ಮೊದಲು ಮಾಡಿದ ತಪ್ಪನ್ನು ಅಂತು ಪುನಃ ಗೊಂಡ (ಪರಿಶಿಷ್ಟವರ್ಗ) ಜಾತಿ ಪ್ರಮಾಣ ಪತ್ರ ಕೊಡಲಾರಂಭಿಸಿದರು. ಆದರೆ ಗೊಂಡರ ಪ್ರಗತಿ ಸಹಿಸದ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಜಿಲ್ಲೆಗೆ ಹೊಸದಾಗಿ ವರ್ಗವಾಗಿ ಬರುವ ಅಧಿಕಾರಿಗಳಿಗೆ ಗೊಂಡರ ಬಗ್ಗೆ ಸಂಶಯ ಮೂಡಿಸುವಂತಹ ವಾತಾವರಣ ನಿರ್ಮಾಣ ಮಾಡಿದ್ದರ ಪರಿಣಾಮವಾಗಿ ಜಾತಿ ಪ್ರಮಾಣ ಪತ್ರ ಕೊಡುವುದನ್ನು ಹಲವು ಅಧಿಕಾರಿಗಳು ನಿಲ್ಲಿಸಿದರು. ಆದರೆ ಗೊಂಡ ಸಂಘ ಗೊಂಡರ ಬಗ್ಗೆ ತಲೆದೋರಿರುವ ಸಂಶಯದ ಪರಿಹಾರಕ್ಕಾಗಿ ಸರಕಾರಕ್ಕೆ ತನಿಖೆ ಮಾಡಲು ವಿನಂತಿಸಿತ್ತು.

"ಸಂಘದ ಮನವಿಗಳನ್ವಯ ಬೆಂಗಳೂರಿನಿಂದ 1974 ರಲ್ಲಿ ಸಮಾಜಕಲ್ಯಾಣ ಇಲಾಖೆಯ ನಿರ್ದೇಶಕರು ವೈಜ್ಞಾನಿಕವಾಗಿ ಗೊಂಡರ ತನಿಖೆ ನಡೆಸಲು ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನ ಬಳತ ಗ್ರಾಮ; ಬಸವಕಲ್ಯಾಣ ತಾಲ್ಲೂಕಿನ ಮಂಠಾಳ ಮತ್ತು ಸಸ್ತಾಪುರ ಗ್ರಾಮಗಳು; ಭಾಲ್ಕಿ ತಾಲ್ಲೂಕಿನ ಕುರುಬ ಖೇಳಗಿ ಹಾಗೂ ಭಾಗ್ಯನಗರ ಗ್ರಾಮಗಳು; ಬೀದರ ತಾಲ್ಲೂಕಿನ ಗಾದಗಿ ಗ್ರಾಮ ಹಾಗೂ ಹುಮನಾಬಾದ ತಾಲ್ಲೂಕಿನ ನಂದಗಾಂವ ಗ್ರಾಮ ಆಯ್ಕೆ ಮಾಡಿಕೊಂಡು ತನಿಖೆ ನಡೆಸಿರುತ್ತಾರೆ ತನಿಖೆಯಲ್ಲಿ ಆಯಾ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹಾಗೂ ತಹಸಿಲ್ದಾರರು ಹಾಜರಿರುತ್ತಾರೆ. ಗೊಂಡರ ಪ್ರದೇಶಗಳಿಗೆ ಸಂದರ್ಶನವಿಟ್ಟು

ಸತ್ಯಾಂಶ ಅರಿತಾಗ ಸಂಶಯ ದೂರಾಗುತ್ತದೆ. ಒಂದೇ ಜನಾಂಗವನ್ನು ಬೇರೆ ಬೇರೆ ಜಾತಿಯವರು ಪರಿಚಯಿಸುವ ವಿಧ ಬೇರೆ ಬೇರೆಯಾಗಿರುತ್ತದೆ. ಗೊಂಡರಿಗೆ ತುರುಕರು ಮುಸ್ಲಿಂ ಹಾಗೂ ಬ್ರಾಹ್ಮಣರು, ಅರೆ ಮರಾಠರು ಅವರ ಭಾಷೆಯಲ್ಲಿ 'ಧನಗರ್'' ಎಂದು ಕರೆದರೆ ಬಣಜಿಗರು (ಲಿಂಗಾಯಿತರು) ಹಾಗೂ ಇತರ ಕನ್ನಡ ಭಾಷಿಗರು, ಗೊಂಡರ ಮೂಲ ಅರಿತವರು ಗೊಂಡರೆಂದು ಹಾಗೂ ಗೊಂಡರ ಮೂಲ ಅರಿಯದವರು ಕುರುಬರೆಂದು ಇಲ್ಲವೆ ಗೊಂಡಕುರುಬರೆಂದು ಕರೆಯುವುದು ನಿರ್ದೇಶಕರಿಗೆ ಮನವರಿಕೆಯಾಯಿತು'' (ಮೈತ್ರಿ ಕೆ. ಎಂ ; 1994 : 565)

ಗೊಂಡ ಜಾತಿ ಪ್ರಮಾಣ ಪತ್ರಗಳನ್ನು ಗೊಂಡರಿಗೆ ಲಭಿಸುವಂತಾಗಲು ಕರ್ನಾಟಕ ಸರಕಾರ ಧರ್ಮಗುರು ಸಿದ್ಧಯ್ಯ ಆಧುನಿಕ ಒಡೆಯರ್ ಅವರಿಗೆ ಗುರುತಿನ ಪ್ರಮಾಣ ಪತ್ರ ಕೊಡುವ ಅಧಿಕಾರವಿತ್ತು ಸುತ್ತೋಲೆ ಹೊರಡಿಸಿತು. (ಸುತ್ತೋಲೆ ಸಂಖ್ಯೆ: ಡಿಎಸ್‌ಡಬ್ಲ್ಯು:ಇಎಂಪಿ:ಪಿಆರ್ 258 75–76 ದಿನಾಂಕ 3-9-1975). ಅದರಂತೆ ಜಾತಿ ಪ್ರಮಾಣ ಪತ್ರಗಳು ಕೊಡಲಾರಂಭಿಸಿದರು. ಆದರೂ ಪಟ್ಟಭದ್ರ ಹಿತಾಸಕ್ತಿಗಳು ಮೇಲಧಿಕಾರಿಗಳಿಗೆ ಗೊಂಡರ ಬಗ್ಗೆ ತಪ್ಪು ತಿಳುವಳಿಕೆ ನೀಡುತ್ತಲೇ ಇದ್ದರು. ಹೀಗಾಗಿ ಕರ್ನಾಟಕ ಸರಕಾರದ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು "ಗೊಂಡ ಸಮುದಾಯದವರಿಗೆ ಪರಿಶಿಷ್ಟ ವರ್ಗದವರೆಂದು ಕೆಲವು ಅಧಿಕಾರಿಗಳು ತಪ್ಪು ಜಾತಿ ಪ್ರಮಾಣ ಪತ್ರ ನೀಡುತ್ತಿರುವುದರ ಬಗ್ಗೆ ತಿಳಿದು ಬಂದಿದೆ. ಗುಲಬರ್ಗಾ ವಿಭಾಗದಲ್ಲಿ ಗೊಂಡರು ಹೆಚ್ಚಿಲ್ಲ. ಅವರು ಕೇವಲ ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಾರೆ ಎಂದು ಹೇಳುತ್ತಾ ಒಂದು ವೇಳೆ ಗೊಂಡರಿದ್ದರೆ ಪರಿಶೀಲಿಸಿ ಜಾತಿ ಪ್ರಮಾಣ ಪತ್ರ ನೀಡಲು ನಿರ್ದೇಶಿಸಿದೆ" (ಸುತ್ತೋಲೆ ಸಂಖ್ಯೆ: ಡಿಎಸ್‌ಡಬ್ಲ್ಯು: ಇಎಂಪಿ: 1: ಪಿಆರ್: 25: 78–79 ದಿನಾಂಕ 28-8-1978). ಎಂದು ಸುತ್ತೋಲೆ ಹೊರಡಿಸಿರುತ್ತಾರೆ. ಸದರಿ ಸುತ್ತೋಲೆಯನ್ನು ಬೀದರ್ ಜಿಲ್ಲೆಯ ಸಮಾಜ ಕಲ್ಯಾಣ ಅಧಿಕಾರಿಗಳು ಬೆರಳಚ್ಚು ಮಾಡಿಸಿರುವುದರಿಂದ ಬೆರಳಚ್ಚಿನ ವ್ಯತ್ಯಾಸದಿಂದಾಗಿ ಸುತ್ತೋಲೆ ಅಪಾರ್ಥಕ್ಕೀಡಾಗಿ ಗೊಂಡ ಜಾತಿ ಪ್ರಮಾಣ ಪತ್ರಕ್ಕೆ ಕಡಿವಾಣ ಹಾಕಿತು. ಗೊಂಡ ಜಾತಿ ಪ್ರಮಾಣ ಪತ್ರ ಕೇಳಲು ಮುಂದಾದವರಿಗೆ ಅಪಾರ್ಥಕೊಡುವ ಸುತ್ತೋಲೆ ಎದುರಿಗಿಟ್ಟು ಅಧಿಕಾರಿಗಳು ಬಚಾವಾದರೆ ವಿನಃ ವಾಸ್ತವಿಕತೆ ಅರಿಯಲು ಪ್ರಯತ್ನಿಸಲಿಲ್ಲ. ಕಾಲಾಂತರದಲ್ಲಿ ಒಂದೇ ಸುತ್ತೋಲೆಯ ಭಿನ್ನ ಭಿನ್ನ ರೂಪದ ವಾಸ್ತವಿಕತೆ ಅರಿತು ಗೊಂಡರ ಸಂಘಟನೆಗಳು ಗಟ್ಟಿಗೊಂಡು ಹೋರಾಟಕ್ಕಿಳಿದವು ವಾಸ್ತವಿಕವಾಗಿ 1961ರ ಮೊದಲಿನ ಯಾವುದೇ ಜನಗಣತಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಗೊಂಡರ ಉಲ್ಲೇಖವಿಲ್ಲ. ಜನಗಣತಿಯ ಪ್ರಾರಂಭದಿಂದಲೂ ಇಂದಿನವರೆಗಿನ ಎಲ್ಲ ಗಣತಿಗಳಲ್ಲಿ ಕರ್ನಾಟಕದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಗೊಂಡರು ಅತ್ಯಧಿಕ ಸಂಖ್ಯೆಯಲ್ಲಿರುವುದು ಬೀದರ ಜಿಲ್ಲೆಯಲ್ಲಿಯೇ ಎಂದು ವೇದ್ಯವಾಗುತ್ತದೆ.

ಕರ್ನಾಟಕ ಸರಕಾರ "ಕುರುಬ ಜನಾಂಗವನ್ನು ಕರ್ನಾಟಕದಲ್ಲಿ ಪರಿಶಿಷ್ಟ ವರ್ಗದ ಜೇನು ಕುರುಬ, ಕಾಡು ಕುರುಬ, ಗೊಂಡ, ರಾಜಗೊಂಡ ಎಂಬ ಬುಡ ಕಟ್ಟುಗಳ ಪರ್ಯಾಯ ಪದವಾಗಿ ಪರಿಗಣಿಸಲು ಯೋಗ್ಯವೇ ಎಂದು ನಿರ್ಧರಿಸಲು ಒಂದು ಸಮಿತಿಯನ್ನು ದಿನಾಂಕ 23-1-1986 ರಂದು ನೇಮಿಸಿತು. 8 ವರ್ಷ ಗತಿಸಿದ್ದರೂ ಸಮಿತಿ ಸರಕಾರಕ್ಕೆ ಯಾವುದೇ ವರದಿ ಒಪ್ಪಿಸದಿರುವುದು ವಿಪರ್ಯಾಸವೇ ಸರಿ.

ಗೊಂಡ ಕುರುಬ ಎಂಬ ದ್ವಂದ್ವಮಯ ಒಗಟಿಗೆ ತೆರೆ ಎಳೆಯಲು ಕರ್ನಾಟಕ ಸರಕಾರ ಆದೇಶ ಹೊರಡಿಸಿ "ಕುರುಬರು ಗೊಂಡ ಜಾತಿ ಪ್ರಮಾಣ ಪತ್ರ ಪಡೆದು ಸೇವೆಯಲ್ಲಿದ್ದರೆ ಅವರ ವಿರುದ್ಧ ಯಾವುದೇ ತರಹದ ಮೊಕದ್ದಮೆಗಳು ಹೂಡ ಕೂಡದು, ಹೂಡಿದರೆ ಹಿಂತೆಗೆದುಕೊಳ್ಳಬೇಕೆಂದು ಆದೇಶಿಸಿದೆ". (ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್: 170: ಎಸ್‌ಎಡಿ:81 (ಪಿ) : ಬೆಂಗಳೂರು ದಿನಾಂಕ 2-9-1986).

ಬೀದರಿನ ಜಿಲ್ಲಾ ಪರಿಷತ್ತು ತನ್ನ 24ನೇ ಮಾಸಿಕ ಸಾಮಾನ್ಯ ಸಭೆಯಲ್ಲಿ "ಬೀದರಿನ ಕುರುಬ ಜನಾಂಗದವರಿಗೆ ಗೊಂಡ ರಾಜಗೊಂಡ ಜನಾಂಗದ ಪರ್ಯಾಯ ಜನಾಂಗಗಳೆಂದು ಪರಿಗಣಿಸಿ ಪರಿಶಿಷ್ಟ ವರ್ಗದ ಜಾತಿ ಪ್ರಮಾಣ ಪತ್ರ ನೀಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ವಿನಂತಿಸಿದೆ" (ಬೀದರ್ ಜಿಲ್ಲಾ ಪರಿಷತ್ತಿನ 24ನೇ ಮಾಸಿಕ ಸಾಮಾನ್ಯ ಸಭೆಯ ನಡುವಳಿಕೆಯ ಕಂಡಿಕೆ 9(4) ದಿನಾಂಕ 16-11-1990).

ಬೀದರಿನ ಸಮಾಜ ಕಲ್ಯಾಣ ಅಧಿಕಾರಿಗಳು ಕೂಡ ಗೊಂಡರ ಸಮೀಕ್ಷೆ ನಡೆಸಿ "ಗೊಂಡ, ರಾಜಗೊಂಡ ಜನಾಂಗದ ಪರ್ಯಾಯ ಜನಾಂಗವೇ ಕುರುಬರಾಗಿರುವುದರಿಂದ ಪರಿಶಿಷ್ಟ ವರ್ಗದ ಪ್ರಮಾಣ ಪತ್ರ ನೀಡಲು ಅಭ್ಯಂತರವಿಲ್ಲ" ಎಂದು ಸರಕಾರಕ್ಕೆ ವರದಿ ಸಲ್ಲಿಸಿರುತ್ತಾರೆ (ಪತ್ರ ಸಂಖ್ಯೆ : ಎಸ್‌ಡಬ್ಲ್ಯೂಬಿ: ಎಸ್‌ಸಿ.ಎಸ್‌ಟಿ : ಸಿಆರ್ : 92-93 ದಿನಾಂಕ 20-8-1992)

ಗೊಂಡ, ರಾಜಗೊಂಡ, ಧನಗರ ಹಾಗೂ ಕುರುಬ ಎಂಬ ಪದಗಳು ಬೇರೆ ಬೇರೆ ಕಂಡರೂ ಕೂಡ ಬೀದರ ಜಿಲ್ಲೆಯಲ್ಲಿ ಅವುಗಳೆಲ್ಲ ಒಂದೇ ಜನಾಂಗವನ್ನು ಗುರುತಿಸುವ ಪದಗಳಾಗಿವೆ. ಕರ್ನಾಟಕದ ಕೊಡಗಿನಲ್ಲಿ ಕುರುಬ ; ಮಹಾರಾಷ್ಟ್ರದಲ್ಲಿ ಧನಗರ ; ದೇಶದ ಹಲವಾರು ರಾಜ್ಯಗಳಲ್ಲಿ ಗೊಂಡ, ರಾಜಗೊಂಡ ಪದಗಳೆಲ್ಲ ಪರಿಶಿಷ್ಟ ವರ್ಗದ ಪಟ್ಟಿಯಲ್ಲಿವೆ. ಸಂವಿಧಾನಬದ್ಧವಾಗಿ ಬೀದರ ಜಿಲ್ಲೆಯಲ್ಲಿ ಕುರುಬ ಮತ್ತು ಧನಗರ ಎಂಬ ಪದಗಳು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿಲ್ಲ. ಅವು ಗೊಂಡರ ಕಸಬಾಧಾರಿತ ಪದಗಳಾಗಿವೆ. ಸಂವಿಧಾನಬದ್ಧ ಸೌಲಭ್ಯಗಳ ತೊಡಕಿನಿಂದಾಗಿ ಆದಿವಾಸಿಗಳ ಹಿತದೃಷ್ಟಿಯಿಂದ ಅವರಿಗೆ ಗೊಂಡ (ಪರಿಶಿಷ್ಟ ವರ್ಗ) ಜಾತಿ ಪ್ರಮಾಣ ಪತ್ರ ಕೊಡುವುದು ನ್ಯಾಯ. ಕಾರಣ ಅವರು ಮೂಲತಃ ಗೊಂಡರೆಂಬುದನ್ನು ಅಲ್ಲಗಳೆಯುವಂತಿಲ್ಲ.

ಆಧಾರ ಗ್ರಂಥಗಳು

1. ಚನ್ನಮಲ್ಲಿಕಾರ್ಜುನ : ವೀರಶೈವ ಪಂಚಾಚಾರ್ಯ ಚರಿತ್ರೆ : ರೇವಣಸಿದ್ಧರು (ಬ್ಯಾಡಗಿ : ಶ್ರೀ ನಿರಂಜನ ಚನ್ನಬಸವ ಸ್ವಾಮಿ, ಮುಪ್ಪಿನ ಸ್ವಾಮಿ ವಿರಕ್ತ ಮಠ, 1958).

2. ಜೋಶಿ ಶಂ ಬಾ : ಕರ್ನಾಟಕ—ಸಂಸ್ಕೃತಿಯ ಪೂರ್ವ—ಪೀಠಿಕೆ ''ದ್ವಿತೀಯ ಭಾಗ'' (ಕರ್ನಾಟಕದ ವೀರ ಕ್ಷತ್ರಿಯರು—ಹಟ್ಟಿಕಾರರು : ದನಗಾರರು) (ಧಾರವಾಡ : ಸಮಾಜ ಪುಸ್ತಕಾಲಯ 1966).

3. ಮೈತ್ರಿ ಕೆ. ಎಂ. : ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ : ಒಂದು ಸಮಾಜ-ಶಾಸ್ತ್ರೀಯ ಅಧ್ಯಯನ (ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಮರ್ಪಿಸಿದ ಅಪ್ರಕಟಿತ ಪ್ರೌಢ ಪ್ರಬಂಧ, 1994).

4. ನಾಯಕ ಹಾ. ಮಾ. (ಸಂಪಾದಕ) : ಕನ್ನಡ ವಿಶ್ವಕೋಶ 'ಸಂಪುಟ 6' (ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, 1973).

5. ರಸೇಲ್ ಆರ್. ವಿ. : ದಿ ಟ್ರೈಬ್ಸ್ ಅಂಡ್ ಕಾಸ್ಟ್ಸ್ ಆಫ್ ಸೆಂಟ್ರಲ್ ಪ್ರಾವಿನ್ಸಸ್ ಆಫ್ ಇಂಡಿಯಾ (ಹೊಸದೆಹಲಿ : ಕಾಸ್ಮೋ ಪ್ರಕಾಶನ, 1975).

6. ಶಶಿ ಎಸ್. ಎಸ್. : ದಿ ಶಫರ್ಡ್ಸ್ ಆಫ್ ಇಂಡಿಯ 'ಏ ಸೋಸಿಯೋ-ಕಲ್ಚರಲ್ ಸ್ಟಡಿ ಆಫ್ ಶೀಪ್ ಅಂಡ್ ಕ್ಯಾಟಲ್ ರಿಯರಿಂಗ್ ಕಮ್ಯುನಿಟೀಸ್'' (ದೆಹಲಿ : ಸಂದೀಪ ಪ್ರಕಾಶನ, 1978).

7. ವಿಠಲಸಿಂಹ ಧೂರ್ವೆ : ಮಹಾರಾಜಾ ಸಂಗ್ರಾಮಶಾಹಕೆ ಬಾವನೆ ಗಢ (ನಾಗಪುರ : ಗೋಟೂಲೆ ಪ್ರಕಾಶನ, 1990)

8. ಭಾರತದ ಜನಗಣತಿಯ ವರದಿಗಳು (1891 ರಿಂದ 1991)

9. ಭಾರತದ ಗ್ಯಾಝೆಟಿಯರ್ "ಬೀದರ ಜಿಲ್ಲೆ"

10. ಭಾರತದ ಗ್ಯಾಝೆಟಿಯರ್ "ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳು"

ಸಿ. ಪಿ. ರಾಮಶೇಷ

ಪಾಣಿಗಳ ಲಾವಣ್ಯ ದಾನ

[ಲೇಖಕರು ಇಲ್ಲಿ ದಾನದ ಮಹಿಮೆಯನ್ನು ಸೋದಾಹರಣವಾಗಿ ಕೊಂಡಾಡಿದ್ದಾರೆ.—ಸಂ.]

ಐನೂರು ಕೋಟಿಗೂ ಮೀರಿ ಜನನವೆತ್ತ ವಿಶ್ವಮಾತೆಯ ಮಡಿಲಲ್ಲಿ ಮೌಲ್ಯಗಳನ್ನು ಹೊತ್ತ ಮನುಜರು ಅಲ್ಲೊಬ್ಬರು, ಇಲ್ಲೊಬ್ಬರು. ಇದು ಸೃಷ್ಟಿಯ ನಿಯಮ.

ಶತೇಷು ಜಾಯತೇ ಶೂರ :
ಸಹಸ್ರೇಷು ಚ ಪಂಡಿತ: 1
ಜಾತಾ ದಶ ಸಹಸ್ರೇಷು ವಾಗ್ಮಿ :
ಧಾತಾ ಭವತಿ ಮಾನವ

ನೂರರಲ್ಲಿ ಒಬ್ಬ ಶೂರ, ಸಾವಿರಕ್ಕೊಬ್ಬ ಪಂಡಿತ, ಹತ್ತು ಸಾವಿರಕ್ಕೆ ಒಬ್ಬ ಉತ್ತಮ ಮಾತುಗಾರ. ಹೀಗೆ ಅನೇಕ ಜನರಿರುತ್ತಾರೆ. ಆದರೆ ಮನುಜ ಕೋಟಿಯಲ್ಲಿ ಒಬ್ಬ ದಾನಿ ಇರುತ್ತಾನೆಯೋ ? ಎಂದು ಹೇಳುವುದು ಕಷ್ಟಸಾಧ್ಯ. ಈ ಮೇಲಿನ ಧಾಟಿಯಲ್ಲಿ ಸುಭಾಷಿತ ದಾನಿಯ ಹಿರಿಮೆಯನ್ನು ಹೇಳಿದರೆ ಸರ್ವಜ್ಞ ಸಂಪದ ತನ್ನ ತ್ರಿಪದಿಯಲ್ಲಿ ಹೀಗೆ ನುಡಿದಿದ್ದಾನೆ.

"ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ
ಕೊಟ್ಟು ಕೆಟ್ಟೆನೆನಬೇಡ ಮುಂದೆ ಕಟ್ಟಿದ್ದದು
ಬುತ್ತಿ ಸರ್ವಜ್ಞ"

ಮಾನವನ ಹಲವು ಸ್ವಾಭಾವಿಕ ಗುಣಗಳಲ್ಲಿ ದಾನವೂ ಒಂದು ಉಚ್ಚ ಗುಣ. ಇದು ಬಹು ಪ್ರಾಚೀನ ಕಾಲದಿಂದಲೂ ಕಂಡುಬಂದಿದೆ. ಆದರೆ ದಾನದ ಮಟ್ಟ ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಾಗಿದ್ದು ಮಾನವನ ಸಹಬಾಳ್ವೆಗೆ ಅವಶ್ಯಕ ಎಂದು ಮನದಟ್ಟಾಗಿದೆ.

ಬೃಹದಾರಣ್ಯಕೋಪನಿಷತ್ತಿನ ಯಾಜ್ಞವಲ್ಕ್ಯ ಮತ್ತು ಆರ್ತಭಾಗದ ಸಂವಾದದಲ್ಲಿ ಆತ್ಮ ವಿಚಾರ ಪ್ರಸ್ತಾಪ ಮಾಡಿ ಚರ್ಚಿಸುತ್ತಾ ಆಚಾರ್ಯರಿಬ್ಬರೂ ಕಡೆಗೆ ಮಾನವನ ದಾನಧರ್ಮ ಹಾಗೂ ಸುಕೃತಗಳ ಮಹಿಮೆಯನ್ನು ಉಪಸಂಹಾರ

ವಾಗಿ ಕೊಂಡಾಡಿದ್ದಾರೆ. ದೇಹವನ್ನು ತೊರೆದ ಆತ್ಮ ಎಲ್ಲಿ ಹೋಗುತ್ತದೆ ಎನ್ನುವುದು ಆತನು ಮಾಡಿದ ಸುಕೃತವನ್ನು ಅವಲಂಬಿಸಿದೆ ಎಂಬುವುದಕ್ಕೆ ಉಪನಿಷತ್ತಿನಲ್ಲಿ ಉಲ್ಲೇಖವಿರುತ್ತದೆ.

ಹೆಚ್ಚು ಜನಾಂಗದವರ ನಂಬಿಕೆ ಪ್ರಕಾರ ಯಾರು ದಾನವನ್ನು ನೀಡುವರೊ ಅವರನ್ನು ದೇವರು ಅನುಗ್ರಹಿಸುವನು. ಜುಡಾಯಿಸಮ್ ಸಾರುವುದೇನೆಂದರೆ ಅನ್ನ ಹಾಕಿ ಸಲಹುದಕ್ಕಿಂತ ಆತನಿಗೊಂದು ವಿದ್ಯೆ ಕಲಿಸಿ ತನ್ನ ಕಾಲ ಮೇಲೆ ತಾನೇ ನಿಂತು ಸಂಪಾದಿಸುವಂತೆ ಮಾಡುವುದು ಉತ್ತಮ.

ಜೂಯಿಗಳ ಸಂಪ್ರದಾಯ ಹೇಳುವಂತೆ, Charity begins at home ದಾನ ಹಾಗೂ ಔದಾರ್ಯ ಮನೆಯಿಂದ ಪ್ರಾರಂಭವಾಗಬೇಕು.

ಗ್ರೀಕರ ಸಂಪ್ರದಾಯವು ಪ್ರೀತಿಯನ್ನು ಉನ್ನತವಾಗಿ ಪರಿಗಣಿಸಿ ನಿರ್ಗತಿಕರಿಗೆ ಕರುಣೆ ತೋರಿ ಸತ್ಕರಿಸಲು ಹೇಳುತ್ತದೆ. ಗ್ರೀಕ್ ತಾತ್ವಿಕ ಚಿಂತಕರಾದ ಅರಿಸ್ಟಾಟಲ್, ಸಾಕ್ರಟಿಸ್ ದಾನ ಕುರಿತಾಗಿ ಬಹು ದೀರ್ಘವಾಗಿ ಹೇಳಿರುತ್ತಾರೆ. ಕೊಡುಗೆಯ ವಸ್ತುವಿನ ಮೌಲ್ಯ ಮುಖ್ಯವಲ್ಲ, ನೀಡುವವನ ಔದಾರ್ಯತೆಗೆ ಬೆಲೆ. ಇವನ್ನೇ ಅರಿಸ್ಟಾಟಲ್ "ಉತ್ಸಾಹಭರಿತ ದಾನಿ" ಎನ್ನುತ್ತಾನೆ. ಸಮಾಜದ ಅಸಮಾನತೆಯ ಅಸೂಯೆ ಮತ್ತು ದಂಗೆಗಳಿಗೆ ಕಾರಣವಾಗಿದ್ದು ದಾನ ಒಂದು ರೀತಿಯ ಪರಿಹಾರಕಾರ್ಯ ಎನ್ನಲಾಗಿದೆ. ಗ್ರೀಕರಲ್ಲಿ ಎಂತಹ ಸನ್ನಿವೇಶದಲ್ಲೂ ಬಾಯಾರಿಕೆ ನೀಗಿಸಲು ನೀರು, ಶವ ಸಂಸ್ಕಾರಕ್ಕಾಗಿ ಬೆಂಕಿ ಇಲ್ಲವೆನ್ನಬಾರದೆಂಬ ಸಂಪ್ರದಾಯವಿದೆ. ಕ್ರೈಸ್ತ ಜನಾಂಗದವರು ಔದಾರ್ಯವನ್ನು ಪ್ರೀತಿಗೆ ಹೋಲಿಸುತ್ತಾ "ಒಲುಮೆಯೇ ದೇವರು" ಎಂದು ತಿಳಿಸುತ್ತಾರೆ.

ಎನ್‌ಸೈಕ್ಲೋಪೀಡಿಯ ಆಫ್ ರಿಲಿಜನ್ "ಛ್ಯಾರಿಟಿ" ಎಂಬ ಪದಕ್ಕೆ ವಿವರಣೆ ನೀಡುತ್ತಾ ದಾನ-ಧರ್ಮ ಕಾರ್ಯಗಳನ್ನು ಆಸ್ಪತ್ರೆ, ವೃದ್ಧಾಶ್ರಮ, ಅನಾಥಾಶ್ರಮ, ಅಬಲೆಯಾಶ್ರಮ, ಸಾಮಾಜಿಕ ಪರಿವರ್ತನಾ ಸಂಸ್ಥೆಗಳ ರೂಪದಲ್ಲಿ ಕೈಗೊಳ್ಳುವುದನ್ನು ಉಲ್ಲೇಖಿಸಿದೆ.

ಶ್ರೋತ್ರಂ ಶ್ರುತೇನೈವ ನ ಕುಂಡಲೇನ
ದಾನೇನ ಪಾಣಿನಂತು ಕಂಕಣೇ ನ

ಕಿವಿಗಳಿಗೆ ಶೋಭೆಯುಂಟಾಗುವುದು ಕುಂಡಲಗಳಿಂದಲ್ಲ. ಜ್ಞಾನ ಶ್ರವಣದಿಂದ. ಕೈಗಳಿಗೆ ಶೋಭೆಯುಂಟಾಗುವುದು ಬಳೆಗಳಿಂದಲ್ಲ, ದಾನದಿಂದಾಗಿ ಎಂದು ಸುಭಾಷಿತ ಸಾರುತ್ತದೆ.

ದಾನ ಎಂದರೆ ಮನಃಪೂರಕ ಮತ್ತು ಪ್ರೀತಿಪೂರಕವಾಗಿ ತನ್ನ ಆರ್ಜನೆಯಲ್ಲಿನ ಸ್ವಲ್ಪ ಭಾಗವನ್ನು ಇತರರಿಗೆ ನೀಡುವುದು. ಇದರಲ್ಲಿ ಪ್ರಕಟ ವ್ಯಾಪಾರತೆ ಇರಬಾರದು. ಬಡವ ಬಲ್ಲಿದನೆಂಬ ಭೇದವಿಲ್ಲದೆ ದಾನ ಕಾರ್ಯವನ್ನು ಆಚರಿಸುವುದನ್ನು ಇಸ್ಲಾಂ ಧರ್ಮದಲ್ಲಿ ಕಾಣಬಹುದು. ರಂಜಾನ್ ಹಬ್ಬ ಆಚರಣೆಯಲ್ಲಿ ಪ್ರತಿ

ಯೊಬ್ಬನು ದವಸ ಧಾನ್ಯಗಳನ್ನು, ಬಟ್ಟೆಬರೆಗಳನ್ನು ದಾನ ಮಾಡುವ ವಾಡಿಕೆ ಇರುತ್ತದೆ. (ಫಿತ್ರ ಮತ್ತು ಜಕಾತ್) ಪ್ರವಾದಿ ಮಹಮದರು ಉದಾರವಾಗಿ ಹೇಳಿರುವ ಒಂದು ನುಡಿಯನ್ನು ನಾವು ಇಲ್ಲಿ ಸ್ಮರಿಸಬಹುದು. "ಇದು ಬೇಕೆಂದು ಕೇಳಿದರೆ ದಾನವಾಗಿ ನೀಡು, ಆತ ಕುದುರೆ ಸವಾರನಾಗಿ ವೈಭವದಿಂದ ಬಂದಿದ್ದರೂ ಸಹ"— ಎಂತಹ ಔದಾರ್ಯತೆ.

ಪ್ರತ್ಯಕ್ಷನಾಗಿ ದೇವತೆಗಳಿಗೆ ದಾನ ಕೊಡಲಾಗದುದರಿಂದ ಅಗ್ನಿ ಮುಂತಾದ ಮಾತರ ಮೂಲಕ ಅವರಿಗೆ ದಾನ ಸಮರ್ಪಣೆ ಮಾಡುವುದು ವೈದಿಕ ಕಲ್ಪ ಕ್ರಮ. ಇದನ್ನು ಯಾಗ ಎನ್ನುವರು.

ದಾನದಲ್ಲಿ ಮೂಲತಃ ಗಮನಿಸಬೇಕಾದ್ದು ಅದರ ಸ್ವರೂಪ—ದಾನಿಯ ಚಿತ್ತದಲ್ಲಿ ಮೂಡುವ ಭಾವನೆಗಳು ಮತ್ತು ಉದ್ದೇಶ. ಇದಕ್ಕೆ ತಕ್ಕಂತೆ ಮೂರು ರೀತಿಗಳಿವೆ.

1. ಸಾತ್ವಿಕ: ಪ್ರತಿಫಲಾಪೇಕ್ಷೆಯನ್ನು ನಿರೀಕ್ಷಿಸದೆ ಭಕ್ತಿಯಿಂದ ನೀಡುವ ದಾನ
2. ರಾಜಸಿಕ: ಪ್ರತ್ಯುಪಕಾರವನ್ನು ಬಯಸುತ್ತಾ ತನ್ನ ವೈಭವವನ್ನು ಪ್ರದರ್ಶಿಸುತ್ತಾ ನೀಡುವ ದಾನ.
3. ತಾಮಸಿಕ: ಚಿತ್ತ ಚಂಚಲತೆಯಿಂದ ಸಂಕುಚಿತವಾಗಿ ನೀಡಿದ ದಾನ. ಇದು ನಿಜವಾದ ದಾನವೇ ಅಲ್ಲ. ಇಲ್ಲಿ ಹೆಚ್ಚಾಗಿ ಮಾತಿಗೆ ಕಟ್ಟುಬಿದ್ದು ಸಂದಿಗ್ಧ ಪರಿಸ್ಥಿತಿಯಲ್ಲಿ ನೀಡಿದ ದಾನ.

ನಮ್ಮ ಪೂರ್ವಿಕರು ದಾನವನ್ನು ನಿತ್ಯ, ನೈಮಿತ್ತಿಕ ಕಾಮ್ಯ ಮತ್ತು ವಿಮಲ ಎಂದು ವಿಂಗಡಿಸಿದ್ದಾರೆ.

ನಿತ್ಯ: ಪ್ರತಿನಿತ್ಯ ಫಲಾಪೇಕ್ಷೆಯಿಲ್ಲದೆ ಮಾಡುವ ದಾನ.

ನೈಮಿತ್ತಿಕ: ಪವಿತ್ರ ಕ್ಷೇತ್ರಗಳಲ್ಲಿ ಹಬ್ಬಹರಿದಿನಗಳಲ್ಲಿ ನೀಡುವ ದಾನ.

ಕಾಮ್ಯ: ಇಷ್ಟಾರ್ಥ ಸಿದ್ಧಿಗಾಗಿ ನೀಡುವ ದಾನ.

ವಿಮಲ: ದೇವರಿಗಾಗಿ ನೀಡಿದ ದಾನ. ಉದಾಹರಣೆಗೆ ಬಲಿ ಚಕ್ರವರ್ತಿ ವಾಮನದೇವನಿಗೆ ನೀಡಿದ ಮೂರು ಹೆಜ್ಜೆಗಳ ನೆಲ ದಾನ.

"ಸ್ವೀಕರಿಸುವಾತ ವಸ್ತುವನ್ನು ತನ್ನದೇ ಎಂಬ ಅಥವಾ ಹಿಂದಿರುಗಿಸಬೇಕೆಂಬ ಯಾವುದೇ ಕಟ್ಟಳೆಗಳಿಲ್ಲದೆ, ನೀಡುವಾತ ಕೇವಲ ಉದಾರತೆ, ಕನಿಕರದಿಂದ ಮಾನವನ ಅವಶ್ಯಕತೆಗಳನ್ನು ಪೂರೈಸಲು ನೀಡಿದ ಒಂದು ಕೊಡುಗೆ ದಾನ''. ಇದು ದಾನದ ವ್ಯಾಖ್ಯೆಯಾದರೆ, ದಾನ ಮಾಡುವಾತನಿಗೆ ಒಂದು ರೀತಿಯ ಅಂತಃಚಕ್ಷುವಿರಬೇಕು. ಅತ್ಯಂತ ಕರುಣಾಜನಕ ಪರಿಸ್ಥಿತಿಯಲ್ಲಿ ಸಿಲುಕಿ ದೈನ್ಯದಿಂದ ಕಂಡು ಬಂದಾಗ ಅವನ ಕಷ್ಟ ಪರಿಹಾರಕ್ಕಾಗಿ ಮಾಡುವ ವಿವಿಧ ರೀತಿಯ ದಾನದಿಂದ ಆತ್ಮತೃಪ್ತಿ ನೆಲೆಗೊಳ್ಳುವುದು ಮತ್ತು ಆತ್ಮಸ್ಥೈರ್ಯ ಹೆಚ್ಚುವುದು. ದಾನಗಳಲ್ಲಿ

ಹಲವು ಬಗೆ. ಅವುಗಳ ಶ್ರೇಷ್ಠತೆಯನ್ನು ಅನುಸರಿಸಿ, ಈ ರೀತಿಯಾಗಿ ವಿಂಗಡಿಸ ಬಹುದು.

೧. ಜ್ಞಾನದಾನ (ವಿದ್ಯಾದಾನ)
೨. ಪ್ರಾಣದಾನ
೩. ಅನ್ನದಾನ
೪. ಹಣದಾನ

೧. ವಿದ್ಯಾದಾನ: ಇದು ಅತ್ಯಂತ ಶ್ರೇಷ್ಠತೆಯನ್ನು ಗಳಿಸಿದ್ದು. ಮಾನವನ ಸರ್ವತೋಮುಖ ಉನ್ನತಿಗಾಗಿ ಮೂಲ ಆಧಾರಸ್ತಂಭವಾಗಿದೆ. ಭಗವದ್ಗೀತೆಯೂ ಜ್ಞಾನಕ್ಕಿಂತ ಮಿಗಿಲಾದದ್ದು ಯಾವುದೂ ಇಲ್ಲ ಎಂದು ಸಾರಿದೆ. ಮಾನವನ ಅಂತ ರಂಗ ಮತ್ತು ಬಹಿರಂಗ ಸಾಧನೆ, ಏಳಿಗೆ, ಅಭಿವೃದ್ಧಿಗಳಿಗಾಗಿ ಜ್ಞಾನವೇ ಸಾಧನ ವಾಗಿದೆ. "ಮಾಸ್ಟರ್ ಕೀ" ನಂತೆ ವಿಶ್ವದ ನಾನಾ ಕ್ಷೇತ್ರಗಳಲ್ಲಿ ಗೌರವ, ಆತ್ಮವಿಶ್ವಾಸ ಮತ್ತು ತೇಜಸ್ಸನ್ನು ನೀಡುವ ಸಲಕರಣೆ. ಸ್ವದೇಶದಲ್ಲಿ ರಾಜನು ಗೌರವಾನ್ವಿತನು. ಆದರೆ ವಿದ್ವಾಂಸನು ಎಲ್ಲೆಲ್ಲೂ ಪೂಜಿತನು. ವಿದ್ಯೆಯಿಲ್ಲದ ಮನುಷ್ಯನ ಬಾಳು ಕಪ್ಪು ಇದ್ದಿಲಿನಂತೆ. ಆದರೆ ಜ್ಯೋತಿಯು ಸೋಂಕಿದಾಗ ಹೇಗೆ ಇದ್ದಿಲು ಕೆಂಪಾಗಿ ಪ್ರಜ್ವಲಿಸುವುದೋ ಅದೇ ರೀತಿ ಜ್ಞಾನದಿಂದ ಮಥಿಸಲ್ಪಟ್ಟ ವ್ಯಕ್ತಿ ಎಲ್ಲೆಲ್ಲೂ ಪ್ರಜ್ವಲಿಸುತ್ತಾನೆ ಮತ್ತು ಗೌರವ ಸಂಪಾದಿಸಿ ಪೂಜ್ಯನಾಗು ತ್ತಾನೆ. ಇದನ್ನು ಸರ್ವಜ್ಞ ಹೀಗೆ ಬಣ್ಣಿಸಿದ್ದಾನೆ.

"ವಿದ್ಯೆಯುಳ್ಳವನು ಮುಖವು ಮುದ್ದು ಬರುವಂತಕ್ಕು
ವಿದ್ಯೆಯಿಲ್ಲದವನ ಬರಿ ಮುಖವು ಹಾಳೂರ ಹದ್ದಿನಂತಕ್ಕು ಸರ್ವಜ್ಞ".

ವಿದ್ಯಾದಾನದಲ್ಲಿ ಎರಡು ವಿಧಗಳು. ಬ್ರಹ್ಮ ವಿದ್ಯೆ ಮತ್ತು ವ್ಯಾವಹಾರಿಕ ವಿದ್ಯೆ. ಜೀವ-ಶಿವರ ಸ್ವರೂಪ ಹಾಗೂ ಪಾರಮಾರ್ಥಿಕ ಸಾಧನೆಗೆ ಸಂಬಂಧಪಟ್ಟ ವಿದ್ಯೆ, ಇತರ ಲೌಕಿಕ ವಿದ್ಯೆಗಳಾದ ಸಮಾಜ ವಿಜ್ಞಾನ ಮತ್ತು ತಾಂತ್ರಿಕ ವಿಜ್ಞಾನಗಳಿಗಿಂತ ಹಿರಿದು. ಲೌಕಿಕ ವಿದ್ಯೆ ಹೊಟ್ಟೆಪಾಡಿಗಾಗಿ ಹಾಗೂ ವಸ್ತುಗಳಿಂದ ಗಳಿಸಬಹು ದಾದ ಸೌಕರ್ಯಕ್ಕಾಗಿ ಎನ್ನುವುದನ್ನು ಗಮನಿಸಬೇಕು.

" ಸರ್ವದ್ರವ್ಯೇಷು ವಿದ್ವೈವ
ದ್ರವ್ಯ ಮಾಹುರ ಸುತ್ತಮಂ
ಅಹಾರ್ಯತ್ವಾತ್ ಅನರ್ಘ್ಯತ್ವಾತ್
ಅಕ್ಷಯತ್ವಾಚ್ಚ ಸರ್ವದಾ "

ಕಳ್ಳರಿಂದ ಕದಿಯಲಾಗುವುದಿಲ್ಲ, ಬೆಲೆ ಕಟ್ಟಲಾಗುವುದಿಲ್ಲ, ದಾನ ಮಾಡಿದರೆ ವಿದ್ಯೆಯು ಅಕ್ಷಯವಾಗುತ್ತದೆ.

೨. ಪ್ರಾಣದಾನ: ಪ್ರಾಣಾಪಾಯದಿಂದ ರಕ್ಷಣೆ, ದೇಹದ ಅಂಗಾಂಗ ಗಳನ್ನು ರೋಗಿಗಾಗಿ ಸಕಾಲದಲ್ಲಿ ನೀಡುವಿಕೆ, ರಕ್ತ ದಾನ, ಇವೆಲ್ಲಾ ಈ ಗುಂಪಿಗೆ

ಸೇರುತ್ತವೆ. ರೋಗಿಯ ಶುಶ್ರೂಷೆ, ಔಷದೋಪಚಾರ ಇವು ಇದೇ ಗುಂಪಿಗೆ ಸೇರಿದ್ದು, ನುರಿತ ತಜ್ಞರಿಂದ ನೀಡಬೇಕಾದ ಸೇವೆ ಎನಿಸುವುದು. ಮೂಕ ಪ್ರಾಣಿಗಳ ಸಂರಕ್ಷಣೆಯೂ ಸಹ ಇದೇ ರೀತಿಯ ಮತ್ತೊಂದು ಸೇವಾಭಾವವಾಗಿರುತ್ತದೆ.

ರಾಬರ್ಟ್ ಇಂಗರ್ಸಾಲ್ ಪ್ರತಿಪಾದಿಸುವಂತೆ,

"ಸಹಾಯ ನೀಡುವ ಹಸ್ತಗಳು ಸಾವಿರ
ಮುತ್ತು ನೀಡುವ ನಾಲಿಗೆಗಿಂತ ಪವಿತ್ರ"

೩. ಅನ್ನದಾನ : ಎಲ್ಲೆಲ್ಲೂ ದಾಸೋಹಕ್ಕೆ ಮಹತ್ವವಿದೆ. ನಾವು ಯಾವುದೇ ಕಾರ್ಯವನ್ನು ನೆರವೇರಿಸುವಾಗ, ಔತಣವನ್ನು ಏರ್ಪಡಿಸಿ ಜನರನ್ನು ಅನ್ನದಿಂದ ಸಂತೃಪ್ತಿಗೊಳಿಸುತ್ತೇವೆ. ಈ ಹವ್ಯಾಸವನ್ನು ಎಲ್ಲಾ ಧರ್ಮಗಳಲ್ಲೂ ಕಾಣಬಹುದು. ಅನ್ನದಾನದ ಹಿರಿಮೆಯನ್ನು ಬಸವಣ್ಣನವರು ಭಕ್ತಿ—ಭಾವಾತ್ಮಕವಾಗಿ ಈ ರೀತಿಯಲ್ಲಿ ಹೇಳುತ್ತಾರೆ.

"ತನುಮನ ದಣಿಯಿಸಿ ತಂದು ದಾಸೋಹ ಮಾಡುವ
ಸದ್ಭಕ್ತರ ಪಾದವ ತೋರು ಎನಗೆ ಕೂಡಲ ಸಂಗಮದೇವ"

ಬಸವಣ್ಣನವರು ಹೇಳುವಂತೆ ತಾನೇ ಕಷ್ಟಪಟ್ಟು ದುಡಿದು ದಾನ ಮಾಡುವಾತನು ದೇವರಿಗೆ ಸಮಾನನಾಗಿರುತ್ತಾನೆ.

ಸರ್ವಜ್ಞ ಸಂಪದನ ಅಭಿಪ್ರಾಯದಂತೆ

"ಅನ್ನದೇವರ ಮುಂದೆ ಇನ್ನು ದೇವರುಂಟೆ ?
ಅನ್ನವಿರುವ ತನಕ ಪ್ರಾಣವು ಜಗದೊಳಗನ್ನವೇ ದೈವ ಸರ್ವಜ್ಞ!"
"ಅನ್ನವಿಕ್ಕುವುದು ನನ್ನಿಯ ನುಡಿವುದು
ತನ್ನಂತೆ ಪರರ ಬಗೆವುದು—ಸ್ವರ್ಗ ತಾ
ಬಿನ್ನಾಣವಲ್ಲ—ಸರ್ವಜ್ಞ !"
" ಎತ್ತಣ ಹನಿಬಿದ್ದು ಮುತ್ತಾದ ತೆನೆಯಂತೆ
ಉತ್ತಮ ಗತಿಯ ಪಡೆವೊಡೆ—ಯತಿಗೊಂದು
ತುತ್ತಿಕ್ಕುವುದು—ಸರ್ವಜ್ಞ !"
"ಆಗ ಬಾ ಈಗ ಬಾ ಹೋಗಿ ಬಾ ಎನ್ನದೆ
ಈಗಲೇ ಕರೆದು ಕೊಡುವವನ ಧರ್ಮ
ಹೊನ್ನಾಗದೆ ಬಿಡದು—ಸರ್ವಜ್ಞ !"

ಮುಖ್ಯವಾಗಿ ಇಲ್ಲಿ ಗಮನ ಹರಿಸಬೇಕಾದ ವಿಷಯವೆಂದರೆ ಹಸಿವಿನಿಂದ ತತ್ತರಿಸಿದವನಿಗೆ ನೀಡುವ ಊಟವು ಒತ್ತಡದಿಂದ ಶ್ರೀಮಂತ ನೆಂಟನಿಗೆ ನೀಡುವುದಕ್ಕಿಂತಲೂ ಶ್ರೇಯಸ್ಕರ. ಸ್ವಾಮಿ ಪುರುಷೋತ್ತಮಾನಂದರು ಅನ್ನದಾನದ ಬಗ್ಗೆ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

"ಜ್ಞಾನದಾನ ಶ್ರೇಷ್ಠವೆಂಬ ಮಾತನ್ನು ನಾನು ಅಲ್ಲಗಳೆಯದಿದ್ದರೂ ಅನ್ನದಾನದಲ್ಲಿ ನನಗೆ ವಿಶೇಷ ಅನುರಾಗ. ಏಕೆಂದರೆ ನನ್ನ ಸಹಮಾನವರನ್ನು

ಸಂತೃಪ್ತಿಪಡಿಸಲು ಅನ್ನದಾನ ಅತ್ಯಂತ ಪರಿಣಾಮಕಾರಿ ಹಾಗೂ ಶೀಘ್ರ ಫಲಕಾರಿ. ಅದು ಹೇಗೆಂದು ಹೇಳಲಿ? ನೀವು ಏನನ್ನು ಕೊಟ್ಟರೂ, ಎಷ್ಟು ಕೊಟ್ಟರೂ ಸಾಕು ಎನ್ನದ ಮನುಷ್ಯನಿಗೆ ಹೊಟ್ಟೆ ತುಂಬಾ ಬಡಿಸಿ ಮತ್ತೊಮ್ಮೆ ಪಾಯಸವನ್ನು ಬಡಿಸಿ ನೋಡಿ, ಆಗ ಅವನ ಬಾಯಿಯಿಂದ ಬರುವ ಮಾತು—ಸಾಕು, ಸಾಕು, ಇನ್ನು ಸಾಕು! ಈ ತೃಪ್ತಿ ಸೂಚಕವಾದ 'ಸಾಕು' ಎನ್ನುವ ಶಬ್ದವನ್ನು ಕೇಳಬೇಕಾದರೆ ಅನ್ನದಾನದ ಮೂಲಕವೇ ಆಗಬೇಕು''.

೪. ಹಣದಾನ: ಹಣವು ಮೂಲತಃ ಎಲ್ಲಾ ವಸ್ತುಗಳ ಅವಶ್ಯಕತೆಗಳನ್ನು ಪೂರೈಸುವ ಮಾಧ್ಯಮವಾಗಿದ್ದು, ಸಾಮಾನ್ಯವಾಗಿ ಕಂಡುಬರುವ ದಾನದ ರೀತಿ ಯಾಗಿದೆ. ಹಣವು ಸಂಗ್ರಹಿಸಿ ಬೇಕೆಂದಾಗ ಯಾವ ಅನುಕೂಲಕ್ಕಾದರೂ ಸಲ್ಲಿಸ ಬಹುದಾದ ಅಥವಾ ಒದಗಿಸಬಹುದಾದ ದ್ರವ್ಯ. ಹಣ, ಹೊನ್ನು ಇತರ ವಸ್ತು ಸಾಮಗ್ರಿಗಳು, ಭೂಮಿ ಇತ್ಯಾದಿಗಳನ್ನು ಕೂಡ ಇದೇ ಗುಂಪಿಗೆ ಸೇರಿಸಬಹು ದಾಗಿದೆ.

ಪುರಾಣ ಪುಣ್ಯಕಥೆಗಳಲ್ಲಿ ನಾನಾ ರೀತಿಯ ದಾನಿಗಳ ಚಿತ್ರಣವಿದೆ. ಉದಾಹರಣೆಗೆ, ಸರ್ವಸ್ವವನ್ನೇ ದಾನ ಮಾಡಿದ ಬಲಿ ಚಕ್ರವರ್ತಿ, ಅಂಗಾಂಗಗಳನ್ನೇ ದಾನ ನೀಡಿದ ದಾನಶೂರಕರ್ಣ, ತನ್ನ ಯೌವನವನ್ನೆ ದಾನ ಮಾಡಿ ಮುಪ್ಪನ್ನು ಪಡೆದ ಪುರು, ಇವರೆಲ್ಲ ದಾನಿಗಳಲ್ಲಿ ಪರಮ ಶ್ರೇಷ್ಠರೆನಿಸಿ ಕೀರ್ತಿ ಗಳಿಸಿ, ಎಲ್ಲರ ಮನದಲ್ಲಿ ಅಜರಾಮರರಾಗಿ ಉಳಿದಿದ್ದಾರೆ.

ಒಮ್ಮೆ ಕರ್ಣ ಧನುರ್ವಿದ್ಯೆಯ ಅಭ್ಯಾಸವನ್ನು ಮಾಡಿ ಬಳಲಿದ್ದು ಅಭ್ಯಂಜನ ಸ್ನಾನಕ್ಕಾಗಿ ಕುಳಿತಿರುವುದನ್ನು ಅತ್ತ ಕಡೆಯಿಂದ ಹಾದು ಬಂದ ಮರಕಟಿಕನೊಬ್ಬ ಕರ್ಣನ ಎಡಗೈಯಲ್ಲಿದ್ದ ಎಣ್ಣೆ ಬಟ್ಟಲನ್ನು ನೋಡಿ ಅಯ್ಯಾ, ನನಗಷ್ಟು ಎಣ್ಣೆ ಯನ್ನು ನೀಡಬಲ್ಲೆಯಾ? ಎಂದು ಕೇಳಿದನು. ತಕ್ಷಣವೇ ಕರ್ಣ ಹರ್ಷದಿಂದ ಎಡಗೈಯಿಂದಲೆ ಬಟ್ಟಲನ್ನು ನೀಡಿ ಸ್ವೀಕರಿಸುವಂತೆ ಕೇಳಿಕೊಂಡನು. ಅದನ್ನು ಸ್ವೀಕರಿಸಿದ ಮರಕಟಿಕ ಏತಕ್ಕಾಗಿ ನೀನು ಎಡಗೈಯಿಂದ ದಾನವನ್ನು ನೀಡಿದೆ ಎಂದು ಕೇಳಲು, ಕರ್ಣನು ಅಯ್ಯಾ, ದಾನ ನೀಡುವ ಅವಕಾಶ ಒದಗಿ ಬಂದಾಗ ಯೋಚಿ ಸುವುದು ಒಳಿತಲ್ಲ. ಹಾಗೆಯೇ ಸಮಯ ಕೂಡ ಇತರ ಆಲೋಚನೆ ರೂಪುಗೊಳ್ಳಲು ದಾರಿಯಾಗಬಹುದಾಗಿದ್ದು, ಕೂಡಲೆ ಎಡಗೈಯಲ್ಲೇ ದಾನ ನೀಡುವುದು ಒಳಿತು ಎಂದು ಹೇಳುತ್ತಾನೆ.

ಮತ್ತೊಂದು ಕರ್ಣನ ದಾನದ ನಿದರ್ಶನ—ಒಮ್ಮೆ ಧರ್ಮರಾಯ, ಕೃಷ್ಣನನ್ನು ಪಾಂಡವರಿಗಿಂತಲೂ ನಿನಗೇಕೆ ಕರ್ಣನ ಪರವಾಗಿ ಒಲವು ಹೆಚ್ಚು ಎಂದು ಕೇಳಲು, ಕೃಷ್ಣನು ಕಾಲ ಬರಲಿ ನಿನಗೆ ಅರಿವಾಗುತ್ತದೆ ಎಂದು ಹೇಳುತ್ತಾನೆ. ಅನಂತರ ಇಡೀ ದೇಶದಲ್ಲಿ ಭೀಕರ ಕ್ಷಾಮ ತಲೆದೋರುತ್ತದೆ. ಆ ಕ್ಷಾಮ ನಿವಾರಣೆಗೆ ಯಾಗ

ಮಾಡಬೇಕಾಗಿರುವುದರಿಂದ, ಕಟ್ಟಿಗೆಯು ಅವಶ್ಯಕತೆಯುಂಟಾಗುತ್ತದೆ. ಆಗ ಕೃಷ್ಣ ಮತ್ತು ಧರ್ಮರಾಯರು ಬ್ರಾಹ್ಮಣರ ವೇಷದಲ್ಲಿ ಭೀಮಾರ್ಜುನ ಬಳಿಗೆ ಬಂದು ಯಾಗಕ್ಕೆ ನಾಲ್ಕು ಗಾಡಿಗಳಷ್ಟು ಕಟ್ಟಿಗೆ ಬೇಕಾಗಿರುವುದನ್ನು ತಿಳಿಸುತ್ತಾರೆ. ಅದಕ್ಕೆ ಭೀಮಾರ್ಜುನರು ಈ ಕ್ಷಾಮ ಕಾಲದಲ್ಲಿ ಎಂತಹ ಯಾಗ ಮಾಡುವುದು ಎಂದು ಕಟ್ಟಿಗೆ ಕೊಡಲು ನಿರಾಕರಿಸುತ್ತಾರೆ. ನಕುಲ ಸಹದೇವರಿಬ್ಬರು ತಮ್ಮ ಅರಮನೆಯಲ್ಲಿರುವ ಅರ್ಧ ಭಾಗ ಕಟ್ಟಿಗೆಯನ್ನು ನೀಡಲು ಒಪ್ಪಿಗೆ ಸೂಚಿಸುತ್ತಾರೆ. ಆದರೆ ಅದು ಕೇವಲ ಒಂದೇ ಗಾಡಿಯಷ್ಟು ಇರುವುದನ್ನು ಕಂಡು ಅವರು ಕರ್ಣನ ಬಳಿಗೆ ಬಂದು ತಮ್ಮ ಅವಶ್ಯಕತೆಯನ್ನು ಪ್ರಸ್ತಾಪಿಸುತ್ತಾರೆ. ಆಗ ಕರ್ಣನು ಅದಕ್ಕೇನು ಧಾರಾಳವಾಗಿ ಕೊಡುತ್ತೇನೆಂದು ಹೇಳಿ ತನ್ನ ಅರಮನೆಯಲ್ಲಿರುವ ಎಲ್ಲಾ ಕಟ್ಟಿಗೆಯನ್ನು ನೀಡಿದರೂ ಅದು ಯಾಗಕ್ಕೆ ಸಾಕಾಗದಿರಲು, ತನ್ನ ಬಂಟರಿಗೆ ಅರಮನೆಯಲ್ಲಿರುವ ಕೆಲವಾರು ಮರದ ತೊಲೆ, ತುಂಡಗಳನ್ನೆಲ್ಲಾ ಕಡಿದು ಯಾಗಕ್ಕೆ ನೀಡಲು ಆದೇಶಿಸುತ್ತಾನೆ. ಆಗ ಕೃಷ್ಣನು ಧರ್ಮರಾಯನನ್ನುದ್ದೇಶಿಸಿ ಈಗ ಅರ್ಥವಾಯಿತೆ? ನಾನೇಕೆ ಕರ್ಣನನ್ನು ಬಹಳ ಮೆಚ್ಚಿಕೊಳ್ಳುವೆನೆಂದು ಎಂದು ನುಡಿಯುತ್ತಾನೆ. ಅದಕ್ಕೆ ಧರ್ಮರಾಯನು ನಮಗೇಕೆ ಈ ರೀತಿಯ ಭಾವನೆಗಳು ಆ ಸಮಯದಲ್ಲಿ ಉಂಟಾಗಲಿಲ್ಲವೆಂದು ಕೃಷ್ಣನನ್ನು ಕೇಳಿದಾಗ, ಕೃಷ್ಣನು ಧರ್ಮರಾಯ ನಿಜವಾದ ದಾನಿಗೆ ದಾನ ನೀಡುವ ಮನಸ್ಸು ಅಂತರಾಳದಿಂದ ಮೂಡಿ ಬರುತ್ತದೆ. ಇಲ್ಲವಾದರೆ ಹಲವು ರೀತಿಯ ನೆವ ತಲೆದೋರಿ ದಾರಿ ಇಲ್ಲದಂತಾಗುತ್ತದೆ ಎಂದು ವಿವರಿಸುತ್ತಾನೆ.

ದಾನಕ್ಕೆ ಮಹತ್ವ ಉಂಟಾಗಬೇಕಾದರೆ ನೀಡುವಾತ ಹಾಗು ಪಡೆಯುವಾತನಿಗೆ ಆ ವಸ್ತು ಪ್ರಿಯತಮವಾಗಿರಬೇಕು. ಹಿಂದೆ ಎಲ್ಲಾ ದೇಶಗಳಲ್ಲೂ ಚರಾಸ್ತಿಯನ್ನು ಪ್ರತಿಫಲಾಪೇಕ್ಷೆಯಿಲ್ಲದೆ ನೈತಿಕವಾಗಿ ಹಸ್ತಾಂತರಿಸುವ ವಾಡಿಕೆ ಇತ್ತು. ಮೌಖಿಕವಾಗಿ ಹಸ್ತಾಂತರಿಸಿ ಸ್ವಾಧೀನ ಹೊಂದಲಿಕ್ಕೆ ಅವಕಾಶವಿತ್ತು. ಈಗ ಮೋಸಗಾರಿಕೆ ಹೆಚ್ಚಾಗಿ ಕ್ರಮೇಣ ಲಿಖಿತ ರೂಪದಲ್ಲಿ (ದಾನಪತ್ರ) ದಾಖಲಿಸಿ ಕಾಯಿದೆಗಳಂತೆ ಅವು ಕರಾರು ಮೂಲಕವೇ ಹಸ್ತಾಂತರ ಮಾಡಬೇಕಾಗಿ ಬೆಳೆದುಬಂದಿದೆ.

ಗ್ರಂಥಋಣ

೧. ಕನ್ನಡ ವಿಶ್ವಕೋಶ (೧೯೭೭) : 'ದಾನ' ಸಂಪುಟ ೮, ಮೈಸೂರು, ಮೈಸೂರು ವಿ. ವಿ.

೨. ಬಸವರಾಜು, ಎಲ್. (೧೯೮೮) : ಸರ್ವಜ್ಞನ ವಚನಗಳು, ಮೈಸೂರು, ಗೀತಾ ಬುಕ್ ಹೌಸ್.

೩ ಜ್ಞಾನದೇವ (೧೯೮೭) : ಸರ್ವಜ್ಞನ ಪದಗಳು, ಮೈಸೂರು, ಪೂರ್ಣಿಮ ಪ್ರಕಾಶನ

೪. ಚೆನ್ನಪ್ಪ, ಉತ್ತಂಗಿ (೧೯೮೫) : ಸರ್ವಜ್ಞನ ವಚನಗಳು, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

೫. ಪುರಾಣಿಕ, ಸಿದ್ದಯ್ಯ, (೧೯೬೪) : ಶರಣ ಚರಿತಾಮೃತ, ಮೈಸೂರು, ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿ.

೬. ಬಲ್ಲಾಳ, ಎ. ವಾಸುದೇವ (೧೯೮೨) : ಸುಭಾಷಿತ ಸೌರಭ, ಬೆಂಗಳೂರು, ಲಿಪಿ ಪ್ರಕಾಶನ.

೭. ಸ್ವಾಮಿ ಪುರುಷೋತ್ತಮಾನಂದ (೧೯೯೨) : ಮಿಂಚಿನ ಗೊಂಚಲು, ಐಮಂಗಲ, ಶ್ರೀ ರಾಮಕೃಷ್ಣ ಸೇವಾಶ್ರಮ.

೮. Encyclopaedia of religion (1987) : "Charity" ; Vol. 3. New York, Macmillan Publications.

ಅಶೋಕ ಆಳ್ವ ಕೆ.

ಮಕ್ಕಳ ಮುಡಿ ಒಪ್ಪಿಸುವ ಸಾಂಕೇತಿಕ ಆಚರಣೆ : 'ಕೇಪು ಕಜಂಬು'

[ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜರಗುವ ಧಾರ್ಮಿಕ ಹಾಗೂ ಸಾಮಾಜಿಕ ಉತ್ಸವವೊಂದರ ವಿವರವಾದ ಸುಂದರ ಚಿತ್ರ ಇಲ್ಲಿದೆ—ಸಂ.]

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕೇಪು ಗ್ರಾಮದ ಪ್ರಮುಖ ಗ್ರಾಮದೇವತೆ 'ಶ್ರೀ ದುರ್ಗಾಪರಮೇಶ್ವರಿ ಅಮ್ಮ' ಅಥವಾ ಶ್ರೀ ಉಳ್ಳಾಲ್ತಿ ಅಮ್ಮ' ನವರ ವಾರ್ಷಿಕ ಜಾತ್ರೆಯನ್ನು 'ಕಜಂಬು' ಎಂಬ ಹೆಸರಿನಿಂದ ಕರೆಯುತ್ತಾರೆ. ಉಳ್ಳಾಲ್ತಿಯು ಮಾತೃದೇವತೆಯಾಗಿದ್ದು ಆಕೆಗೆ ಮಕ್ಕಳನ್ನೊಪ್ಪಿಸಿ ಮತ್ತೆ ಪ್ರಸಾದ ರೂಪವಾಗಿ ಪಡೆಯುವ ಪದ್ಧತಿ ಇದು ಎಂದು ನಂಬಲಾಗಿದೆ. ಈ ಕ್ಷೇತ್ರಕ್ಕೆ ಮಕ್ಕಳನ್ನೊಪ್ಪಿಸುವ ಹರಕೆ ಹೊತ್ತರೆ ಮಕ್ಕಳಿಲ್ಲದವರಿಗೆ ಸಂತಾನಭಾಗ್ಯ ದೊರಕುತ್ತದೆ ಎಂಬ ನಂಬಿಕೆ ಇದೆ. ಅಲ್ಲದೆ ಹುಟ್ಟಿದ ಮಕ್ಕಳ ಕ್ಷೇಮಾಭಿವೃದ್ಧಿಯೂ ಈ ಹರಕೆಯ ಮುಖ್ಯ ಆಶಯ. ಜಿಲ್ಲೆಯ ಇತರೆಡೆಗಳಲ್ಲಿ ಎಲ್ಲಿಯೂ ಕಂಡುಬಾರದ ಈ ಕಜಂಬು ಉತ್ಸವವು ಕೇಪುವಿಗೆ ಸಂಬಂಧಿಸಿದಂತೆ ಮಾತ್ರ ನಡೆಯುತ್ತದೆ. ಅಲ್ಲದೆ ತನ್ನದೇ ಆದ ಕೆಲವು ವಿಶಿಷ್ಟ ಆಚರಣೆಗಳೊಂದಿಗೆ ಇದು ಪ್ರಸಿದ್ಧವಾಗಿದೆ. ಕಾಲದ ದೃಷ್ಟಿಯಿಂದ ಈ ಉತ್ಸವವು ಧನು ಸಂಕ್ರಮಣದಿಂದ (ಡಿಸೆಂಬರ್ ೧೬, ೧೭) ಆರಂಭಗೊಂಡು ಐದು ದಿನಗಳವರೆಗೆ ನಡೆಯುತ್ತದೆ. ವಿಟ್ಲ ಅರಸುಮನೆತನದ ನೇರ ಆಡಳಿತಕ್ಕೊಳಪಟ್ಟ ಈ ದೇವಾಲಯದ ಪ್ರತಿಯೊಂದು ಕೆಲಸವೂ ಹೆಚ್ಚಿನ ಬದಲಾವಣೆಗಳಿಲ್ಲದೆ ವಾಡಿಕೆಯಂತೆ ಇಂದಿಗೂ ನಡೆದುಬರುತ್ತಿರುವುದು ಇಲ್ಲಿಯ ವೈಶಿಷ್ಟ್ಯ.

ಕಜಂಬು ಎಂಬುದರ ಒಟ್ಟು ಕ್ರಿಯಾಚರಣೆಗಳನ್ನು ಈ ಕೆಳಗಿನಂತೆ ಗಮನಿಸಬಹುದಾಗಿದೆ :

೧. ಆಗಿನೊ[1] ಆಪುನೆ (ಅಜ್ಞೆ ಆಗುವುದು) : ಇದು ಕಜಂಬು ಉತ್ಸವದ ಪ್ರಾರಂಭಿಕ ವಿಧಿ. ಧನು ಸಂಕ್ರಮಣಕ್ಕೆ ಹತ್ತು ದಿನ ಮುಂಚಿತವಾಗಿ ವಿಟ್ಲ ಅರಮನೆಯ ಪ್ರತಿನಿಧಿಗಳೂ, ಊರ ಗುರಿಕ್ಕಾರ (ಮುಖ್ಯಸ್ಥ)ರೂ, ಉಳ್ಳಾಲ್ತಿ ಸನ್ನಿಧಿಗೆ ಬಂದು ಎಳನೀರು ಕಾಣಿಕೆ ಸಲ್ಲಿಸಬೇಕು. ಇದನ್ನು 'ಬೊಂಡೊಕಾನಿಗೆ' ಎಂಬುದಾಗಿ ಕರೆಯುತ್ತಾರೆ. ಅನಂತರ ದೇವಿಗೆ ಪೂಜೆ ಸಲ್ಲಿಸಿ ಪ್ರಸಾದವನ್ನು ಕೊಂಡು ಹೋಗಿ ಎಲ್ಲರ ಸಮ್ಮುಖದಲ್ಲಿ ವಿಟ್ಲ ಅರಸರಿಗೆ ಒಪ್ಪಿಸುತ್ತಾರೆ. ಮಲರಾಯ ದೈವದ ಪಾಪಿಯು "ದೇವರ ಸ್ಥಳದಲ್ಲಿ 'ಕಾವಿಗೆ'ಯಾಗಿದೆ. ತಾವು ಒಂದು ಕಜಂಬು ಉತ್ಸವವನ್ನು ನಡೆಸಿಕೊಡಬೇಕು" ಎಂದು ಅರಿಕೆಮಾಡಿಕೊಳ್ಳುತ್ತಾರೆ ಅಂದೇ ಸೀಮೆಯ ಗುರಿಕಾರರಿಗೆ ಅರಸರಿಂದ 'ಶ್ರೀ ಪಂಚಲಿಂಗ' ಎಂಬ ಮುದ್ರೆಯೊಂದಿಗೆ ಓಲೆಗರಿಯಲ್ಲಿ ಕಜಂಬಿನ ಓಲೆಯು ಹೊರಡುತ್ತದೆ ಈ ಒಟ್ಟು ಕ್ರಿಯೆಗೆ 'ಆಗಿನೊ ಆಪುನೆ' (ಆಜ್ಞೆ ಆಗುವುದು) ಎನ್ನುತ್ತಾರೆ. ಅಂದಿನಿಂದ ಉತ್ಸವ ಮುಗಿಯುವ ತನಕ ಗ್ರಾಮ ಹಾಗೂ ನೆರೆಯ ಗ್ರಾಮದಲ್ಲಿ ಯಾವುದೇ ರೀತಿಯ ಮಂಗಳಕಾರ್ಯಗಳು, ಸಭೆ ಸಮಾರಂಭಗಳು, ಉತ್ಸವಗಳು, ಕೋಳಿ ಅಂಕದಂತಹ ಕ್ರೀಡೆಗಳು, ಪ್ರಾಣಿಹತ್ಯೆ ಇತ್ಯಾದಿ ನಡೆಯಬಾರದೆಂಬ ನಿಷೇಧಗಳಿವೆ. ಸಾಮೂಹಿಕವಾಗಿ ಎಲ್ಲರೂ ಗ್ರಾಮದೇವತೆಯ ಉತ್ಸವದಲ್ಲಿ ಪಾಲ್ಗೊಳ್ಳಬೇಕೆಂಬ ಉದ್ದೇಶದಿಂದ ಗ್ರಾಮಸ್ಥರು ಈ ದಿನಗಳಲ್ಲಿ ಹೊರಗೆ ಹೋಗಿ ತಂಗಬಾರದು ಎಂಬ ನಿಯಮವೂ ರೂಪಿತವಾಗಿರುವುದನ್ನು ಗಮನಿಸಬಹುದು.

೨. 'ನಾಲ್ಪೊಳು ಜಪ್ಪುನೆ'(ನಾಲ್ಪೊಳು ಇಳಿಯುವುದು) : ಅರಮನೆಯ ನಾಲ್ಕು ಮಂದಿ ಭಟರನ್ನು 'ನಾಲ್ಪೊಳು' ಎಂದು ಕರೆಯಲಾಗುತ್ತದೆ. ಬಿಳಿಯ ಕಚ್ಚೆ ಹಾಕಿ, ಹೆಗಲ ಮೇಲೆ ಚೌಕವನ್ನು ಹಾಕಿಕೊಂಡು ತಲೆಗೆ ಬಿಳಿಯ ಮುಂಡಾಸನ್ನು ಇಟ್ಟುಕೊಂಡು ಇವರು ಆಗಿನೊ ಆದ ಆರನೆಯ ದಿನ ವಿಟ್ಲ ಅರಸರ ಕೈಯಿಂದ ವೀಳ್ಯ ಪಡೆದು ಕೇಪು ಅಮ್ಮನವರ ಸನ್ನಿಧಿಯಲ್ಲಿ ಅಂಗಣಕ್ಕೆ ಹಾರೆ ಹಾಕಲು ಅನುಮತಿಯನ್ನು ಕೇಳುತ್ತಾರೆ. ಅಂತೆಯೇ ಅರಸರು ಸಾಂಪ್ರದಾಯಿಕವಾಗಿ ಅಮ್ಮನವರ ಸನ್ನಿಧಿಯಲ್ಲಿ ನಿಮ್ಮ ಕಾರ್ಯವನ್ನು ಮುಂದುವರೆಸಿ ಎಂಬುದಾಗಿ ಅಪ್ಪಣೆಕೊಡುತ್ತಾರೆ. ಅಲ್ಲಿಂದ ಹೊರಟ ನಾಲ್ಪೊಳುಗಳು ಅಂದು ರಾತ್ರಿ ಎರುಂಟು ಮಂಟಮೆ ಎಂಬಲ್ಲಿ ವಿಶ್ರಮಿಸಿ ಮರುದಿನ ಬೆಳಗ್ಗೆ ತಾಮ್ರಜೆ ಎಂಬಲ್ಲಿನ ತೋಟದಿಂದ

1. ನಾಲ್ಪೊಳು : ನಲ್ಪೊ + ಆಳ್—ಇದು ನಾಲ್ಪೊಳು ಆಗಿರಬೇಕು. ನಲ್ವತ್ತು ಮಂದಿ ಆಳುಗಳು ಎಂಬರ್ಥದಲ್ಲಿ ಈ ಹೆಸರು ಬಂದಿದೆ. ಮದಿಪಿನ ಮಾತಿನಲ್ಲಿ 'ನಲ್ಪೊ ಮಂದಿ ನಾಲ್ಪೊಳು ಜತ್ತ್‌ದ್' (ನಲ್ವತ್ತು ಮಂದಿ ನಲ್ವತ್ತಾಳು ಇಳಿದು) ಎಂಬುದಾಗಿ ಬರುತ್ತದೆ. ಇದರಿಂದ ಹಿಂದಿನ ಕಾಲದಲ್ಲಿ ನಲ್ವತ್ತು ಮಂದಿ ಭಟರು ಬರುತ್ತಿದ್ದರೆಂದು ತಿಳಿಯುತ್ತದೆ. ಇಂದು ನಲ್ವತ್ತು ಮಂದಿಯ ಪ್ರತೀಕವಾಗಿ ನಾಲ್ಕು ಮಂದಿ ಮಾತ್ರ ಕೇಪಿಗೆ ಬರುವುದು ವಾಡಿಕೆ. ಈ ಕೆಲಸಕ್ಕೆ ಬಂಟ ಜನಾಂಗದ ನಿರ್ದಿಷ್ಟ ಕುಲದವರನ್ನು ಆಯ್ಕೆ ಮಾಡಲಾಗುತ್ತದೆ.

ತಮ್ಮ ಕೆಲಸಗಳಿಗೆ ಬೇಕಾಗುವ ಅಡಕೆ, ಅಡಕೆಯ ಹಾಳೆಗಳನ್ನು ಸಂಗ್ರಹಿಸಿಕೊಂಡು ಕೇಪಿಗೆ ಬರುತ್ತಾರೆ. ಆರಂಭದಲ್ಲಿ ತಮ್ಮ ವಾಸ್ತವ್ಯದ ಪಾರಂಪರಿಕ ಮನೆಗೆ ಬರುವ ಇವರು ಹೊಸ ನಾಲ್ಕು ಚಾಪೆ[1]ಗಳನ್ನು ಚಾವಡಿಯಲ್ಲಿ ಹಾಸಿ ಕುಳಿತು ಹಾಲು ಸ್ವೀಕರಿಸಿ ಪಟ್ಟ[2] ಕೊಟ್ಟು ಅಲ್ಲಿಂದ ದೇವಸ್ಥಾನಕ್ಕೆ ಹೋಗುತ್ತಾರೆ. ದೇವರ ಪೂಜಾ ಕಾರ್ಯದ ಅನಂತರ ದೇವಾಲಯದ ಪ್ರಾಂಗಣಕ್ಕೆ ಹಾರ ಹಾಕುವ ಸಾಂಕೇತಿಕ ಕ್ರಿಯೆಯನ್ನು ನೆರವೇರಿಸುತ್ತಾರೆ. ಇದಕ್ಕೆ 'ಅಂಚಿಣೊಗು ಕೊಟ್ಟು ಪಾಡುನೆ' (ಅಂಗಳಕ್ಕೆ ಹಾರೆ ಹಾಕುವುದು) ಎಂದು ಹೆಸರು. ಈ ವಿಧಿಯ ಅನಂತರವೇ ಉಳಿದವರು ಪ್ರಾಂಗಣದ ಹುಲ್ಲುಕಡ್ಡಿಗಳನ್ನು ಶುಚಿಗೊಳಿಸಬಹುದೇ ಹೊರತು ಉಳಿದ ಸಂದರ್ಭಗಳಲ್ಲಿ ಹಾರೆ ಪಿಕ್ಕಾಸುಗಳಿಂದ ಇಲ್ಲಿ ಅಗೆಯುವುದನ್ನು ನಿಷೇಧಿಸಲಾಗಿದೆ. ಈ ಕ್ಷೇತ್ರವಿಡೀ 'ನಿಧಿ' ಇದೆಯೆಂದು ನಂಬಲಾಗಿದೆ.

ಅನಂತರ ಇವರು ಧ್ವಜಾರೋಹಣದವರೆಗೆ ಗ್ರಾಮ ಹಾಗೂ ನೆರೆಯ ಗ್ರಾಮಗಳಿಗೆ ವಾಡಿಕೆಯಂತೆ ಭೇಟಿ ನೀಡಿ ಕಾಣಿಕೆಗಳನ್ನು ಸ್ವೀಕರಿಸುತ್ತಾರೆ. ಗ್ರಾಮದ ಜನರು ಇವರನ್ನು ಬಹಳ ಭಯಭಕ್ತಿಗಳಿಂದ ಸ್ವಾಗತಿಸುತ್ತಾರೆ. ಹೋದಲೆಲ್ಲ ಇವರಿಗೆ ಸಮ್ಮಾನದ ವ್ಯವಸ್ಥೆ ಇರುತ್ತದೆ. ಆಗಿನ ಆದ ಅನಂತರ ಗ್ರಾಮಗಳಲ್ಲಿ ಪ್ರಾಣಿಹತ್ಯೆ ನಡೆಸಬಾರದೆಂಬ ನಿಯಮವಿದ್ದರೂ ಇವರ ಸಮ್ಮಾನಗಳಿಗೆ ಬೇಕಾಗುವ ಕೋಳಿಗಳನ್ನು ಆಯಾ ಸ್ಥಳಗಳಲ್ಲಿ ಇವರೇ ಕೊಲ್ಲುವುದು ಕ್ರಮ. ತಾವು ಭೇಟಿ ನೀಡಬೇಕಾದ ಸ್ಥಳಗಳು ಸಮೀಪಿಸುತ್ತಿದ್ದಂತೆ ತಮ್ಮ ಬರುವಿಕೆಯನ್ನು 'ಹೂಂ' ಎನ್ನುವ ದೀರ್ಘದ ಧ್ವನಿಯ ಮೂಲಕ ತಿಳಿಸುತ್ತಾರೆ. ಆ ಊರಿನ ಜನ ಒಟ್ಟು ಸೇರಿ ಇವರನ್ನು ಸ್ವಾಗತಿಸಿ ಕಾಣಿಕೆಗಳನ್ನು ಅರ್ಪಿಸುತ್ತಾರೆ. 'ನಾಲ್ಬೊಳಿದಂಡಿಗೆ'[3] ಹರಕೆಯಾಗಿ ಒಪ್ಪಿಸಿದರೆ ಕೋಳಿಸಡಿಗೆ ಬರುವ ಯಾವುದೇ ರೋಗಗಳು ದೂರವಾಗುತ್ತವೆ ಎಂಬ ನಂಬಿಕೆ ಇದೆ. ದೇವಾಲಯದ ಪೂಜಾಕಾರ್ಯಗಳಿಗೆ ಬೇಕಾಗುವ ಬತ್ತಿ, ಕೋಲ್ರಿ (ಕೋಲುಬತ್ತಿ), ಹಾಳೆಯಿಂದ ಡೊನ್ನೆ ಇತ್ಯಾದಿಗಳನ್ನು ತಯಾರಿಸಿ ಕೊಡುವ ಕೆಲಸವೂ ಇವರದಾಗಿದೆ. ಒಟ್ಟಿನಲ್ಲಿ ಜಾತ್ರೆಯ ಸಲುವಾಗಿ ಕಪ್ಪಕಾಣಿಕೆ

---

1. ನಾಲ್ಬೊಳುಗಳಿಗೆ ನಾಲ್ಕು ಹೊಸ ಚಾಪೆಗಳನ್ನು ನಾಲ್ಕು ನಲಿಕೆ ಕುಟುಂಬದವರು ತಂದು ಕೊಡಬೇಕು.

2. ಪಟ್ಟ–ವೀಳ್ಯಕೊಡುವುದಕ್ಕೆ ಈ ಹೆಸರು.

3. ನಾಲ್ಬೊಳಿ ದಂಡ್: ನಾಲ್ಬೊಳುಗಳು ಗ್ರಾಮ ಹಾಗೂ ನೆರೆಯ ಗ್ರಾಮಗಳಿಗೆ ಭೇಟಿ ನೀಡಿದಾಗ ಅಲ್ಲಿನ ಜನರು ಕೋಳಿಗಳನ್ನು ಇವರಿಗೆ ಹರಕೆಯಾಗಿ ಒಪ್ಪಿಸುತ್ತಾರೆ. ಇವುಗಳಲ್ಲಿ 39 ಕೋಳಿಗಳನ್ನು ಬಂಟ್ವಾಳ ತಾಲೂಕಿನ ಪೆರುವಾಯಿ ಎಂಬಲ್ಲಿ ಪ್ರಾರ್ಥನೆಮಾಡಿ ದಂಡಿಗೆ ಹಾಕುತ್ತಾರೆ. ಈ ದಂಡನ್ನು ಹೊತ್ತುಕೊಳ್ಳಲು ಒಬ್ಬಾತ ನಿಯಮಿತನಾಗಿರುತ್ತಾನೆ. ಧ್ವಜಾರೋಹಣದ ದಿನ ಇದನ್ನು ಹೊತ್ತುಕೊಂಡು ಕೇಪಿಗೆ ಬರಬೇಕು. ಈ ಕೋಳಿಗಳನ್ನು ಕೇಪು ಕ್ಷೇತ್ರದಲ್ಲಿ ಅಂದು ರಾತ್ರಿ 'ಗಂಡಗಣ'ಗಳಿಗಾಗಿ ಬಲಿಕೊಡಲಾಗುತ್ತದೆ. ಈ ಬಲಿಗೊಂಡ ಕೋಳಿಗಳು ಆಯಾ ಗುರಿಕಾರರಿಗೆ ಇಂತಿಷ್ಟರಂತೆ ಸಲ್ಲಬೇಕೆಂಬ ನಿಯಮವಿದೆ.

ಗಳನ್ನು ಸಂಗ್ರಹಿಸುವ, ಶಾಸ್ತ್ರೀಯ ಪೂರ್ವ ಸಿದ್ಧತೆಗಳನ್ನು ನಡೆಸುವ ಕೆಲಸ ಇವರದಾಗಿರುತ್ತದೆ. ಈ ಕೆಲಸಕ್ಕಾಗಿ ಇವರಿಗೆ ಕಾಣಿಕೆಯಾಗಿ ದೊರೆಯುವ ಪ್ರತಿ ಫಲಗಳೇ ಹೊರತು ಯಾವುದೇ ಸಂಭಾವನೆ ದೊರೆಯುವುದಿಲ್ಲ. ಒಂದು ಬಾರಿ ನಾಲ್ಪೊಳುಗಳು ಕೇಪಿಗೆ ಬಂದರೆ ಧ್ವಜಾವರೋಹಣವಾಗದೆ ಯಾವುದೇ ಕಾರಣಕ್ಕೆ ಇರುವ ಮನೆಗೆ ಹೋಗುವಂತಿಲ್ಲ

'ಕೊಡಿ ಏರುನೆ' (ಧ್ವಜಾರೋಹಣ)

ಧನು ಸಂಕ್ರಮಣದಂದು ರಾತ್ರಿ ಅರಮನೆಯವರು, ಊರಿನ ಗುರಿಕ್ಕಾರರು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ಧ್ವಜಾರೋಹಣವಾಗುತ್ತದೆ. ಧ್ವಜಾರೋಹಣದ ಅನಂತರ ಧ್ವಜಸ್ಥಂಭವನ್ನು ಹರಕೆಯಾಗಿ ಬಂದ ಅಡಕೆಗೊನೆ, ಎಳನೀರಿನ ಗೊನೆ, ಕಬ್ಬು, ಇತ್ಯಾದಿಗಳಿಂದ ಅಲಂಕರಿಸಲಾಗುತ್ತದೆ. ಹೊಸ ಫಲಗಳನ್ನು ದೇವರಿಗೆ ಅರ್ಪಿಸಿದರೆ ಮುಂದೆ ಅಧಿಕಫಲ ಲಭಿಸುತ್ತದೆ ಎಂಬ ನಂಬಿಕೆ ಇದೆ.

'ಕಜಂಬು':

ಧ್ವಜಾರೋಹಣದ ಮರುದಿನವೇ ಐತಿಹಾಸಿಕ ಖ್ಯಾತಿಯ ಕಜಂಬು ಉತ್ಸವವು ನೆರವೇರುತ್ತದೆ. ಈ ಕ್ಷೇತ್ರದಲ್ಲಿ ನಡೆಯುವ ಕಾಲಾವಧಿ ಉತ್ಸವಗಳಲ್ಲಿ ಕಜಂಬು ಉತ್ಸವವು ಮಹತ್ತರವಾದುದು. ಅಂದು ರಾತ್ರಿ ವಿಟ್ಲ ಅರಸರನ್ನು ಕೇಪು ಗ್ರಾಮದ ಗುಡಿಯಲ್ಲಿ ಗ್ರಾಮದ ಹಾಗು ಎರಡು ಊರಿನ ಎಂದರೆ ನೆರೆಗ್ರಾಮದ ಗುರಿಕ್ಕಾರರು ಎದುರುಗೊಂಡು ರಾಜಮರ್ಯಾದೆಯಲ್ಲಿ ಉಳ್ಳಾಲ್ತಿ ಸ್ಥಾನಕ್ಕೆ ಕರೆತರುತ್ತಾರೆ. ದೇವರಿಗೆ ಕಾಣಿಕೆಯಾಗಿ ಅಕ್ಕತಂಗಿಯರೆಂದು (ಎಲ್ಯಕ್ಕೆ-ನೇಲ್ಯಕ್ಕೆ) ಹೇಳಲಾಗುವ ಎರಡು ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿಟ್ಟು ಮೂರು ಸುತ್ತು ಬಲಿ ಉತ್ಸವವು ಶಿಷ್ಟ ರೀತಿಯಲ್ಲಿ ಸಕಲ ವೈಭವಗಳಿಂದ ನೆರವೇರುತ್ತದೆ. ಅನಂತರ ಪೂಜಾಕಾರ್ಯಗಳು ನೆರವೇರಿದ ಬಳಿಕ ಅರಸರೂ ಊರವರೂ ಸೇರಿ ದೇವಿಗೆ ಪ್ರಾರ್ಥನೆ ಸಲ್ಲಿಸಿ 'ಕಜಂಬು' ಆರಂಭವಾಗುತ್ತದೆ.

'ಶಿಶುಬಾಲೆಲೆಗ್ ಕಜಂಬು' (ಮಕ್ಕಳಿಗೆ 'ಕಜಂಬು' ಆಚರಣೆ) ಎಂಬ ಮುಡುಪಿನ ಮಾತಿನಿಂದ ಇದು ಮುಖ್ಯವಾಗಿ ಚಿಕ್ಕಮಕ್ಕಳಿಗೆ ನಡೆಯುವ ಹರಕೆ ಉತ್ಸವ ಎಂಬುದು ತಿಳಿಯುತ್ತದೆ. ಈ ಹರಕೆಗೆ ನಿರ್ದಿಷ್ಟ ಪ್ರಾಯದ ಮಿತಿ ಇಲ್ಲ. ಹರಕೆಯ ಮಕ್ಕಳನ್ನು ದೇವರ ಜಳಕದ ಗುಂಡಿಯಲ್ಲಿ ಸ್ನಾನ ಮಾಡಿಸಿ ದೇವಿಯ ಗರ್ಭಗುಡಿಯ ಮೆಟ್ಟಿಲಲ್ಲಿ ನಿಂತಿರುವ ಇಬ್ಬರು ಗುರಿಕ್ಕಾರರ ಕೈಗೆ ಕೊಡಬೇಕು. ಅವರು ಮಗುವಿನ ತಲೆಯನ್ನು ಗರ್ಭಗುಡಿಯ ಮೆಟ್ಟಿಲಿಗೆ ತಾಗಿಸಿ ಹಿಂತಿರುಗಿ ನಮ್ಮ ಕೈಗೆ ಕೊಡುತ್ತಾರೆ. ಗರ್ಭಗುಡಿಯ ನಾಲ್ಕು ದಿಕ್ಕುಗಳಲ್ಲಿ ಕುಳಿತ ನಾಲ್ಪೊಳುಗಳಿಗೆ ಹರಕೆ ಸಲ್ಲಿಸಿ ಆಶೀರ್ವಾದ ಪಡೆದು ಹೇಳಿಕೊಂಡ ಹರಕೆಯಂತೆ ['ಪುಂಡಿ ಹಣವು' (ಹಿಡಿಹಣ), ತೊಟ್ಟಿಲಮಗು ಇತ್ಯಾದಿ] ಕಾಣಿಕೆ ಸಲ್ಲಿಸಿ ಪ್ರಸಾದವನ್ನು ಪಡೆದು

ಕೊಳ್ಳಬೇಕು. ಈ ಒಟ್ಟು ಕ್ರಿಯೆಗೆ 'ಕಜಂಬು ಹಾಡ್ಪಾವುನೆ' (ಕಜಂಬು ಹಾಕಿಸುವುದು) ಎಂದು ಹೆಸರು.

ಕಜಂಬು ಹರಕೆಯನ್ನು ಆರಂಭದಲ್ಲಿ ಸಲ್ಲಿಸುವ ಸರದಿ ಅರಸುಮನೆತನದ ಮಕ್ಕಳದ್ದಾಗಿರುತ್ತದೆ. ಅನಂತರ ಬ್ರಾಹ್ಮಣೇತರ ವರ್ಗದವರು ಸಲ್ಲಿಸಬಹುದು. ಈ ಹರಕೆಗೆ ಶುದ್ಧಾಚರಣೆ ಮುಖ್ಯ. ಹರಕೆಯ ಮಕ್ಕಳನ್ನು ಹಿಂದಿನ ದಿನದಿಂದಲೇ ಶುದ್ಧಾಚರಣೆಯಲ್ಲಿರುವಂತೆ ನೋಡಿಕೊಳ್ಳಲಾಗುತ್ತದೆ. ಅಕ್ಕಿಯಿಂದ ತಯಾರಿಸಿದ ಯಾವುದೇ ತಿನಿಸುಗಳನ್ನು ನೀಡಲಾಗುವುದಿಲ್ಲ; ಬದಲಾಗಿ ಇವರು ಬರೀ ಫಲಹಾರಗಳನ್ನಷ್ಟೇ ಸ್ವೀಕರಿಸಬಹುದಾಗಿದೆ. ಮೊಲೆಯುಣ್ಣುವ ಮಕ್ಕಳಾಗಿದ್ದಲ್ಲಿ ಅದರ ತಾಯಂದಿರು ಶುದ್ಧಾಚರಣೆಯನ್ನು ಪಾಲಿಸಬೇಕು. ಹೀಗೆ ಚಿಕ್ಕಮಕ್ಕಳ ಹರಕೆ ಹಾಗೂ ಶುದ್ಧಾಚರಣೆಯ ಪ್ರಾಮುಖ್ಯವನ್ನು ಗಮನಿಸಿಕೊಂಡೇ ಇಡೀ ಜಾತ್ರೆಗೆ ಯಾವುದೇ ರೀತಿಯ ವ್ಯಾಪಾರಗಳು, ಸಂತೆ ಇತ್ಯಾದಿ ಬರಬಾರದೆಂಬ ನಿಷೇಧ ಈ ಜಾತ್ರೆಯ ವೈಶಿಷ್ಟ್ಯವನ್ನು ತಿಳಿಸುತ್ತದೆ. ಹರಕೆ ಸಲ್ಲಿಸಲು ದೂರ ದೂರದಿಂದ ಬಂದವರ ವಾಸ್ತವ್ಯದ ಜವಾಬ್ದಾರಿಯನ್ನು ಗ್ರಾಮದ ಪ್ರತಿಯೊಬ್ಬನೂ ತನ್ನ ಶಕ್ತ್ಯಾನುಸಾರ ಇಂದಿಗೂ ತೆಗೆದುಕೊಳ್ಳುತ್ತಿರುವುದು ಸಂತೋಷದ ಸಂಗತಿ.

ಕಜಂಬು ಹರಕೆ ಯಾವುದೇ ಕಾರಣಕ್ಕೂ ಉಳಿದುಕೊಳ್ಳಬಾರದು. ಒಂದು ವೇಳೆ ಉಳಿದುಕೊಂಡರೆ ಹುಡುಗಿಯರು ಹೆಂಗಸರಾಗುವುದಿಲ್ಲ, ಎಷ್ಟೇ ಪ್ರಯತ್ನಿಸಿದರೂ ಗಂಡಿನ ಕಡೆಯಿಂದ ಸಂಬಂಧಗಳೂ ಬರುವುದಿಲ್ಲ ಇತ್ಯಾದಿ ನಂಬಿಕೆಗಳು ವಿಪುಲವಾಗಿವೆ.

'ನೆರಿ ಜಪ್ಪುನೆ' (ನೆರಿ ಇಳಿಯುವುದು) :

ವನದುರ್ಗೆಯ ಉತ್ಸವವನ್ನು ಈ ಹೆಸರಿನಿಂದ ಕರೆಯಲಾಗುತ್ತದೆ. 'ನೆರಿ ಜಪ್ಪುನೆ' ಶಬ್ದಕ್ಕೆ ಅರ್ಥೈಸುವುದು ಕಷ್ಟಸಾಧ್ಯವಾದರೂ ಅದರ ಒಟ್ಟು ಕ್ರಿಯಾಚರಣೆಗಳನ್ನು ಸಂಗ್ರಹಿಸಿ ಈ ಕೆಳಗಿನಂತೆ ನೋಡಬಹುದಾಗಿದೆ. ದೇವಸ್ಥಾನದ ಹೊರಪ್ರಕಾರದಲ್ಲಿ ಭೂತನರ್ತಕನು ಭೂತದ ಬಣ್ಣಗಾರಿಕೆ ಹಾಗೂ ವೇಷಭೂಷಣಗಳೊಂದಿಗೆ ಸಿದ್ಧವಾಗಿರುತ್ತಾನೆ. ಕಜಂಬು ಹರಕೆಯ ಹಣದ ಲೆಕ್ಕಾಚಾರವಾಗಿ ಗಂಟಿನ ಹಣಕ್ಕೆ ಅರಸರ ಮುದ್ರೆ ಬಿದ್ದೊಡನೆ ನಾಲ್ಕೊಳುಗಳಲ್ಲಿ ಒಬ್ಬಾನು ದೀವಟಿಗೆಯ ಬೆಳಕಿನಲ್ಲಿ "ಪೊಣ್ಣು ಪೊಣೊವು ದೂರೊ ಪೋಲೆ, ಪೊಣ್ಣು ಪೊಣ್ಣೊವು ದೂರೊ ಪೋಲೇ' (ಹೆಣ್ಣು ಹೆಂಗಸರು ದೂರ ಸರಿಯಿರಿ) ಎಂದು ಹೇಳುತ್ತಾ ದೇವಾಲಯಕ್ಕೆ ಒಂದು ಸುತ್ತು ಬರುತ್ತಾರೆ. ಇಷ್ಟು ಹೊತ್ತಿಗಾಗಲೇ ಇಡೀ ದೇವಾಲಯ ಸ್ತ್ರೀವಿಹೀನವಾಗಿರುತ್ತದೆ. ಭೂತದ ಒಂದು ಕೈಯಲ್ಲಿ ನಾಲ್ಕೊಳುಗಳೂ ಇನ್ನೊಂದು ಕೈಯಲ್ಲಿ ಬೊಂಟೆಗಾರ'[1] (ಬೇಟೆಗಾರ ?) ನೂ

1. ಬೊಂಟೆಗಾರ : ಈತ ಬಲ್ಲವ ಜನಾಂಗದವನು. ಭೂತಕ್ಕೆ ಕಳ್ಳು ಇತ್ಯಾದಿಗಳನ್ನು ಒದಗಿಸುವ ಕೆಲಸ ಈತನದು.

ಹಿಡಿದು ಹೊರ ಅಂಗಣಕ್ಕೆ ಇಳಿಸುತ್ತಾರೆ. ಭೂತವು ಆವೇಶದಲ್ಲಿ ಬಂದು ಉತ್ತರದ ಬಾಗಿಲಲ್ಲಿ ನಿಲ್ಲುತ್ತದೆ. ಈ ಸಂದರ್ಭ ಹಾಳೆಯ ಬೃಹತ್ ಆಕಾರದ ಅಣೆ ಹಾಗೂ ಮನುಷ್ಯನ ಮುಖವನ್ನು ಹೋಲುವ ಚಾಚಿದ ಕೆನ್ನಾಲಿಗೆಯ ಉಗ್ರರೂಪದ ಮುಖವಾಡವನ್ನು ಕಟ್ಟಿ ಕೈಗೆ ಲೋಹದ ಕಡಿ ತಲೆಯನ್ನೂ ಕೊಟ್ಟು ಸೀಮೆಯ ಗುರಿಕ್ಕಾರರು ಸೇರಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಆಗ ಭೂತಾವೇಶ ಗೊಂಡು ತನ್ನ ಉಗ್ರರೂಪವನ್ನು ತಾಳಿ ಮೆಟ್ಟಿಲಿಗೆ ಒಂದು ಒದೆತ ತುಳಿಯು ತ್ತದೆ. ಗರ್ಭಗುಡಿಯೆದುರಿನ ಮೆಟ್ಟಿಲಲ್ಲಿ ನಿಂತು ಅಲ್ಲಿಯೂ ಒಂದು ಒದೆತ ತುಳಿಯುತ್ತದೆ. ದಕ್ಷಿಣದ ಬಾಗಿಲಲ್ಲಿಯೂ ಈ ಕ್ರಿಯೆ ಜರಗುತ್ತದೆ. ಹೊರ ಅಂಗಣದ ಮೂಲಕ ಗರ್ಭಗುಡಿಗೆ ಮೂರು ಸುತ್ತು ಬರುವಾಗಲೂ ಪ್ರತಿಬಾಗಿಲಲ್ಲಿ ಈ ಕ್ರಿಯೆ ಪುನರಾವರ್ತನೆಯಾಗುತ್ತದೆ. ಕೊನೆಯ ಸುತ್ತಿನಲ್ಲಿ, ದೈವವು ಗರ್ಭ ಗುಡಿಗೆದುರಾಗಿ ಬಂದು ನಿಂತ ಕೂಡಲೇ ಅಣೆ ಹಾಗೂ ಮುಖವಾಡಗಳನ್ನು ತೆಗೆಯ ಲಾಗುತ್ತದೆ. ನಾಲ್ಗೊಳುಗಳಲ್ಲಿ ಒಬ್ಬಾತನು ಬಿಳಿಯ ಬಟ್ಟೆಯೊಂದರಲ್ಲಿ ಮೂರು ದಿನದೊಳಗಿನ ಕೋಳಿಯ ಮರಿಯೊಂದನ್ನು ಹೂವಿನೊಂದಿಗೆ ಹಾಕಿ ದೈವದ ಕೈಗೆ ಕೊಡುತ್ತಾನೆ. ದೈವವು ಕೋಳಿಮರಿಯನ್ನು ಹೂವಿನೊಂದಿಗೆ ಅಲ್ಲಿಯೇ ಹಿಚುಕಿ ಸಾಯಿಸಿ ಮೇಲಕ್ಕೆ ಚಿಮ್ಮುತ್ತದೆ. (ಹೀಗೆ ಚಿಮ್ಮಿದ ಕೋಳಿ ಮರಿಯು ಪಿಟ್ಲ ಬಾಕಿಮಾರು ಗದ್ದೆಗೆ ಹೋಗಿ ಬೀಳುತ್ತದೆ ಎಂಬ ಸ್ಥಳೀಯ ಐತಿಹ್ಯ ಇದೆ.) ಅನಂತರ ದೈವವು ಹಿಂದುಮುಂದಕ್ಕೆ ಚಲಿಸುತ್ತಾ ಬಾಯಲ್ಲಿ ಕೆಲವು ಮಾತುಗಳನ್ನಾಡಿ (?) ಪುನಃ ಮೂರು ಒದೆತ ಮೆಟ್ಟಿಲಿಗೆ ತುಳಿಯುತ್ತದೆ. ಕೂಡಲೇ ಪ್ರಜ್ಞೆ ತಪ್ಪಿದ ಭೂತ ನರ್ತಕನನ್ನು ಎತ್ತಿ ಸಾಗಿಸಲಾಗುತ್ತದೆ. ಕೆಲವೇ ಕ್ಷಣಗಳಲ್ಲಿ ನಡೆದುಬಿಡುವ ಈ ಕಾರಣಿಕ ಪ್ರದರ್ಶನವು ನೋಡಲು ರೌದ್ರವೂ, ಭಯಾನಕವೂ ಆಗಿರುತ್ತದೆ. ವನದುರ್ಗೆಯ ಉತ್ಸವವೆಂದು ಕರೆಯಲ್ಪಡುವ ಈ ಕ್ರಿಯಾಚರಣೆಯನ್ನು 'ನೆಂ ಜಪ್ಪುನೆ' ಎಂಬ ಹೆಸರಿನಿಂದ ಕರೆಯುತ್ತಾರೆ. ಇದನ್ನು ಸ್ತ್ರೀಯರು ನೋಡಬಾರದು ಎಂಬ ನಿಷೇಧವಿದೆ.

ಅದ್ಯಣೊ[1] 'ಪಾರಾವುನೆ' (ಅದ್ಯಣ ಹಾರಿಸುವುದು) :

ಕಜಂಬು ಕಾರ್ಯಕ್ರಮದ ಅನಂತರ ಮಲರಾಯ ದೈವದ ಪಾತ್ರಿಯಿಂದ ವಿಟ್ಲ ಅರಸರು, ಸೀಮೆ, ಎರಡು ಊರು ಹಾಗೂ ಗ್ರಾಮದ ಗುರಿಕಾರರ ಜೊತೆಯಲ್ಲಿ ಮಲರಾಯ ದೈವದ ಭಂಡಾರದ ಕೊಟ್ಟಿಗೆಯೆದುರಿನ 'ನೂರಾಳುಕಳ' (ಬಾಕಿ ಮಾರು ಗದ್ದೆ)ದಲ್ಲಿ 'ಅದ್ಯಣ ಏರಿಸುವಿಕೆ'ಯ ಕಾರ್ಯಕ್ರಮ ನೆರವೇರುತ್ತದೆ. ಹಿಂದಿನ

---

1. ಅದ್ಯಣ: ಗುರಾಣಿ. A shield: ತಡೆ An obstacle ಎಂಬರ್ಥಗಳಿವೆ. ಕೇಪುವಿನಲ್ಲಿ ಮರದಿಂದ ತಯಾರಿಸಿದ ಮೇಲ್ಮೈಯಲ್ಲಿ ಉಬ್ಬು ಆಕೃತಿಯಿರುವ ಗುರಾಣಿಯಂತಹ ಸಾಧನಕ್ಕೆ ಈ ಹೆಸರು.

ಕಾಲದಲ್ಲಿ ವಿಟ್ಲ ಅರಸರ ಗೌರವಾರ್ಥ ಎರಡು ಊರಿನ ಸಿಪಾಯಿಗಳು ಕವಾಯತು ನಡೆಸಿದುದರ ಸಾಂಕೇತಿಕ ರೂಪವಾಗಿ ಇಂದು ಈ ಆಚರಣೆ ನಡೆಯುವುದನ್ನು ನೋಡಬಹುದು.

ಧ್ವಜಾರೋಹಣವಾದ 5ನೇ ದಿನದಲ್ಲಿ ಧ್ವಜಾರೋಹಣವಾಗಿ ಮೂರು ದಿನಗಳ ಸಾಂಪ್ರದಾಯಿಕ ನ್ಯಾಯಯುತ ಕೋಳಿ ಅಂಕವು ಜರಗುತ್ತದೆ. ಯಾವುದೇ ರೀತಿಯ ಜೂಜು, ಜುಗಾರಿಗಳಿಗೆ ಎಡೆಯಿಲ್ಲದ ಈ ಕೋಳಿ ಅಂಕವು ವಾಡಿಕೆಯಂತೆ ಮಧ್ಯಾಹ್ನ ಆರಂಭಗೊಂಡು ರಾತ್ರಿಯಾಗುತ್ತಲೇ ಮುಕ್ತಾಯಗೊಳ್ಳುತ್ತದೆ. ಕಜಂಬು ಉತ್ಸವದ ಒಂದು ವಾರದ ಬಿಗಿಯನ್ನು ಕಂಡ ಜನರು ಈ ಕೋಳಿ ಅಂಕದ ಮೂಲಕ ಬಿಡುಗಡೆಯನ್ನು ಪಡೆಯುತ್ತಾರೆ.

ಕೇಪುವಿಗೆ ಸಂಬಂಧಿಸಿದ ಸ್ಥಳಪುರಾಣವೊಂದು ಈ ರೀತಿ ಇದೆ :

ಸುಮಾರು ೮೦೦ ವರ್ಷಗಳ ಹಿಂದೆ ವಿಟ್ಲ ಸೀಮೆಯನ್ನು ವಿಟ್ಲ ಅರಸರು ಆಳುತ್ತಿದ್ದ ಕಾಲದಲ್ಲಿ ಅರಸುಮನೆತನದ ಚೆನ್ನಮ್ಮ, ಚೆಲುವಮ್ಮ (ಇನ್ನೊಂದು ಪಾಠದಲ್ಲಿ ಎಲ್ಯಕ್ಕೆ ನೇಲ್ಯಕ್ಕೆ ಎಂದಿದೆ) ಎಂಬ ಅಕ್ಕತಂಗಿಯರು ತಮ್ಮ ೮೦ ಮಂದಿ ಭಟರನ್ನು ಕೇಪು ಗ್ರಾಮದಲ್ಲಿ (ಈಗ ದೇವಸ್ಥಾನ ಇರುವ ಜಾಗದಲ್ಲಿ) ನಿಧಿ (ಕೊಪ್ಪರಿಗೆ) ಅಗೆಯಲು ಕಳುಹಿಸಿದರೆಂದೂ ಅವರು ನಿಧಿ ಅಗೆಯಲಾರಂಭಿಸಿದಾಗ ಅದರ ರಕ್ಷಣೆಯಲ್ಲಿದ್ದ 'ವನದುರ್ಗೆ' ಎಂಬ ದೈವದ ಶಕ್ತಿಯಿಂದ ಅವರು ಅಸುನೀಗಿದರೆಂದೂ ಇದನ್ನರಿತ ಅಕ್ಕತಂಗಿಯರು ಅಲ್ಲಿಗೆ ಹೋದಾಗ ದೈವದ ಪ್ರಭಾವದಿಂದ ಅದೃಶ್ಯರಾದರೆಂದೂ ಐತಿಹ್ಯ ತಿಳಿಸುತ್ತದೆ.

ಆದೆಷ್ಟೋ ವರ್ಷಗಳ ಅನಂತರ ಈ ವನದುರ್ಗೆಯ ಸೇರಿಕೆಯಲ್ಲಿದ್ದ ಇಬ್ಬರ ಪ್ರೇತಗಳನ್ನು ಅರಸುಮನೆತನದವರು ತಂತ್ರಿಗಳ ಸಹಾಯದಿಂದ ಬೇರ್ಪಡಿಸಿ ಅವರಿಗೂ ಸದಾ ಅನ್ನ ಆಹಾರ ಸಿಗುವ ರೀತಿಯಲ್ಲಿ 'ಪಚ್ಚೆರಿ ನೈವೇದ್ಯ' (ಹಸಿ ಅಕ್ಕಿ ನೈವೇದ್ಯ-ಅಕ್ಕಿಯನ್ನು ತೊಳೆದು ದೀಪಕ್ಕೆ ತೋರಿಸಿ ನೈವೇದ್ಯ ಮಾಡುವುದಕ್ಕೆ ಈ ಹೆಸರು) ವ್ಯವಸ್ಥೆಮಾಡಿ ವನದುರ್ಗೆ ದೈವವನ್ನು ಅಲ್ಲಿಯೇ ಗುಡಿಕಟ್ಟಿಸಿ ಸ್ಥಾಪಿಸಿದರು. ಬ್ರಾಹ್ಮಣರಿಂದಲೇ ಪೂಜೆಪಡೆಯುವ ಉದ್ದೇಶದಿಂದ ಭೂತದ ಮಂಚ ಇರುವ ಸ್ಥಳದಲ್ಲಿ 'ಶ್ರೀಚಕ್ರ' ಸ್ಥಾಪಿಸಿ ನಿತ್ಯಪೂಜೆ ನೈವೇದ್ಯ ನಡೆಸುವ ಕ್ರಮವಿಟ್ಟುಕೊಂಡರು. ಭೂತಕ್ಕೆ ಸಂಕ್ರಮಣಗಳಂದು ಹಾಗೂ ಪಂಚಪರ್ವಗಳ[1] ದಿನಗಳಂದು ತಂಬಿಲ ಕಟ್ಟುವ ಕ್ರಮ ಮಾಡಲಾಯಿತು. ಈ ಕ್ಷೇತ್ರದಲ್ಲಿ ಶ್ರೀ ಚಕ್ರರೂಪದಲ್ಲಿ ದೇವಿಶಕ್ತಿಯೂ ಭೂತವಾಗಿ ವನದುರ್ಗೆಯೂ ಏಕಕಾಲದಲ್ಲಿ ಪೂಜಿಸಲ್ಪಡುತ್ತದೆ. (ಕೇಪು ಶ್ರೀ ದುರ್ಗಾಪರಮೇಶ್ವರಿ, ೧೯೮೬, ಪುಟ ೧-೨).

1. ಪಂಚಪರ್ವಗಳು : ಚೌತಿ, ದೀಪಾವಳಿ, ಪತ್ತನಾಜೆ (ತಿಂಗಳ ಹತ್ತನೆಯ ದಿನ) ಇತ್ಯಾದಿ ಹಬ್ಬಗಳು.

ಮೇಲಿನ ಸ್ಥಳಪುರಾಣದಿಂದ ತಿಳಿದುಬರುವಂತೆ ಇಲ್ಲಿ ಏಕಕಾಲದಲ್ಲಿ ಎರಡು ಶಕ್ತಿಗಳು ಆರಾಧನೆಯನ್ನು ಪಡೆಯುತ್ತವೆ: ೧. ವನದುರ್ಗೆ. ೨. ಉಳ್ಳಾಲ್ತಿ ಅಮ್ಮನವರು. 'ಉಳ್ಳಾಲ್ತಿ' ಎಂಬುದು 'ಉಳ್ಳಾಯೆ' ಎಂಬ ತುಳುಭಾಷೆಯ ಪುಲ್ಲಿಂಗದ ಸ್ತ್ರೀಲಿಂಗರೂಪ. ಉಳ್ಳಾಯೆ ಎಂಬುದಕ್ಕೆ ಸರಿಯಾಗಿ ಅದೇ ಅರ್ಥದ ಕನ್ನಡ ಶಬ್ದವೆಂದರೆ 'ಒಡೆಯ' ಎಂಬುದು. ಇದು ಸಂಸ್ಕೃತದಲ್ಲಿ 'ಪರಮೇಶ್ವರಿ' ಎಂಬುದರ ನೇರವಾದ ತುಳು ಅನುವಾದ. ಹೊಸಮುಹರಾಯ ಎಂಬ ಭೂತದ ಪಾಡ್ದನೆಯಲ್ಲಿ 'ಉಳ್ಳಾಲ್ತಿ'ಯನ್ನು 'ಪರಮೇಶ್ರಿ' ಅಂದರೆ 'ಪರಮೇಶ್ವರಿ' ಎಂದಿದೆ. ಹಾಗಾದರೆ ಆಕೆ ಭಗವತಿ ಎಂಬ ಮಹಾದೇವಿಯ ತುಳು ಅವತಾರವೆಂದಾಗುತ್ತದೆ" (ಗೋವಿಂದ ಪೈ, ೧೯೪೫. ಪುಟ ೧೧೬). ಈ ಅರ್ಥದಲ್ಲಿ ನೋಡಿದಾಗಲೂ ಈ ಕ್ಷೇತ್ರದಲ್ಲಿ ಆರಾಧನೆ ಪಡೆಯುವ 'ವನದುರ್ಗೆ' ಹಾಗು 'ಉಳ್ಳಾಲ್ತಿ' ಎಂದರೆ 'ಪರಮೇಶ್ವರಿ' ಇವೆರಡು ಒಟ್ಟಾಗಿ ಈ ಕ್ಷೇತ್ರಕ್ಕೆ 'ಶ್ರೀ ದುರ್ಗಾಪರಮೇಶ್ವರಿ' ಎಂಬ ಹೆಸರು ಬಂದಿದೆ.

ಒಟ್ಟು ಕಜಂಬು ಉತ್ಸವದಲ್ಲಿ ತೀರ ಜಾನಪದೀಯ ರೀತಿಯಲ್ಲಿ ನಡೆಯುವ ವನದುರ್ಗೆಯ ಉತ್ಸವವೆಂದು ಕರೆಯಲ್ಪಡುವ ನೆರಿ ಇಳಿಯುವ ಕ್ರಿಯೆಗೆ ಹೆಚ್ಚಿನ ಪ್ರಾಮುಖ್ಯವು ದೊರೆತಂತಿಲ್ಲ. ಆದರೆ ಈ ಒಟ್ಟು ಉತ್ಸವದಲ್ಲಿ ಇದೇ ಬಹಳ ಮುಖ್ಯವಾದ ಆಚರಣೆಯಾಗಿ ತೋರುತ್ತದೆ. ಸ್ಥಳೀಯ ಪುರಾಣವು ಕೇಪು ಕ್ಷೇತ್ರದಲ್ಲಿ ನಿಧಿ ಅಗೆಯುತ್ತಿದ್ದ ಅರಮನೆಯ ೪೦ ಮಂದಿ ಭಟರನ್ನು ನಿಧಿರಕ್ಷಣೆ ಮಾಡುತ್ತಿದ್ದ ವನದುರ್ಗೆಯ ಕಾರಣಿಕದಿಂದ ಮಾಯವಾದ ಬಗೆಗೂ ಅದನ್ನು ತಿಳಿದು ಅಲ್ಲಿಗೆ ಬಂದ ಅರಮನೆಯ ಅಕ್ಕತಂಗಿಯರೂ (ಚೆನ್ನಮ್ಮ, ಚೆಲುವಮ್ಮ) ದೈವದ ಪ್ರಭಾವದಿಂದ ಮಾಯವಾದುವರ ಬಗೆಗೂ ತಿಳಿಸುತ್ತದೆ. ಹಾಗಾಗಿಯೇ ಅರಮನೆಯ ಸ್ತ್ರೀಯರು ಕೇಪು ಕ್ಷೇತ್ರಕ್ಕೆ ಬರುವ ರೂಢಿಯು ಇಂದಿಗೂ ಇಲ್ಲ. ವಿಟ್ಲ ಅರಸರೂ ಚೌತಿ ಹಾಗೂ ಕಜಂಬು ಉತ್ಸವವನ್ನು ಹೊರತುಪಡಿಸಿ ಈ ಕ್ಷೇತ್ರಕ್ಕೆ ಬರುವಂತಿಲ್ಲ. ವಿಟ್ಲ ಅರಸುಮನೆತನದ ಸ್ತ್ರೀಯರು ಈ ಕ್ಷೇತ್ರದಲ್ಲಿ ಮಾಡಿದುದೆನ್ನಲಾದ ತಪ್ಪಿಗಾಗಿ ಅರಸುಮನೆತನದಲ್ಲಿ ಹುಟ್ಟಿದ ಪ್ರತಿಯೊಂದು ಮಗುವನ್ನೂ ಈ ಕ್ಷೇತ್ರಕ್ಕೆ ತಂದು ಕಜಂಬು ಹರಕೆ ಸಲ್ಲಿಸಬೇಕೆಂದು ಆಗಿನ ಅರಸರು ಕಟ್ಟಪ್ಪಣೆ ಮಾಡಿದ್ದಿರಬೇಕು. ಆರಂಭದ ದಿನಗಳಲ್ಲಿ ವಿಟ್ಲ ಅರಸುಮನೆತನದ ಮಕ್ಕಳಿಗೆ ಮಾತ್ರ ಸೀಮಿತವಾಗಿದ್ದ ಈ ಕಜಂಬು ಉತ್ಸವವು ಬರಬರುತ್ತಾ ಅದು ವಿಟ್ಲ ಸೀಮೆಯ ಎಲ್ಲ ಬ್ರಾಹ್ಮಣೇತರ ವರ್ಗಗಳಿಗೂ ವಿಸ್ತರಿಸಿದುದನ್ನು ಗಮನಿಸಬಹುದು. ಇವೊತ್ತಿಗೂ ಕಜಂಬು ಹರಕೆಯನ್ನು ಮೊದಲು ಸಲ್ಲಿಸುವ ಸರದಿ ವಿಟ್ಲ ಅರಸುಮನೆತನದ ಮಕ್ಕಳದ್ದಾಗಿರುತ್ತದೆ.

'ಕಜಂಬು' ಶಬ್ದಕ್ಕೆ ಅರ್ಥ ಹೇಳುವುದು ಕಷ್ಟವಾದರೂ ಇಲ್ಲಿನ ಆಚರಣೆಯ ಒಟ್ಟು ಸ್ವರೂಪವನ್ನು ಗಮನಿಸಿದಾಗ ಇದೊಂದು ಮಕ್ಕಳ ಮುಡಿ ಒಪ್ಪಿಸುವ ಸಾಂಕೇತಿಕ ಆಚರಣೆ ಎನ್ನಲಾಗಿದೆಯಷ್ಟೆ. 'ಕಜ' ಅಥವಾ 'ಕಜವು' ಎಂಬ ತುಳು ಶಬ್ದಕ್ಕೆ 'ಕೂದಲು' ಎಂಬರ್ಥವೂ ಇವೆ. ಇದು ಸಂಸ್ಕೃತದ 'ಕಚ' ಎಂಬುದರಿಂದ

ನಿಷ್ಪನ್ನವಾಗಿದೆ. ತುಳುನಾಡಿನಲ್ಲಿ ಹಿಂದೆ ಮಗುವಿಗೆ ಮಾಡುವ ಆರಂಭದ ಚೌಲ ಕರ್ಮವನ್ನು ಕೆಲವೊಂದು ಕ್ರಿಯಾವಿಧಿಗಳೊಂದಿಗೆ ನೆರವೇರಿಸುತ್ತಿದ್ದರು. ಇದಕ್ಕೆ 'ಕಜಂಬುದ ಮಹಿಮೆ' ಎಂಬ ಹೆಸರಿತ್ತು.

ನಿಘಂಟುಗಳಲ್ಲಿ :

ಕಜಂ ಮದ್‌ಮೆ : The tonsure of a child (ಮ್ಯಾನರ್, 1886 p. 189)

ಕಜಂಬುತ ಮದಿಮೆ : A ceremony for the tonsure of a child (ಮರಿಯಪ್ಪ ಭಟ್ ಮತ್ತು ಶಂಕರ ಕದಿಲಾಯ, 1967 p. 43) ಎಂಬರ್ಥಗಳಿವೆ. ಇವೆಲ್ಲವುಗಳನ್ನು ಗಮನಿಸಿಕೊಂಡು 'ಕಜಂಬು' ಎಂಬುದಕ್ಕೆ ಮೇಲಿನ ಅರ್ಥವನ್ನು ಊಹಿಸಲಾಗಿದೆ. ಆದರೆ ಈ ಕ್ಷೇತ್ರದಲ್ಲಿ ಎಲ್ಲಿಯೂ, ಎಂದೂ ಚೌಲಕರ್ಮದ ವಿಧಿ ನೆರವೇರುವುದಿಲ್ಲ. ಆದರೆ ಹರಕೆಗಾಗಿ ಬಂದ ಕೆಲವು ಗಂಡುಮಕ್ಕಳು ಉದ್ದವಾದ ಜಡೆ ನೆಯ್ದು ಬಿಟ್ಟಿರುವುದನ್ನು ಗಮನಿಸಿದಾಗ ಕಜಂಬು ಹರಕೆ ಸಲ್ಲಿಸಿದ ಅನಂತರವೇ ಚೌಲಕರ್ಮ ಮಾಡಿಸಬೇಕೆಂಬ ಕ್ರಮವನ್ನು ಪಾಲಿಸಿರುವುದು ಇಲ್ಲಿ ಗಮನಿಸತಕ್ಕ ವಿಚಾರ.

ನಾಗರಿಕತೆಯ ಆರಂಭದ ಹಂತದ ವೇಳೆಗಾಗಲೇ ಸಾಕಷ್ಟು ಸಂಸ್ಕೃತಿಗಳಲ್ಲಿ ನಿಯತವಾಗಿ ನಡೆಯುತ್ತಿದ್ದ ನಾನಾ ಆಚರಣೆಗಳು ಕಣ್ಮರೆಯಾಗಿ ಬದಲೀ ಸ್ವರೂಪವನ್ನು ಪಡೆದುಕೊಂಡದ್ದನ್ನು ನೋಡುತ್ತೇವೆ. ತಲೆಯ ಬದಲಿಗೆ ಮುಡಿ, ದೇಹದ ಬದಲಿಗೆ ಅಷ್ಟೇ ತೂಕದ ಚಿನ್ನ, ಬೆಳ್ಳಿ, ಹಣ, ದವಸಧಾನ್ಯ ಇತ್ಯಾದಿಗಳ ಅರ್ಪಣೆಯೂ ಪ್ರಾಣಾಂತಿಕ ಅಪಾಯಗಳಿಂದ ಪಾರಾಗಲು ನಡೆಸುವ ಬದಲೀ ಆಚರಣೆಗಳಾಗಿ ಕಂಡು ಬರುತ್ತವೆ. ಈ ಅರ್ಥದಲ್ಲಿ ನಾವು ಕಜಂಬು ಆಚರಣೆಯ ಮೂಲಕ ದೇವರಿಗೆ ಹರಕೆಯಾಗಿ ಅರ್ಪಿಸುವ ಮಗು ಅಥವಾ ಮಗುವಿನ ಮುಡಿ ಒಪ್ಪಿಸುವ ಸಾಂಕೇತಿಕ ಆಚರಣೆಯನ್ನು ಅಧ್ಯಯನ ನಡೆಸಿದಾಗಲೂ ಇನ್ನೂ ಈ ಆಚರಣೆ ಸಂಕೀರ್ಣ ಅರ್ಥಗಳನ್ನು ಪಡೆದುಕೊಳ್ಳುವುದನ್ನು ನೋಡಬಹುದು. ವಿಟ್ಲ ಅರಸುಮನೆತನದಲ್ಲಿ ಹುಟ್ಟಿದ ಪ್ರತಿಯೊಂದು ಮಗುವನ್ನೂ ಕಜಂಬು ಹರಕೆಯ ಮೂಲಕ ದೇವರಿಗೆ ಅರ್ಪಿಸಬೇಕೆಂಬುದೂ ಅಂದು ವಿಟ್ಲ ಅರಸುಮನೆತನದ ಪ್ರಿಯರಿಂದ ನಡೆದುಹೋದುದೆನ್ನಲಾದ ಪ್ರಮಾದದ ಪ್ರಾಯಶ್ಚಿತ್ತಕ್ಕೆ ಬದಲಿಯಾಗಿ ರೂಪಿತವಾದ ಒಂದು ಆಚರಣೆಯಾಗಿ ಇದು ಕಂಡುಬರುತ್ತದೆ.

ಎರಡನೆಯದಾಗಿ, 'ನೆರಿ ಜಪ್ಪುನೆ' ಆಚರಣೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗಲೂ ಇದು ವಿಟ್ಲ ಅರಸುಮನೆತನದ ಸ್ತ್ರೀಯರಿಂದ ಅಂದು ನಡೆದುದೆನ್ನಲಾದ ಪ್ರಮಾದಕ್ಕೆ ಪ್ರತಿಯಾಗಿ ಪ್ರತಿಭಟನೆಯ ರೂಪದಲ್ಲಿ ನಡೆಯುವ ಒಂದು ಆಚರಣೆಯಾಗಿಯೂ ಕಂಡುಬರುತ್ತದೆ ಎಂದು ಊಹಿಸಬಹುದಾಗಿದೆ. ಹಾಗಾಗಿಯೇ ಈ ಉತ್ಸವದಲ್ಲಿ ಎಲ್ಲಿಯೂ ಅರಸುಮನೆತನದವರ ಪ್ರವೇಶ ಕಂಡುಬರುವುದಿಲ್ಲ. ವರ್ಷಕ್ಕೆ

ಒಂದು ಬಾರಿ ಆಚರಣೆಯ ಮೂಲಕ ತನ್ನ ಕಾರಣಿಕ ಪ್ರದರ್ಶನವನ್ನು ತೋರಿಸುವ 'ವನದುರ್ಗೆ'ಯು ಉತ್ಸವದ ಸಂದರ್ಭ ಆಯಾ ಬಾಗಿಲುಗಳಲ್ಲಿ ಮೆಟ್ಟಿಲಿಗೆ ಕಾಲಿನಿಂದ ತುಳಿದು ತನ್ನ ಸಿಟ್ಟನ್ನು ಪ್ರದರ್ಶಿಸುತ್ತದೆ. ಇದನ್ನು ಸಾಂತ್ವನ ಪಡಿಸುವುದಕ್ಕಾಗಿಯೋ ಎಂಬಂತೆ ಮೂರು ದಿನದ ಕೋಳಿ ಮರಿಯೊಂದನ್ನು ಹೂವಿನ ಜೊತೆಯಲ್ಲಿ (ಮಗುವಿನ ಬದಲೀ ವ್ಯವಸ್ಥೆಯೇ ?) ಹಾಕಿ ಭೂತದ ಕೈಗೆ ಕೊಡಲಾಗುತ್ತದೆ ಇದನ್ನು ಅಲ್ಲಿಯೇ ಹಿಚುಕಿ, ಹೂವಿನ ಜೊತೆಯಲ್ಲಿ ಮೇಲಕ್ಕೆ ಚಿಮ್ಮುವ ಕ್ರಿಯೆಯೂ ತನ್ನ ಉಗ್ರತೆ ಹಾಗು ಪೌರುಷವನ್ನು ಪ್ರದರ್ಶಿಸುವ ಇನ್ನೊಂದು ರೂಪದಂತೆ ಕಾಣುತ್ತದೆ. ಈ ರೀತಿಯ ಪ್ರತಿಭಟನೆಯ ರೂಪದ ಆಚರಣೆ, ಸಿಟ್ಟನ್ನು ಭಯಾನಕ ರೀತಿಯಲ್ಲಿ ವ್ಯಕ್ತಪಡಿಸುವ ರೀತಿ, ಕಾರಣಿಕ ಪ್ರದರ್ಶನ–ಇವೆಲ್ಲವನ್ನು ಅರಮನೆಯ ಸ್ತ್ರೀಯರು ಮಾತ್ರವಲ್ಲದೆ ಒಟ್ಟು ಸ್ತ್ರೀಸಮುದಾಯವೇ ನೋಡಬಾರದು ಎಂಬ ನಿಷೇಧವೂ ಈ ಹಿನ್ನೆಲೆಯಲ್ಲಿ ಉಂಟಾಗಿರಬೇಕು. ಅಲ್ಲದೆ ಸ್ತ್ರೀಯರಿಗೆ ಕಜಂಬು ಉತ್ಸವವನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಹೊರ ಅಂಗಣದ ಪ್ರವೇಶವೂ ನಿಷಿದ್ಧವಾಗಿರುವುದು ಇದರಿಂದಲೇ ಎಂಬುದಾಗಿ ಅರ್ಥೈಸಬಹುದು. ವಿಟ್ಲ ಅರಸುಮನೆತನದ ಸ್ತ್ರೀಯರಿಂದ ಅಂದು ನಡೆದಿದ್ದಿರಬಹುದಾದ ಪ್ರಮಾದಕ್ಕೆ ಕ್ಷಮೆಯ, ಪ್ರಾಯಶ್ಚಿತ್ತ ರೂಪದಲ್ಲಿ ನಡೆಯುವ ಈ ಕಜಂಬು ಹರಕೆಯು ಇಂದು ಮಾತೃದೇವತಾರಾಧನೆಯ ಹಾಗು ಆ ಮೂಲಕ ಸಂತಾನಪ್ರಾಪ್ತಿ ಹಾಗು ಅದರ ರಕ್ಷಣೆಯ ಆಶ್ರಯದ ಹಿನ್ನೆಲೆಯಲ್ಲಿ ನಡೆದು ಬರುತ್ತದೆ.

ಪರಾಮರ್ಶನ ಗ್ರಂಥಗಳು

1. ಜಾಲಾಟ–ಡಾ. ಕೆ. ಚಿನ್ನಪ್ಪ ಗೌಡ, 1985. ಚಿಂತನ ಪ್ರಕಾಶನ.
2. ಗೋವಿಂದ ಪೈ ಸಂಶೋಧನ ಸಂಪುಟ–(ಸಂ) ಎಚ್. ಕೃಷ್ಣಭಟ್, 1995, ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ.
3. 'ಕೇಪು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರು' ಕೇಪು ದೇವಸ್ಥಾನ ಸಮಿತಿ. 1986.
4. Tulu English Dictionary—Rev. A Manner, 1886.
5. Tulu English Dictionary—Prof. M. Mariyappa Bhat and Shankar Kedilaya, 1967.
6. ತುಳು ನಿಘಂಟು–ಸಂಪುಟ ಒಂದು, (ಸಂ.) ಡಾ. ಯು. ಪಿ. ಉಪಾಧ್ಯಾಯ, 1988, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ–ಮತ್ತು–
7. ಕ್ಷೇತ್ರಕಾರ್ಯದ ಮಾಹಿತಿಗಳು.

ಎಂ. ರಾಮಚಂದ್ರ

ಎಫ್. ಎಚ್. ಬ್ರ್ಯಾಡ್ಲೇಯವರ ಪರಮ ಸತ್ಯದ ವಿಚಾರ ಒಂದು ವಿಮರ್ಶಾತ್ಮಕ ಹಾಗೂ ತೌಲನಿಕ ಅಧ್ಯಯನ

[ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರದ ಇತಿಹಾಸದಲ್ಲಿ ಫ್ರಾನ್ಸಿಸ್ ಹರ್ಬರ್ಟ ಬ್ರ್ಯಾಡ್ಲಿಯ ಹೆಸರು ಬಹು ದೊಡ್ಡದು. ಆತನ Appearance and Reality ಒಂದು ಉದ್ಗ್ರಂಥ ಅದನ್ನು ಆಧರಿಸಿದ ಈ ಲೇಖನದಲ್ಲಿ ಬ್ರಾಡ್ಲಿ ಹಾಗೂ ಶಂಕರಾಚಾರ್ಯರ ನಡುವಿನ ಹೋಲಿಕೆಯನ್ನು ನೋಡಬಹುದು.—ಸಂ]

ನಮ್ಮ ಬದುಕಿನ ಸಾಮಾನ್ಯ ಅನುಭವದಲ್ಲಿ ಹಾಗೂ ಪ್ರಾರಂಭಿಕ ಹಂತದ ಶಿಕ್ಷಣ ಕ್ರಮದಲ್ಲಿ ನಮ್ಮ ಜ್ಞಾನವು ವಿರೋಧಾಭಾಸವಾಗಿರುತ್ತದೆ. ಇದರಲ್ಲಿ ಸತ್ಯ ಯಾವುದು ? ಮತ್ತು 'ತೋರಿಕೆ' ಯಾವುದು ? ಎಂಬ ವ್ಯತ್ಯಾಸವನ್ನು ಗುರ್ತಿಸಲು ಸಾಧ್ಯವಿಲ್ಲ.

ಉದಾ :—(೧) ಕೋಲನ್ನು ನೀರಿನಲ್ಲಿ ಅದ್ದಿದಾಗ, ಅದು ಬಾಗಿದ ರೀತಿ ಗೋಚರಿಸುತ್ತದೆ. ಆದರೆ ಅದು ಸತ್ಯವಲ್ಲ. ಅದು ಕೇವಲ "ತೋರಿಕೆ".

(೨) ಅಂತೆಯೇ ತಟಸ್ಥವಾಗಿರುವ ಭೂಮಿ ಸತ್ಯವಲ್ಲ. ಅದು ಕೇವಲ ತೋರಿಕೆ.

(೩) ಅದೇ ರೀತಿ ಕಪಟ ಸ್ನೇಹಿತ ಒಳ್ಳೆ ಸ್ನೇಹಿತನಂತೆ ತೋರುತ್ತಾನೆ. ಅವನ ಒಳ್ಳೆತನವು ಸತ್ಯವಲ್ಲ. ಅದು ಕೇವಲ ತೋರಿಕೆ.

ಜಗತ್ತಿನಲ್ಲಿ ಅನೇಕ ವಸ್ತುಗಳು ಅಸ್ತಿತ್ವದಲ್ಲಿವೆ. ಅವುಗಳೆಲ್ಲವೂ ಸತ್ಯವಲ್ಲ. ಅವುಗಳು ಕೇವಲ ಸತ್ಯದ ತೋರಿಕೆಗಳಾಗಿವೆ. ಆದುದರಿಂದ ಈ ಜಗತ್ತಿನಲ್ಲಿ ಅನೇಕ ವಿರೋಧಾಭಾಸಗಳಿವೆ. ವಿಜ್ಞಾನಗಳು ಈ ಕೆಲವು ವಿರೋಧಾಭಾಸಗಳನ್ನು ನಿವಾರಿಸುತ್ತವೆ. ಆದರೆ ಅವುಗಳಲ್ಲಿ ಮತ್ತಷ್ಟು ಸಮಸ್ಯೆಗಳು ಕಂಡುಬರುತ್ತವೆ.

ಪ್ರಸ್ತುತ ಪ್ರಬಂಧದಲ್ಲಿ ಅನುಸರಿಸುವ ಮಾರ್ಗ ಅಧ್ಯಾತ್ಮಿಕವಾದುದು. ಅಧ್ಯಾತ್ಮಿಕಶಾಸ್ತ್ರವು 'ಪರಮಸತ್ಯ ವಿಚಾರ' ಹಾಗೂ 'ಅಸ್ತಿತ್ವ'ವನ್ನು ಕುರಿತು 'ಮೂಲ

ವಸ್ತುವಿನ ಸತ್ಯ ಶೋಧನೆ'ಯನ್ನು ಅಭ್ಯಸಿಸುತ್ತವೆ.—ಆಧ್ಯಾತ್ಮಿಕಶಾಸ್ತ್ರದ ಪ್ರಮುಖ ವಿಚಾರಗಳೆಂದರೆ-ಮನಸ್ಸು ಎಂದರೇನು? ವಸ್ತು ಎಂದರೇನು? ಕಾಲ—ದೇಶ ಎಂದರೇನು? ಕಾರ್ಯ—ಕಾರಣವಾದ ಎಂದರೇನು? ದ್ರವ್ಯ ಎಂದರೇನು? ಆತ್ಮ ಎಂದರೇನು? ಸೃಷ್ಟಿಯ ಮೂಲ ಉದ್ದೇಶವೇನು? ಜೀವನ ಅರ್ಥ ಹಾಗೂ ಗುರಿ ಏನು? ಇತ್ಯಾದಿಗಳು.

ಆಧ್ಯಾತ್ಮಿಕ ಶಾಸ್ತ್ರಕ್ಕೂ ಮತಧರ್ಮಶಾಸ್ತ್ರಕ್ಕೂ ಸಂಬಂಧ ಹಾಗೂ ವ್ಯತ್ಯಾಸಗಳಿವೆ. ಆಧ್ಯಾತ್ಮಿಕ ಶಾಸ್ತ್ರವು ಮುಖ್ಯವಾಗಿ ವೈಜ್ಞಾನಿಕ ಭಾವನೆ, ಬೌದ್ಧಿಕ ಪದ್ಧತಿ ಮತ್ತು ವಿಚಾರಾತ್ಮಕ ಮಾರ್ಗವನ್ನು ಆಧಾರವಾಗಿ ಹೊಂದಿವೆ. ಆದರೆ ಮತಧರ್ಮ ಪ್ರಮುಖವಾಗಿ ಭಾವನಾತ್ಮಕ, ಊಹಾತ್ಮಕ ನಂಬಿಕೆ—ಶ್ರದ್ಧೆಯನ್ನು ಆಧಾರವಾಗಿ ಹೊಂದಿದೆ.

ಆಧ್ಯಾತ್ಮಿಕಶಾಸ್ತ್ರವು ಪ್ರಾಯೋಗಿಕಶಾಸ್ತ್ರವಲ್ಲ. ಇದು ಗಣಿತಶಾಸ್ತ್ರಕ್ಕಿಂತ ಭಿನ್ನವಾಗಿದೆ. ಗಣಿತಶಾಸ್ತ್ರವು ಸಂಖ್ಯಾತ್ಮಕ ಹಾಗೂ ಪರಿಮಾಣಾತ್ಮಕ ಪದ್ಧತಿಯದಾಗಿದೆ. ಆದರೆ ಗಣಿತಶಾಸ್ತ್ರವು ಸಂಖ್ಯಾತೀತ ಮತ್ತು ಪರಿಮಾಣಾತೀತ ಪದ್ಧತಿಯದಾಗಿದೆ.

ಆಧ್ಯಾತ್ಮಿಕಶಾಸ್ತ್ರಕ್ಕೂ ಹಾಗೂ ಆಧ್ಯಾತ್ಮಯೋಗಕ್ಕೂ ಸಂಬಂಧ ಮತ್ತು ವ್ಯತ್ಯಾಸಗಳಿವೆ. ಆಧ್ಯಾತ್ಮಯೋಗಿಯ ಪ್ರಕಾರ ತೋರಿಕೆಯ ಪ್ರಪಂಚವು ಮಿಥ್ಯೆ ಹಾಗೂ ಅಸ್ತಿತ್ವದಲ್ಲಿಲ್ಲ. ಅನುಭಾವಿ (ಆಧ್ಯಾತ್ಮಯೋಗಿ)ಯ ಮನೋಭಾವವು ಭಾವನಾತ್ಮಕವಾದುದು. ಆದರೆ ಆಧ್ಯಾತ್ಮಿಕವಾದದ ಮನೋಭಾವವು ಬೌದ್ಧಿಕ, ವೈಜ್ಞಾನಿಕ ಹಾಗೂ ವಿಚಾರಾತ್ಮಕವಾದುದು.

ಬ್ರಾಡ್ಲಿ ಪ್ರಕಾರ "ಆಧ್ಯಾತ್ಮಿಕಶಾಸ್ತ್ರದ ದೃಷ್ಟಿಯು ಕೇವಲ ತೋರಿಕೆಯನ್ನು ಹೊರತುಪಡಿಸಿ ಪರಮಸತ್ಯತೆಯನ್ನು ತಿಳಿಯುವುದಾಗಿದೆ". ಇದು ಮೂಲವಸ್ತುವಿನ ಸ್ವರೂಪ, 'ಆದಿಕಾರಣತತ್ವ' ಅಥವಾ 'ಪರಮಶ್ರೇಷ್ಠಮೌಲ್ಯ'ವನ್ನು ಕುರಿತ ಅಧ್ಯಯನ ಇದು ವ್ಯಾಪಕವೂ ಮತ್ತು ಸಾರ್ವತ್ರಿಕವೂ ಆದುದು. ಆದುದರಿಂದ ಆಧ್ಯಾತ್ಮಿಕಶಾಸ್ತ್ರವು ಉಪಯುಕ್ತವಾದುದು ಹಾಗೂ ಯೋಗ್ಯವಾದುದು.

ಇಲ್ಲಿ ಪ್ರಮುಖವಾಗಿ ವಿವರಣಾತ್ಮಕ, ವಿಮರ್ಶಾತ್ಮಕ ಹಾಗೂ ತುಲನಾತ್ಮಕ ಪದ್ಧತಿಯನ್ನು ಅನುಸರಿಸಲಾಗಿದೆ.

ವಿವರಣಾತ್ಮಕ ಪದ್ಧತಿಗೆ ಅನ್ವಯಿಸಿದಂತೆ ಬ್ರಾಡ್ಲಿಯವರ ಅಭಿಪ್ರಾಯಗಳನ್ನು ಕೆಳಗೆ ಸೂಚಿಸಿದ ವಿಭಾಗಗಳಲ್ಲಿ ಚರ್ಚಿಸಲಾಗಿದೆ. ಅವುಗಳೆಂದರೆ 'ಸತ್ಯದ ಸ್ವರೂಪ' 'ಚಿಂತನೆ ಮತ್ತು ಸತ್ಯ', 'ಸತ್ಯ ಮತ್ತು ಅನುಭವ', 'ಸುವ್ಯವಸ್ಥಿತ ಸತ್ಯದ ಸಮನ್ವಯತೆ'—'ಸತ್ಯವು ಏಕವೇ ಅಥವಾ ಅನೇಕವೇ' ಮತ್ತು 'ಸತ್ಯ ಮತ್ತು ಅದರ ತೋರಿಕೆಗಳು'.

ವಿಮರ್ಶಾತ್ಮಕ ಪದ್ಧತಿಗೆ ಅನ್ವಯಿಸಿದಂತೆ ಪ್ರೊ. ಜೇಮ್ಸ್‌ವಾರ್ಡರ್ ವಿಮರ್ಶೆ ಹಾಗೂ ಪ್ರೊ. ಜಿ.ಇ ಮೊರೆ (G.E. More) ರವರ ವಿಮರ್ಶೆಯನ್ನು ಬ್ರಾಡ್ಲಿ ವಿರುದ್ಧವಾಗಿ ಚರ್ಚಿಸಲಾಗಿದೆ.

ತುಲನಾತ್ಮಕ ಪದ್ಧತಿಗ ಅನ್ವಯಿಸಿದಂತೆ ಬ್ರಾಡ್ಲಿ ಮತ್ತು ಶಂಕರರ 'ಪರಮ ಸತ್ಯದ ಸ್ವರೂಪ'ದ ಸಾದೃಶ್ಯ ಹಾಗೂ ವೈಷಮ್ಯಗಳನ್ನು ಚರ್ಚಿಸಲಾಗಿದೆ.

II

ಫ್ರಾನ್ಸಿಸ್ ಹರ್ಬರ್ಟ್ ಬ್ರಾಡ್ಲಿಯು ಇಂಗ್ಲೆಂಡ್ ದೇಶದ ಕ್ಲಾಂಪಮ್‌ನಲ್ಲಿ 30ನೇ ಜನವರಿ, ೧೮೪೬ರಲ್ಲಿ ಜನಿಸಿ, ೧೯೨೪ರಲ್ಲಿ ಮರಣಿಸಿದನು. ತಂದೆ ಚಾರ್ಲ್ಸ ಬ್ರಾಡ್ಲಿ, ತಾಯಿ ಎಮ್ಮಾಲಿಮ್‌ಟನ್ ಎಫ್. ಹೆಚ್. ಬ್ರಾಡ್ಲಿಯು ತತ್ವಶಾಸ್ತ್ರದಲ್ಲಿ ಪ್ರಸಿದ್ಧನಾದರೆ, ಈತನ ತಮ್ಮ ಎ. ಸಿ. ಬ್ರಾಡ್ಲಿಯು ಸಾಹಿತ್ಯ ಕ್ಷೇತ್ರದಲ್ಲಿ ಪಂಡಿತ ಹಾಗೂ ವಿಮರ್ಶಕನಾಗಿದ್ದನು.

ಎಫ್. ಹೆಚ್. ಬ್ರಾಡ್ಲಿಯ ಶಾಲೆಯ ದಿನಗಳು ಬಹು ಸಂದರವಾಗಿದ್ದವು. ಶಿಸ್ತುಬದ್ಧವಾದ ವಿದ್ಯಾಭ್ಯಾಸವನ್ನು ಈತ ಗಳಿಸಿದ. ಕಾಲೇಜಿನ ವಿದ್ಯಾಭ್ಯಾಸವನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಪಡೆದ. ಈತನ ಮಹದಾಸೆ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುವುದಾಗಿತ್ತು. ಆದರೆ ತತ್ವಶಾಸ್ತ್ರಜ್ಞನಾದ ಈತ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಿಂದ ಫೆಲೋಶಿಪ್ ಪಡೆದ ನಂತರ ತೀವ್ರತರವಾದ ಕಿಡ್ನಿ ಉರಿತದ ರೋಗಕ್ಕೆ ಸಿಲುಕಿದ ಅನಂತರ ಈ ರೋಗ ವಾಸಿಯಾಗದೆ ಕೊನೆಯವರಿಗೂ ಬಾಧೆ ಅನುಭವಿಸಿದ. ಈತ ಶಿಸ್ತಿನ ಸಿಪಾಯಿಯಂತಿದ್ದ. ಈತನ ಸುಂದರ ಕಣ್ಣುಗಳು, ನೀಳವಾದ ಮೂಗು, ಸೊಗಸಾಗಿ ಕತ್ತರಿಸಿದ ಗಡ್ಡ ಆಕರ್ಷಕವಾದವು. ದೇಹಕೊಪ್ಪುವ ಆಡಂಬರದ ಉಡುಪನ್ನು ಈತ ಧರಿಸುತ್ತಿದ್ದನು. ಈತನದು ನಿರಂತರ ಅಧ್ಯಯನ; ಅದರಲ್ಲೂ ಫ್ರೆಂಚ್ ಸಾಹಿತ್ಯವನ್ನು ಓದುತ್ತಿದ್ದನು. ಪಾಂಡಿತ್ಯಭರಿತ ಉತ್ತೇಜನಕಾರಿ ವಾಗ್ಮಿಯೂ ಆಗಿದ್ದನು.

ಬ್ರಾಡ್ಲಿಯ ವೈಯಕ್ತಿಕ ಜೀವನದಲ್ಲಿ ನಿರಾಶೆಯು ಆವರಿಸಿತ್ತು. ಮಿಸ್. ರಾಡ್ ಕ್ಲಿಫ್ ಎಂಬ ಅಮೆರಿಕಾ ದೇಶದ ಫ್ರಾನ್ಸ್‌ನಲ್ಲಿ ನೆಲೆಸಿರುವ ಪ್ರಫುಲ್ಲಭರಿತ ಸುಂದರಳಾದ ಮಹಿಳೆ ಜೊತೆ ಈತನಿಗೆ ಪ್ರೇಮ ಸಂಬಂಧವಿತ್ತು. ಈಕೆ ಬ್ರಾಡ್ಲಿಯ ಒಡನಾಡಿಯಾಗಿದ್ದಳು. ತನ್ನ ಎಲ್ಲಾ ಗ್ರಂಥಗಳನ್ನು ಈತ ಅವಳಿಗೆ ಸಮರ್ಪಿಸಿದ್ದನು. ಬ್ರಾಡ್ಲಿಯು ಆಕೆಯನ್ನು ವಿವಾಹವಾಗಲು ಇಚ್ಛಿಸಿದ್ದ ಕೂಡ. ಆದರೆ ವೈದ್ಯರ ಸಲಹೆಯಿಂದಲೂ ಅಥವಾ ವಾಸಿಯಾಗದ ರೋಗಸ್ತನಾಗಿದ್ದರಿಂದಲೂ ಅದು ನೆರವೇರಲಿಲ್ಲ. ಇವರು ರಜಾದಿನಗಳಲ್ಲಿ ಪ್ಯಾರಿಸ್‌ನಲ್ಲಿ ಭೇಟಿಯಾಗುತ್ತಿದ್ದರು. ಆಕೆಗೆ ತತ್ತ್ವಶಾಸ್ತ್ರದಲ್ಲಿ ನಿರಾಸಕ್ತಿಯಿದ್ದರೂ ಬ್ರಾಡ್ಲಿಯು ತನ್ನ ಎಲ್ಲಾ ಪತ್ರಗಳಲ್ಲೂ ಆಧ್ಯಾತ್ಮಿಕ ವಿಚಾರಗಳನ್ನು ಕುರಿತು ಆಕೆಗೆ ವರ್ಣಿಸುತ್ತಿದ್ದನು. ಬ್ರಾಡ್ಲಿಯು ೧೮ನೇ

ಸೆಪ್ಟೆಂಬರ್ ೧೯೨೪ರಲ್ಲಿ ತೀರಿಕೊಂಡನು. ಈತನು ಇಂಗ್ಲೆಂಡ್ ಮತ್ತು ಹೊರ ದೇಶಗಳ ಗೌರವ ಕೊಡುಗೆಗಳಿಗೆ ಪಾತ್ರನಾಗಿದ್ದನು.

ಬ್ರಾಡ್ಲಿಯು ತನ್ನನ್ನು ತಾನೇ ತತ್ತ್ವಶಾಸ್ತ್ರದ ಬರವಣಿಗೆಗೆ–ಬೆಳವಣಿಗೆಗೆ ಸಮರ್ಪಿಸಿಕೊಂಡಿದ್ದ. ಈತ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕನಾಗಿದ್ದು ಅನೇಕ ತಾತ್ವಿಕ ಗ್ರಂಥಗಳನ್ನು ರಚಿಸಿ ಪ್ರಖ್ಯಾತನಾದನು. ಅವುಗಳಲ್ಲಿ ಮೊದಲನೆ ಗ್ರಂಥ 1. The Presuppositions of critical history (1874) 2. Ethical studies (1876), 3. 'Principles of Logic', (1883) 4. 'Appearance and Reality' (1893) and 5. Essays on Truth and Reality (1935) ಇವುಗಳೇ ಅಲ್ಲದೇ ಈತ ಇನ್ನು ಕೆಲವು ಉಪಯುಕ್ತ ಲೇಖನಗಳನ್ನು, ಪ್ರಬಂಧಗಳನ್ನು ಬರೆದಿದ್ದಾನೆ. ಅವು ಪ್ರಸಿದ್ಧ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ.

ಬ್ರಾಡ್ಲಿಯ ಮೇಲೆ ಟಿ. ಹೆಚ್. ಗ್ರೀನ್ ಹಾಗೂ ಹೆಗಲರ ಪ್ರಭಾವ ಉಂಟಾಗಿತ್ತು. ಹೆಗಲರ ತತ್ವಚಿಂತನೆಯ ಬಗ್ಗೆ ಇವರಿಗೆ ಮೆಚ್ಚಿಕೆ ಇದೆ. ಆದರೆ ಈತ ಹೆಗಲರ ಅನುಯಾಯಿಯಲ್ಲ. ಬ್ರಾಡ್ಲಿ ಒಬ್ಬ ಮಹಾನ್ ತಾರ್ಕಿಕ ಲೇಖಕ ಈತನ Ethical Studies ಹಾಗೂ Principles of Logic ಗಳು ಜೆ.ಎಸ್. ಮಿಲ್ಲನ 'ಉಪಯುಕ್ತತಾವಾದ'ಗಳನ್ನು ಮತ್ತು 'ಇಂದ್ರಿಯಾನುಭಾವವಾದಗಳನ್ನು ಖಂಡಿಸುತ್ತವೆ. ಬ್ರಾಡ್ಲಿಯ 'Appearance and Reality' ('ತೋರಿಕೆ ಹಾಗೂ ಸತ್ಯ')ದ ಪ್ರಭಾವವು ಎ ಇ. ಟೇಲರ್ ಮುಂತಾದವರ ಮೇಲೆ ಉಂಟಾಗಿದೆ. ಬ್ರಾಡ್ಲಿಯ ಸಾಹಿತ್ಯ ಶೈಲಿಯು ಎಲ್ಲರ ಮೆಚ್ಚಿಕೆಗಳಿಸಿದೆ. ಟಿ. ಎಸ್. ಇಲಿಯಟ್ ಬ್ರಾಡ್ಲಿಯ ವಿಚಾರವನ್ನು ಕುರಿತು ಒಂದು ಮಹಾಪ್ರಬಂಧವನ್ನು ರಚಿಸಿದ್ದಾನೆ.

ಬ್ರಾಡ್ಲಿಯ ತತ್ತ್ವಶಾಸ್ತ್ರವನ್ನು ಅವನ Ethical Studies ನಲ್ಲಿ ಕಾಣಬಹುದು. ಮಾನವನ ಸಮಗ್ರತೆಯಲ್ಲಿ ಬ್ರಾಡ್ಲಿಯು ನೀತಿಶಾಸ್ತ್ರ ಸಿದ್ಧಾಂತವನ್ನು ನಿರ್ಮಿಸಿದ್ದಾನೆ. ಇಲ್ಲಿ ಮುಖ್ಯವಾಗಿ ಮಾನವನು ತನ್ನತನವನ್ನು ತನ್ನ ಸಮಗ್ರತೆಯನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎಂದಿದ್ದಾನೆ. ನೈತಿಕತೆಯ ಪರಮಗುರಿ ಎಂದರೆ ಆತ್ಮಸಾಕ್ಷಾತ್ಕರಿಸಿಕೊಳ್ಳುವಂತಹದ್ದು.

ಬ್ರಾಡ್ಲಿ ಹೀಗೆ ಹೇಳುತ್ತಾನೆ. "ನಿನ್ನನ್ನು ನೀ ತಿಳಿ", ಆತ್ಮಸಾಕ್ಷಾತ್ಕಾರವು ಅನುಭವಾತ್ಮಕವಾದುದು. ನಾವು ಸಮಗ್ರ ಅನಂತ ಸ್ವರೂಪಗಳಾಗಬೇಕು. ಮಾನವ ಅನಿತ್ಯ, ಮಿತ ಸ್ವರೂಪಿ ಹಾಗೂ ಅಸಮರ್ಪಕನೂ ಆಗಿದ್ದಾನೆ. ಮಾನವನು ಮೂಲತಃ ತನ್ನ ನೈತಿಕ ನಿಯಮಗಳನ್ನು, ಸ್ಥಾನ ಮಾನಗಳನ್ನು ಕರ್ತವ್ಯಗಳನ್ನು ತಿಳಿಯಬೇಕು. ಈ ವಿಚಾರವು ಬ್ರಾಡ್ಲಿಯ ಸುಪ್ರಸಿದ್ಧ ಪ್ರಬಂಧವಾದ'' My Station and its Duties'' ನಲ್ಲಿ ಕಂಡುಬರುತ್ತದೆ. ಬ್ರಾಡ್ಲಿಯು ತನ್ನ ನೈತಿಕ ಅಧ್ಯಯನದಲ್ಲಿ ಜೆ. ಎಸ್. ಮಿಲ್ ಮತ್ತು -ಕ್ಯಾಂಟರ್ IIIರನ್ನು ಟೀಕಿಸಿದ್ದಾನೆ.

ಬ್ರಾಡ್ಲಿಯು ನೈತಿಕತೆಯಲ್ಲಿರುವ ದೋಷಪೂರಿತ ನಿಯಮಗಳನ್ನು ತೆಗೆದು ಹಾಕುತ್ತಾನೆ. ನೈತಿಕ ಪ್ರಜ್ಞೆ ಇರುವ ತಾತ್ವಿಕ ಚಿಂತಕರು ನೈತಿಕ ವಿಶ್ಲೇಷಣಾ ಪಮೌಲ್ಯಗಳನ್ನು ನೀಡುತ್ತಾನೆ ಬ್ರಾಡ್ಲೇ ನೀತಿಶಾಸ್ತ್ರದಲ್ಲಿ 'ಉಪಯುಕ್ತತಾವಾದ' ಹಾಗೂ 'ಸಂತೋಷವಾದ'ಗಳನ್ನು ಖಂಡಿಸುತ್ತಾನೆ. ಬ್ರಾಡ್ಲಿಪ್ರಕಾರ ವ್ಯಕ್ತಿಯ ಸ್ಥಾನ—ಮಾನ, ಆದ್ಯ ಕರ್ತವ್ಯಗಳೇ ನೈತಿಕ ಪರಮ ಗುರಿಯಲ್ಲ, ಆದರೆ ಸಮಗ್ರವಾದ ಸಾಮಾಜಿಕ ತತ್ವವನ್ನೂ ಬೆಳೆಸಬೇಕು. ಇಂದಿನ ದಿನಗಳಲ್ಲಿ ನೈತಿಕ ಅಧ್ಯಯನವು ಮಹತ್ವದ ವಿಚಾರವಾಗಿದೆ. ನೈತಿಕತೆಯು ಅನಂತ, ಆದರ್ಶ, ಪರಮ ಸತ್ಯದ ಪರಿಪೂರ್ಣ ಸಿದ್ಧಾಂತವನ್ನು ಗುರ್ತಿಸುತ್ತದೆ.

ಬ್ರಾಡ್ಲಿಯ ತಾರ್ಕಿಕ ಸಿದ್ಧಾಂತಗಳು ಜ್ಞಾನ ಮೀಮಾಂಸೆ ಹಾಗೂ ಅಧ್ಯಾತ್ಮಿಕಶಾಸ್ತ್ರಗಳ ದೋಷಪೂರಿತ ತತ್ವಗಳನ್ನು ತಿರಸ್ಕರಿಸುತ್ತವೆ. ಬ್ರಾಡ್ಲಿ ತನ್ನ ತರ್ಕಶಾಸ್ತ್ರದಲ್ಲಿ ಅರಿಸ್ಟಾಟಲ್‌ನ ಸಂಪ್ರದಾಯಿಕ ತರ್ಕಶಾಸ್ತ್ರ (The Traditional Logic of Aristotle) ಜಿ. ಎಸ್. ಮಿಲ್‌ರ ನಿಗಮನ ತರ್ಕಶಾಸ್ತ್ರವನ್ನು (Industive Logic of J. S. Mill) ತರ್ಕವಿಧಾನ ತರ್ಕಶಾಸ್ತ್ರ (Syllogistic Logic) ರೂಪಾತ್ಮಕ ತರ್ಕಶಾಸ್ತ್ರ (Formal Logic), ಕ್ಯಾಂಟನ ಅಮೂರ್ತ ಸಿದ್ಧಾಂತಗಳನ್ನು ಖಂಡಿಸುತ್ತಾನೆ. ಈತನ ತಾರ್ಕಿಕ ದೃಷ್ಟಿಯು ಸತ್ವವುಳ್ಳದ್ದು, ಹೊಂದಿಕೆಯಾಗುವಂತಹದ್ದು, ಹಾಗೂ ಸಾರ್ವತ್ರಿಕವಾದುದು. ಈತನ ತಾರ್ಕಿಕ ಸಿದ್ಧಾಂತಗಳು ಅಧ್ಯಾತ್ಮಿಕಶಾಸ್ತ್ರಕ್ಕೆ ಆಧಾರವಾದುವಾಗಿವೆ. ಈತನ ತಾರ್ಕಿಕ ಪದ್ಧತಿಯು ಮಹತ್ವವಾದ ಅನಂತ ಸತ್ಯತೆಯನ್ನು ಹೊಂದಿದೆ.

III (A)

ನವ್ಯಹೆಗೆಲರ ತತ್ತ್ವಸಿದ್ಧಾಂತದಲ್ಲಿ ಬ್ರಾಡ್ಲಿಯ 'ಪರಮಸತ್ಯ'ವು ಪ್ರಮುಖವಾದದು. ಈತನು ಅದ್ವೈತ ಸಿದ್ಧಾಂತವನ್ನು ಇಂಗ್ಲೆಂಡಿನಲ್ಲಿ ಬೆಳೆಸಿದನು. ಈತನ ಪ್ರಕಾರ ವಿಶ್ವವು ಸುವ್ಯವಸ್ಥಿತವಾದ ಅನೇಕ ಸಂಬಂಧಗಳಲ್ಲಿ ವಿರೋಧಾಭಾಸ ಸಮಸ್ಯೆಗಳನ್ನು ಹೊಂದಿದೆ. ಆದ್ದರಿಂದ ಈ ವಿಶ್ವವು ಸತ್ಯವಾದುದಲ್ಲ. ಇದು ಒಂದು ಸತ್ಯದ ತೋರಿಕೆಯಾಗಿದೆ. ಬ್ರಾಡ್ಲಿಯ ಆದರ್ಶವಾದವು ಮಹತ್ತರವಾದ ವ್ಯಾಪ್ತಿಯನ್ನು ಹೊಂದಿದೆ. "ತೋರಿಕೆ ಮತ್ತು ಸತ್ಯ" ಎಂಬ ಉತ್ಕೃಷ್ಟವಾದ ಗ್ರಂಥವು ಬ್ರಾಡ್ಲಿಯ ಕೀರ್ತಿಯನ್ನು ವೃದ್ಧಿಸಿದೆ. ಬ್ರಾಡ್ಲಿ ಪ್ರಕಾರ ಸತ್ಯವೆಂದರೆ ವಿರೋಧಾಭಾಸವಿಲ್ಲದ್ದು. ಸತ್ಯವು ವಿರೋಧಾಭಾಸವಿಲ್ಲದ್ದಾಗಿರಬೇಕು. ಪರಮಶ್ರೇಷ್ಠ ಸತ್ಯದ ಪ್ರಮಾಣವೆಂದರೆ ಅದು ವಿರೋಧಾಭಾಸವಿಲ್ಲದ್ದು. ವಿರೋಧಾಭಾಸವಿರುವಂಥವು ಕೇವಲ ತೋರಿಕೆಗಳಾಗಿರುತ್ತವೆ.

ಸತ್ಯವು ಸಮಗ್ರವಾದುದು. ಸಮಂಜಸತೆಯನ್ನೂ ಹೊಂದಿರುವುದು. ಸರ್ವವ್ಯಾಪಕವಾದುದು. ನಿರಂತರವಾದುದು ಸತ್ಯವು ಏಕೆ, ಅನಂತವಾದುದು ಪರಿಪೂರ್ಣ

ವಾದುದು ? ಸರ್ವಾಂತರ್ಯಾಮಿಯಾದುದು ? ಅಲ್ಲದೆ ಸತ್ಯವು ಅಧ್ಯಾತ್ಮಿಕವಾದುದು ಹಾಗೂ ಭಾವರೂಪವಾದುದು. ಸತ್ಯವು ಸುವ್ಯವಸ್ಥಿತವಾದ ಸಾಮರಸ್ಯವನ್ನು ಹೊಂದಿರುವಂತಹದು. ಸತ್ಯವು ಅನುಭವಾತ್ಮಕವಾದುದು. ಸತ್ಯವು ಪ್ರತ್ಯಕ್ಷಾನು ಭೂತಿಯುಳ್ಳದ್ದು. ಸತ್ಯವು ತಾದಾತ್ಮ್ಯವುಳ್ಳದ್ದು. ಸತ್ಯವು ಐಕ್ಯತಾಭಾವನೆ ಯುಳ್ಳದ್ದು. ಸತ್ಯವು ಅಂತಃಸ್ವರೂಪಿಯಾದುದು. ಸತ್ಯವು ಪರಮಾನಂದಾನು ಭವವಾದುದು. ಕಾಲಾತೀತ ದೇಶಾತೀತ, ಕಾರ್ಯ ಕಾರಣಾತೀತ, ಸಂಬಂಧಾತೀತ ವಾದುದು. ಸತ್ಯವು ಅಖಂಡವಾದುದು, ಸಮಗ್ರವಾದುದು ಹಾಗೂ ಸರ್ವಸ್ವವನ್ನು ಮೀರಿರುವಂತಹದು. ಬ್ರಾಡ್ಲಿಪ್ರಕಾರ ಅನೇಕ ತತ್ತ್ವ ಹಾಗೂ ಬಹುತತ್ತ್ವವಾದಗಳು ಸತ್ಯವಾದವುಗಳಲ್ಲ. ಜಗತ್ತಿನಲ್ಲಿನ ತೋರಿಕೆಯ ವಸ್ತುಗಳು ಅಸತ್ಯವಾದುದಲ್ಲ. ಆದರೆ ತೋರಿಕೆಯ ವಸ್ತುಗಳು ಅಂಶಿಕಸತ್ಯ. ಪರಮಸತ್ಯ ಸ್ವರೂಪವು ಪ್ರಾಪಂಚಿಕ ಇಂದ್ರಿಯ ಗೋಚರ ವಸ್ತುಗಳ ಸಂಬಂಧಗಳನ್ನು ಮೀರಿರುವಂತಹದು.

ವಿಚಾರವು ಸಾಮಾನ್ಯವಾಗಿ ದ್ವಂದ್ವತೆಯನ್ನು ಹೊಂದಿದೆ. ಇದರ ವಸ್ತು ಹಾಗೂ ವ್ಯಕ್ತಿತತ್ವಗಳು ವಿಭಿನ್ನವಾಗಿವೆ. ಇವುಗಳ ಸಂಬಂಧವು ಪೂರ್ಣವಾಗಿರು ವಂತೆ ಸೂಚಿಸಿರುತ್ತದೆ. ಬ್ರಾಡ್ಲಿಪ್ರಕಾರ ಪರಮಸತ್ಯವೆಂಬುದು ಜಗತ್ತಿನ ವಸ್ತು ಹಾಗೂ ವ್ಯಕ್ತಿಗಳನ್ನು ಮೀರಿರುವಂತಹದು.

(B)

ಬ್ರಾಡ್ಲಿ ಮತ್ತು ಟೇಲರ್‌ರವರು ಸತ್ಯವನ್ನು ಅನುಭವದಲ್ಲಿ ತಾದಾತ್ಮ್ಯ ಗೊಳಿಸಿದ್ದಾರೆ. ಅನುಭವ ಎಂದರೆ ನಮ್ಮೆಲ್ಲ ಅನುಭವಗಳ ಸ್ಥಿರವಾದ ಸಮನ್ವಯ, ಸಾಮರಸ್ಯ, ಐಕ್ಯತೆಯನ್ನು ಹೊಂದಿರುವಂತಹದ್ದು. ಸತ್ಯವೆಂಬುದು ಕೇವಲ ವ್ಯಕ್ತಿಯ ಅನುಭವವಲ್ಲ. ಸತ್ಯವು ಎಲ್ಲ ವಸ್ತುಗಳ ಸಮಗ್ರ ಅನುಭವವಾಗಿದೆ. ಸತ್ಯವು ಸಾರ್ವತ್ರಿಕ ಅನುಭವವಾಗಿದೆ ಹಾಗೂ ಸತ್ಯವು ಎಲ್ಲಾ ಅನುಭವಗಳ ಐಕ್ಯವಾದ, ನೈಜ ಅನುಭವವಾಗಿದೆ.

ಸತ್ಯವನ್ನು ಅನುಭವದಲ್ಲಿ ತಾದಾತ್ಮ್ಯಗೊಳಿಸುವುವೆಂದರೆ, ಇದನ್ನು ನಮ್ಮ ಸ್ವಂತ ಅನುಭವಕ್ಕೆ ತಾದಾತ್ಮ್ಯಗೊಳಿಸಲು ಸಾಧ್ಯವಿಲ್ಲ. ನನ್ನ ಸ್ವಂತ ಅನುಭವವು ಅಪೂರ್ಣವಾದುದು, ಇದು ಸಾಮರಸ್ಯವನ್ನು ಹೊಂದಿಲ್ಲ. ಶುದ್ಧವಾದ ಅಥವಾ ಸ್ಪಷ್ಟವಾದ ಅನುಭವವು ಪರಿಪೂರ್ಣವಾದುದು. ಸಾಮರಸ್ಯವನ್ನು ಹೊಂದಿರು ವಂತಹದು.

ನನ್ನ ಸ್ವಂತ ಅನುಭವವು ಏಕೆ ಸತ್ಯವಾದುದಲ್ಲ ಎಂಬುದಕ್ಕೆ ಟೇಲರನು ಕೆಳಗಿನ ಕಾರಣ ಕೊಡುತ್ತಾನೆ.

೧. ನನ್ನ ಸ್ವಂತ ಅನುಭವದ ವಿಚಾರವು ಯಾವಾಗಲೂ ಅಪೂರ್ಣವಾದುದು. ಆಂಶಿಕವಾದುದು. ನನ್ನ ಉದ್ದೇಶ ಅಥವಾ ಗುರಿಯು ಬಹಳ ಮಿತವಾದುದು. ಅಖಂಡವಾದ ಜಗತ್ತು ನನ್ನಿಂದ ಹೊರಗೆ ಇದೆ.

'ಸಾಮೂಹಿಕ ಅನುಭವವು' 'ಪರಮ ಅನುಭವ'ವಾಗಿ ರೂಪಿತವಾಗುವುದಿಲ್ಲವೆಂದು ಟೇಲರ್ ವಾದಿಸುತ್ತಾನೆ. ಏಕೆಂದರೆ 'ಸಾಮೂಹಿಕ ಅನುಭವ'ವು ಕೇವಲ ಮಿತ ಅನುಭವಗಳ ಸಮೂಹ ಮಾತ್ರ. ಸಾಮೂಹಿಕ ಅನುಭವದಲ್ಲಿ ವಿರೋಧಾಭಾಸಗಳಿವೆ. ಇಂತಹ ಅನುಭವಗಳು ಮುಖ್ಯವಾಗಿ ವ್ಯಕ್ತಿಗತವಾಗಿರುತ್ತದೆ. ಮಿತವ್ಯಕ್ತಿಗಳು ಮಿತ ಅನುಭವಗಳನ್ನು ಹೊಂದಿರುತ್ತವೆ. ಇಂತಹ ಅನುಭವಗಳು ಪ್ರತ್ಯೇಕ-ಪ್ರತ್ಯೇಕವಾಗಿರುತ್ತವೆ. ಹಾಗೂ ಅಸಮಂಜಸವಾಗಿರುತ್ತವೆ. ಈ ಎಲ್ಲಾ ಮಿತ ಅನುಭವಗಳನ್ನು ಸೇರಿಸಿ ನಾವು ಸರ್ವವ್ಯಾಪಕತ್ವ, ಸರ್ವಸಾಮರಸ್ಯ ಹಾಗೂ ಪರಮ ಅನುಭವಗಳನ್ನು ಪಡೆಯಲು ಸಾಧ್ಯವಿಲ್ಲ. ಪರಮ ಮಾನವ ಅನುಭವವು ಜಗತ್ತಿನ ಸರ್ವಸ್ವವನ್ನೂ ನೇರವಾಗಿ ತೋರಿಸುತ್ತದೆ.

ಬ್ರಾಡ್ಲಿ ಹಾಗೂ ಟೇಲರ್ ಪ್ರಕಾರ ಪರಮಸತ್ಯವು ಅಸ್ತಿತ್ವದಲ್ಲಿನ ಸರ್ವಸ್ವವನ್ನು ಆವರಿಸಿದೆ. ಇಲ್ಲಿ ಸುವ್ಯವಸಿತ ಐಕ್ಯತೆ ಇದೆ. ಪರಮಸತ್ಯದಲ್ಲಿ ನಿಶ್ಚಿತಜ್ಞಾನವು ಹಾಗೂ ಶ್ರೇಷ್ಠ ಸಂಕಲ್ಪ ಇದೆ. 'ಅಸ್ತಿತ್ವ' ಹಾಗೂ ಅದರ 'ಅರ್ಥ' ('That' and 'What')ಗಳ ಸಂಬಂಧವನ್ನು ಬೇರ್ಪಡಿಸಲಾರದು –ಬ್ರಾಡ್ಲಿ, ಟೇಲರ್ ಈ ರೀತಿಯ ತೀರ್ಮಾನಕ್ಕೆ ಬರುತ್ತಾರೆ. ಅಸತ್ಯವು ಅನುಭವದಿಂದ ಸ್ವತಂತ್ರವಾಗಿದ್ದರೆ, ಸತ್ಯವು ಅನುಭವದಲ್ಲಿರುತ್ತದೆ.

ವ್ಯಕ್ತಿನಿಷ್ಠವಾದವೆಂದರೆ—ಅನುಭವವನ್ನು ಹೊರತುಪಡಿಸಿ ಸತ್ಯವೆಂಬುದಿಲ್ಲ ಸತ್ಯವೆಂಬುದು ನನ್ನ ಮನಸ್ಸಿನ ತಿಳುವಳಿಕೆಗೆ ಸಂಬಂಧಿಸಿದುದೇ ಹೊರತು ಬೇರೇನಿಲ್ಲ. ಜ್ಞಾನವು ನನ್ನ ತಿಳುವಳಿಕೆಗೆ (ಚೈತನ್ಯಕ್ಕೆ) ಮಾತ್ರ ಸಂಬಂಧಿಸಿದುದು. ಇದರಿಂದ ಹೊರತುಪಡಿಸಿ ಬೇರೇನೂ ಇಲ್ಲ. ನಮಗೆ ತಿಳಿದಿರುವುದು ನಮ್ಮ ಸಂವೇದನೆಗಳು ಮಾತ್ರ. ಇದನ್ನು 'ವಿಜ್ಞಾನವಾದ' ಎಂದು ಕರೆಯುತ್ತಾರೆ.

ಅನುಭವವನ್ನು ಹೊರತುಪಡಿಸಿ ಸತ್ಯವೆಂಬುದಿಲ್ಲ. ಎಲ್ಲವೂ ನಮ್ಮ ಮಾನಸಿಕ ತಿಳುವಳಿಕೆಯ ಮಟ್ಟಕ್ಕೆ ಸಂಬಂಧಿಸಿದುದು. ನಮ್ಮ ಎಲ್ಲಾ ಜ್ಞಾನವು ನಮ್ಮ ಮಾನಸಿಕ ಮಟ್ಟಕ್ಕೆ ಸಂಬಂಧಿಸಿದುದು.

ಬಾರ್ಕ್ಲೆಯು ವಸ್ತುನಿಷ್ಠವಾದದಲ್ಲಿ ಪ್ರತ್ಯಕ್ಷಾನುಭವವಾದವನ್ನು ನಿರೂಪಿಸುತ್ತಾನೆ. ಪ್ರತ್ಯಕ್ಷಾನುಭವವಾದವು ಹೀಗೆ ಹೇಳುತ್ತದೆ. ನಮ್ಮ ತಿಳುವಳಿಕೆಯ ಮಟ್ಟವು ಮಾತ್ರ ಪರಮಸತ್ಯ ವಸ್ತುವಾಗಿದೆ. ಪ್ರತ್ಯಕ್ಷಾನುಭವವಾದದಲ್ಲಿ ಹೀಗೆ ಹೇಳಿದೆ–ನಾನು ಕೆಂಪು ಗುಲಾಬಿಯನ್ನು ನೋಡುತ್ತಿದ್ದೇನೆ. ಆದ್ದರಿಂದ ನಾನು ಸಂವೇದನಾಸ್ಥಿತಿಯಲ್ಲಿದ್ದೇನೆ–ನಾನು ಶಬ್ದಕೇಳುವ ಸಂವೇದನಾ ಸ್ಥಿತಿಯಲ್ಲಿದ್ದರೆ,

ಆಗ ನಾನು ಶಬ್ದ ಕೇಳುವ ಸ್ಥಿತಿಯಲ್ಲಿರುತ್ತೇನೆ. ಈ ಎಲ್ಲಾ ಅನುಭವಗಳಲ್ಲಿಯೂ ನಾವು ತಿಳುವಳಿಕೆಯ ಮಟ್ಟದಲ್ಲಿರುತ್ತೇವೆ.

(C)

ಏಕತ್ವ ಹಾಗೂ ಅನೇಕತ್ವಗಳ ಸಮಸ್ಯೆಯು ತತ್ತ್ವಶಾಸ್ತ್ರದ ಪರಂಪರೆಯಷ್ಟೆ ಹಳೆಯದು. ಪ್ರಮುಖವಾಗಿ ಈ ಸಮಸ್ಯೆಯು ಜಗತ್ತಿನಲ್ಲಿ ಅಸ್ತಿತ್ವದಲ್ಲಿದೆ. ಇವುಗಳಲ್ಲಿ ೩-ತಾತ್ತ್ವಿಕ ಸಿದ್ಧಾಂತಗಳನ್ನು ಕಾಣಬಹುದು. ಅವುಗಳಾವುವೆಂದರೆ—

೧ ಏಕತತ್ವವಾದ

೨. ಅನೇಕತತ್ವವಾದ

೩. ಚಿದಾಣುವಾದ

೧. ಏಕತತ್ತ್ವವಾದದ ಪ್ರಕಾರ ಸತ್ಯವು ಒಂದೇ. ಅನೇಕ ತತ್ತ್ವ ಹಾಗೂ ಬಹುತತ್ತ್ವಗಳೆಲ್ಲವೂ ಭ್ರಮೆಯಾದುವು.

೨. ಅನೇಕ ತತ್ತ್ವವಾದದ ಪ್ರಕಾರ ಸತ್ಯವು ಅನೇಕ ಎಂಬುದಾಗಿ ಒಪ್ಪಿಕೊಳ್ಳುತ್ತದೆ.

೩. ಚಿದಾಣುವಾದದ ಪ್ರಕಾರ-ಸತ್ಯವು ಏಕವೂ ಹೌದು, ಅನೇಕವೂ ಹೌದು. ಅವುಗಳು ಸಮಾನವಾಗಿ ಸತ್ಯವಾಗಿವೆ. ನಾವು ಲೈಬ್ನಿಡ್ಜನ ಚಿದಾಣುವಾದದಲ್ಲಿ ಕಂಡಂತೆ ಅನೇಕ ವಸ್ತುಗಳು ಸ್ವತಂತ್ರವಾಗಿ ಅಸ್ತಿತ್ವದಲ್ಲಿವೆ. ದೇವರು ಮೊನಾಡುಗಳ ನಡುವೆ ಸಾಮರಸ್ಯವನ್ನು ಸೃಷ್ಟಿಸಿದ್ದಾನೆ. ಮೊನಾಡುಗಳಿಗೆ ಕಿಟಕಿಗಳಿಲ್ಲ.

ಅನೇಕ ತತ್ತ್ವವಾದವನ್ನು ಕುರಿತು ಹೀಗೆ ವಿಮರ್ಶೆ ಮಾಡಿದ್ದಾನೆ.— ಮೊನಾಡುಗಳು ಕಿಟಕಿಗಳಿಲ್ಲದೆ ಸ್ವತಂತ್ರವಾಗಿ ಅಸ್ಥಿತ್ವದಲ್ಲಿದ್ದರೆ, ಒಂದು ಮೊನಾಡು ಮತ್ತೊಂದು ಮೊನಾಡಿನ ಜೊತೆ ಹೇಗೆ ಸಾಮರಸ್ಯ ಸಂಪರ್ಕವನ್ನು ಹೊಂದಿರಲು ಸಾಧ್ಯ ?

ಆದರೆ ಬ್ರಾಡ್ಲಿ ಪ್ರಕಾರ ಸತ್ಯವು ಸಂಬಂಧ ರಹಿತವಾದುದು. ಸತ್ಯವು ಸಮಂಜಸತೆಯನ್ನು ಹೊಂದಿರುವಂತಹದ್ದು. ಸತ್ಯವು ಸರ್ವಸಾಮರಸ್ಯವನ್ನು ಹೊಂದಿರುವಂತಹದು. ಇದು ಎಲ್ಲವನ್ನೂ ಒಳಗೊಂಡಿದೆ. ಇದು ನೈಜವಾದುದು ಹಾಗೂ ಪರಿಪೂರ್ಣವಾದುದು.

ಏಕತ್ವ ಹಾಗೂ ಬಹುತತ್ತ್ವವಾದಗಳ ಬಗ್ಗೆ ಬ್ರಾಡ್ಲಿಯ ಅಭಿಪ್ರಾಯಗಳು :- ಬ್ರಾಡ್ಲಿಯ ಪ್ರಕಾರ ಸತ್ಯ ಎಂಬುದು ಒಂದೇ. ಇದು ಅಖಂಡ ಹಾಗೂ ಪರಿಪೂರ್ಣವಾದುದು. ಸತ್ಯವಾದುದು ವಿರೋಧವಿಲ್ಲದೇ ಇರುವಂತಹುದು. ಇದು ಸರ್ವಸ್ವವನ್ನು ಒಳಗೊಂಡಿರುವಂತಹದ್ದು, ಸತ್ಯವು ಪರಮಾನಂದಾನುಭವವಾಗಿದೆ. ಪರಮಸತ್ಯವು ಎಲ್ಲಾ ದ್ವೈತ ಸಂಬಂಧಗಳನ್ನು ಮೀರಿರುವಂತಹದ್ದು. ಎಲ್ಲ ಅನೇಕತೆ ಹಾಗೂ

ಬಹುತತ್ತ್ವಗಳು ಪರಮಸತ್ಯ ಅನುಭವದಲ್ಲಿ ಸಾಮರಸ್ಯವಾಗಿ ಐಕ್ಯ ಹೊಂದುತ್ತವೆ. ಈ ಜಗತ್ತು ಸುವ್ಯವಸ್ಥಿತವಾದುದು. ಇದು ಒಂದೇ ಎರಡು ಸತ್ಯವಸ್ತುಗಳು ಸ್ವತಂತ್ರವಾಗಿ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಆದ್ದರಿಂದ ಸತ್ಯವು ಒಂದೇ, ಅದು ಅನೇಕವಲ್ಲ.

(D)

ಟೇಲರ್ ಪ್ರಕಾರ ಸತ್ಯವು ಒಂದು ಪರಿಪೂರ್ಣ ವ್ಯವಸ್ಥೆ. ಇದು ವ್ಯಕ್ತಿಯ ಪೂರ್ಣ ಅನುಭವ. ಎಲ್ಲಾ ಭಾಗಗಳು ಪೂರ್ಣತ್ವದಲ್ಲಿ ಸೇರಿವೆ. ಅಂತೆಯೇ ಪೂರ್ಣತ್ವವು ಎಲ್ಲಾ ಭಾಗಗಳ ಐಕ್ಯವಾಗಿದೆ. ಸತ್ಯವು ಸರ್ವಸ್ವವನ್ನೂ ಒಳಗೊಂಡಿದೆ. ಆಂತರಿಕ ವ್ಯವಸ್ಥೆ ಹಾಗೂ ಸರ್ವವ್ಯಾಪಕತತ್ತ್ವವನ್ನು ಹೊಂದಿರುವುದೇ ಸತ್ಯದ ಸ್ವರೂಪವಾಗಿದೆ.

ಸತ್ಯವನ್ನು ಅನೇಕ ಹಂತಗಳಲ್ಲಿ ಸೂಚಿಸಬಹುದು—'ಕಲ್ಲುಗಳ ಸಮೂಹ', 'ಯಂತ್ರಗಳು', 'ಮಾನವನ ಶರೀರದ ವ್ಯವಸ್ಥೆ', 'ಮನಸ್ಸಿನ ಆಕಾರ' ಇಲ್ಲಿ ನಾವು ಅನೇಕ ರೀತಿಯ ಅನುಭವಗಳು ಹಾಗೂ ಸತ್ಯದ ಹಂತಗಳನ್ನು ಕಾಣುತ್ತೇವೆ. 'ಯಾಂತ್ರಿಕ ವ್ಯವಸ್ಥೆ'ಗಿಂತ ಮಾನವನ ಶರೀರ ವ್ಯವಸ್ಥೆ (ಸಜೀವ)ಯಲ್ಲಿ ಹೆಚ್ಚಿನ ಸತ್ಯವನ್ನು ಕಾಣುತ್ತೇವೆ. ಮಾನವನ ಶರೀರ ವ್ಯವಸ್ಥೆಯಲ್ಲಿ ಹಲವು ಅವಯವಗಳಿವೆ. ಅವು ಕಾಲು, ಕೈ, ಕಣ್ಣುಗಳು, ಕಿವಿಗಳು ಇತ್ಯಾದಿ ಎಲ್ಲ ಅವಯವಗಳು ಒಂದಕ್ಕೊಂದು ಐಕ್ಯತೆಯನ್ನು ಹೊಂದಿವೆ. ಶರೀರದ ಯಾವುದೇ ಒಂದು ಭಾಗಕ್ಕೆ ಹಾನಿಯಾದರೂ ಅದು ಸಂಪೂರ್ಣವಾಗಿ ಶರೀರಕ್ಕೆ ಹಾನಿಯಾಗುತ್ತದೆ.

ಉದಾ:—೫೦೦-ಬಿಡಿ ಭಾಗಗಳ ಕಲ್ಲುಗಳ ಸಮೂಹವಿದೆ ಎಂದಿಟ್ಟುಕೊಳ್ಳೋಣ. ನೂರು ಕಲ್ಲುಗಳನ್ನು ಮತ್ತೆ ಸೇರಿಸುವುದರಿಂದ ಅಥವಾ ನೂರು ಕಲ್ಲುಗಳನ್ನು ಆ ಸಮೂಹದಿಂದ ತೆಗೆದುಕೊಳ್ಳುವುದರಿಂದ ಕಲ್ಲುಗಳ ಸಮೂಹ ವ್ಯವಸ್ಥೆಗೆ ಹಾನಿಯಾಗುವುದಿಲ್ಲ.

ಬ್ರಾಡ್ಲಿ ಹಾಗೂ ಟೇಲರ್ ಸತ್ಯದ ವಿವಿಧ ಹಂತಗಳನ್ನು ಹೀಗೆ ಹೇಳುತ್ತಾರೆ. ಕೆಲವು ಕಡಿಮೆ ದರ್ಜೆಯ ಸತ್ಯಗಳಿವೆ. ಕೆಲವು ಹೆಚ್ಚಿನ ಪ್ರಮಾಣದ ಸತ್ಯಗಳಿವೆ. ಮತ್ತು ಕೆಲವು ಉತ್ತಮ ಸತ್ಯಗಳಿವೆ ಹಾಗೂ ಕೆಲವು 'ಸಾಮಾನ್ಯ ಪ್ರಮಾಣದ ಸತ್ಯ'ಗಳಿವೆ—ಟೇಲರ್ ಪ್ರಕಾರ ಎಲ್ಲ ತೋರಿಕೆಗಳು, ವೈವಿಧ್ಯತೆಗಳು ಅಸತ್ಯವಾದವುಗಳು. ಈ ವಸ್ತುಗಳು ಕೇವಲ ಅಂಶಿಕ ಸತ್ಯ.

ನಾವು ಈಗಾಗಲೇ ಸತ್ಯದ ಸಾಮಾನ್ಯ ಲಕ್ಷಣಗಳನ್ನು ಚರ್ಚಿಸಿದ್ದೇವೆ. ಈಗ ನಾವು ಈ ಜಗತ್ತಿನ ಸಾಮಾನ್ಯ ಅನುಭವದ ಇಂದ್ರಿಯಗೋಚರ ಸ್ವಭಾವದ ವಿಚಾರಗಳನ್ನು ಚರ್ಚಿಸೋಣ-ಇಂದ್ರಿಯಗೋಚರ ಸ್ವಭಾವದ ವಿಚಾರಗಳಾದ-ಕಾಲ, ದೇಶ, ಕಾರ್ಯ-ಕಾರಣ ಸಂಬಂಧ, ಚಲನೆ ಮತ್ತು ಬದಲಾವಣೆ, ಆತ್ಮ,

ವಸ್ತುಗಳು ಇತ್ಯಾದಿ ಇಂದ್ರಿಯಗೋಚರ ಸ್ವಭಾವದ ವಿಚಾರಗಳು ಸಾಮಾನ್ಯ ದೃಷ್ಟಿಯ ಅನುಭವದಿಂದ ಸತ್ಯ. ಆದರೆ ಪರಮಸತ್ಯದ ದೃಷ್ಟಿಯಿಂದ ಇವುಗಳು ವಿರೋಧಾಭಾಸವಾದವುಗಳು ಹಾಗೂ ತೋರಿಕೆಯಾದುದು. ಬ್ರಾಡ್ಲಿಯ ಪ್ರಕಾರ ಸತ್ಯ ಎಲ್ಲ ಸಂಬಂಧಗಳನ್ನು ಮೀರಿರುವಂತಹದು. ಸಾಮಾನ್ಯ ದೃಷ್ಟಿಯ ಅನುಭವ ಗಳು ಕೇವಲ ಆಂಶಿಕಸತ್ಯ.

ಜಗತ್ತಿನಲ್ಲಿ 'ಉತ್ತಮ' ಹಾಗೂ 'ಕೆಳದರ್ಜೆ'ಯ ವಿವಿಧ ಹಂತಗಳ ಸತ್ಯಗಳಿವೆ. ಪರಮಸತ್ಯವು ಶ್ರೇಷ್ಠವಾದುದು. ಪರಮಶ್ರೇಷ್ಠ ಸತ್ಯಕ್ಕೆ ಯಾವ ಹಂತಗಳು ಇಲ್ಲ. ವಸ್ತುನಿಷ್ಠ ವಿಚಾರ (predicates)ಗಳು ಉತ್ತಮ ಹಾಗೂ ಕೆಳದರ್ಜೆಯ ಹಂತಗಳ ಸತ್ಯವನ್ನು ಹೊಂದಿವೆ. ಜಗತ್ತಿನಲ್ಲಿ ಅನೇಕ ತರಹದ ವಸ್ತುಗಳು ಅಸ್ತಿತ್ವದಲ್ಲಿವೆ. ಎಲ್ಲಾ ರೀತಿಯ ಇಂದ್ರಿಯಗೋಚರ ವಿಚಾರಗಳು ತಮ್ಮದೇ ಆದ ವಿವಿಧ ಸ್ವರೂಪದ ಸತ್ಯಗಳನ್ನು ಹೊಂದಿವೆ. —ಬ್ರಾಡ್ಲಿ ಪ್ರಕಾರ ಪರಿಪೂರ್ಣ ಪರಮ-ಸತ್ಯವು ಅಂತಿಮ ದಲ್ಲಿ ಕೆಲವು ಲಕ್ಷಣಗಳನ್ನು ಹೊಂದಿದೆ. ಇದು ನಿರುಪಾಧಿತವಾದುದು. ಇದು ನೈಜವಾದುದು. ಇದು ಸ್ವಅಸ್ಥಿತ್ವದಲ್ಲಿರುವಂತಹದ್ದು. —ಈ ರೀತಿ ಬ್ರಾಡ್ಲಿಯು ಅಧ್ಯಾತ್ಮಿಕಶಾಸ್ತ್ರದ ಸಿದ್ಧಾಂತದಲ್ಲಿ (ವ್ಯವಸ್ಥೆಯಲ್ಲಿ) ಸತ್ಯ ಹಾಗೂ ಪರಮಸತ್ಯ ಸಾಮಾನ್ಯ ಸಮಸ್ಯೆಗಳ ಹಂತಗಳನ್ನು ಚರ್ಚಿಸಿದ್ದಾನೆ.

ಆದ್ದರಿಂದ ಬ್ರಾಡ್ಲಿ ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ವಿವಿಧ ವಸ್ತುಗಳನ್ನು ನಿರಾಕರಿಸಲಿಲ್ಲ ಹಾಗೂ ಅಸತ್ಯ ಎಂಬುದಾಗಿ ಹೇಳಲಿಲ್ಲ. ಅವುಗಳು ತಮ್ಮಲ್ಲೇ ವಿರೋಧಾಭಾಸಗಳನ್ನು ಹೊಂದಿದ್ದರೂ, ವಸ್ತು ಮತ್ತು ಗುಣಗಳ ನಡುವೆ ಸಂಬಂಧ ವಿದ್ದರೂ ಹಾಗೂ ಅವುಗಳ ವಿವಿಧ ಹಂತಗಳ ಸತ್ಯವನ್ನು ಹೊಂದಿದ್ದರೂ ಅಸತ್ಯ ವೆಂದು ನಿರಾಕರಿಸುವುದಿಲ್ಲ. ಆದರೆ ಅವುಗಳು ತೋರಿಕೆಗಳಾಗಿವೆ. ಬ್ರಾಡ್ಲಿ ಪ್ರಕಾರ ಎಲ್ಲಾ ತೋರಿಕೆಗಳು ಪರಮಸತ್ಯದಲ್ಲಿ ಐಕ್ಯವಾಗುತ್ತವೆ. ಎಲ್ಲಾ ಕಾಲ-ದೇಶಗಳು ಪರಮಸತ್ಯದಲ್ಲಿ ಐಕ್ಯವಾಗುತ್ತವೆ. ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ವಸ್ತುಗಳಿಗಿಂತ, ಮಾನವ ಜೀವಿಯ ಅಸ್ತಿತ್ವವು ಪರಮಸತ್ಯವಾದುದು.

ಬ್ರಾಡ್ಲಿ ಪ್ರಕಾರ ಅಂತಿಮ ಸತ್ಯವು ಕಾಲ-ದೇಶಗಳ ಸಂಬಂಧಗಳನ್ನು 'ಅಸ್ತಿತ್ವ' ಹಾಗೂ ಅದರ 'ಅರ್ಥ' 'ಅದು' ('That') ಮತ್ತು 'ಏನು' ('What') ಸಂಬಂಧ ವನ್ನು ಮೀರಿದುದು. ಅಂತೆಯೇ ಅಸ್ತಿತ್ವದಲ್ಲಿರುವ ಎಲ್ಲವೂ ಸತ್ಯವಲ್ಲ. ಆದರೆ ಸತ್ಯವು ಅಸ್ಥಿತ್ವದಲ್ಲಿರುತ್ತದೆ. ಅಸ್ತಿತ್ವದಲ್ಲಿರುವವುಗಳು ಪರಮಸತ್ಯದ ತೋರಿಕೆ ಗಳಾಗಿವೆ. ಅಸ್ತಿತ್ವದಲ್ಲಿರುವವುಗಳಿಗಿಂತ ಪರಮಸತ್ಯವು ಶ್ರೇಷ್ಠವಾದುದು.

IV

ಪ್ರೊ. ಜೀವನ್ಸ್‌ವಾರ್ಡ್ ಹಾಗೂ ಪ್ರೊ. ಜಿ. ಇ. ಮೂರ್‌ರವರು ಬ್ರಾಡ್ಲೆಯ ವಾದವನ್ನು ಟೀಕಿಸುತ್ತಾರೆ.

ಪ್ರೊ. ವಾರ್ಡ್ ಒಬ್ಬ 'ಈಶ್ವರವಾದಿ' ('Theist') ಬಹು ತತ್ತ್ವವಾದಿಯೂ ಹೌದು. ಈತನ ಅಭಿಪ್ರಾಯದಲ್ಲಿ ಬ್ರಾಡ್ಲೆಯು 'ಪರಮಸತ್ಯವೆಂಬುದು ಒಂದೆ' ಎಂಬ ವಾದವನ್ನು ಟೀಕಿಸುತ್ತಾನೆ. ಪ್ರೊ. ವಾರ್ಡ್ ಪರಮಸತ್ಯದ ಬಗ್ಗೆ ಬ್ರಾಡ್ಲೆಯು 4-ಪ್ರಸ್ತಾಪಗಳನ್ನು ಟೀಕಿಸುತ್ತಾನೆ.

ಅವುಗಳಾವುವೆಂದರೆ—(೧)ಸತ್ಯವು ಒಂದೇ, (೨) ಸತ್ಯವು ಸಾಮರಸ್ಯ ರೂಪದ ವ್ಯವಸ್ಥೆ, (೩) ಸತ್ಯವು ಅನುಭವಾತ್ಮಕವಾದುದು ಮತ್ತು (೪) ಸತ್ಯವು ಅದ್ವೈತ ಅನುಭವವಾದ ಹೊಂದಿರುವಂಥದು.

ಪ್ರೊ. ಮೂರ್ ಒಬ್ಬ ವಾಸ್ತವವಾದಿ ಹಾಗೂ ಸಾಮಾನ್ಯ ಅನುಭವದ ತತ್ವ ಜ್ಞಾನಿ. ಈತನು ಬ್ರಾಡ್ಲೆಯು 'ತೋರಿಕೆ ಮತ್ತು ಸತ್ಯ'ವನ್ನು ಟೀಕಿಸುತ್ತಾನೆ. ಇದರಲ್ಲಿನ 'ದೇಶ' ಮತ್ತು 'ಕಾಲ' (Space and Time) ಎಂಬ ಅಧ್ಯಯವನ್ನು ತನ್ನ Philosophical Studies (ತತ್ವಶಾಸ್ತ್ರದ ಅಧ್ಯಯನ) ಎಂಬ ಗ್ರಂಥದಲ್ಲಿ ಟೀಕಿಸಿದ್ದಾನೆ.

ಬ್ರಾಡ್ಲಿಪ್ರಕಾರ 'ಕಾಲವು ಅಸತ್ಯ' ಬೇರೆ ರೀತಿಯಲ್ಲಿ ಹೇಳುವುದಾದರೆ, 'ಕಾಲವು ಅಸ್ತಿತ್ವದಲ್ಲಿದೆ', ಅಂದರೆ ಕಾಲವು ತೋರಿಕೆಯಾದುದು ಹಾಗೂ ವಿರೋಧಾ ಭಾಸವಾದುದು.

ಪ್ರೊ. ಜಿ. ಇ. ಮೂರ್ ಈ ರೀತಿ ಟೀಕಿಸುತ್ತಾನೆ. ನಾವು ಬ್ರಾಡ್ಲಿಯು ಹೇಳಿಕೆಯಾದ 'ಕಾಲವು ಮಿಥ್ಯೆ' ಎಂಬುದನ್ನು ಒಪ್ಪಿಗೊಂಡರೆ ಭೂತಕಾಲ, ವರ್ತ ಮಾನಕಾಲ ಹಾಗೂ ಭವಿಷತ್‌ಕಾಲ ಅನಂತರ ಮತ್ತು ಹಿಂದೆ ಇತ್ಯಾದಿಗಳಾಗಿ ಗುರ್ತಿಸಲು ಸಾಧ್ಯವಿಲ್ಲ.

ಕಾಲದಲ್ಲಿ ಬದಲಾವಣೆ ಇದೆ. ಉದಾ :—ಬೀಜದಿಂದ ಸಸಿಯಾಗಿ ಬೆಳೆದಿದೆ, ಶಿಶುವು ಯುವಕನಾಗಿ ಬೆಳೆಯುತ್ತಾನೆ. ಕಾಲದಲ್ಲಿ ಬದಲಾವಣೆಯನ್ನು ಬ್ರಾಡ್ಲಿ, ಒಪ್ಪಿಕೊಳ್ಳುವುದಿಲ್ಲ.

V

ಬ್ರಾಡ್ಲಿ ಹಾಗೂ ಶಂಕರಾಚಾರ್ಯರ ನಡುವಿನ ಹೋಲಿಕೆ.

ಶ್ರೀ ಶಂಕರರು ಭಾರತೀಯ ಬ್ರಹ್ಮವಾದದ ಪ್ರತಿಪಾದಕರಾಗಿದ್ದಾರೆ. ಇವರು ಒಬ್ಬ ಅದ್ವೈತವಾದಿ, ಆಗಾಧವಾದ ಪಾಂಡಿತ್ಯವನ್ನು ಹೊಂದಿದವರು. ಅವರ ವೇದಾಂತ ಶಾಸ್ತ್ರವು ಅಪೂರ್ವವಾದುದು.

ಬ್ರಾಡ್ಲಿಯು ಪಾಶ್ಚಾತ್ಯ ಆದರ್ಶವಾದದ ಪ್ರತಿಪಾದಕನಾಗಿದ್ದಾನೆ. ಈತ ಸಹ ಒಬ್ಬ ಮಹಾನ್ ಅದ್ವೈತವಾದಿ, ನಿರಾಕಾರ ಸ್ವರೂಪದ ಆದರ್ಶವಾದಿ, ವಿಮರ್ಶಕ, ಸಂದೇಹವಾದಿ, ಹಾಗೂ ಅನುಭಾವಿ.

ಬ್ರಾಡ್ಲಿ ಮತ್ತು ಶಂಕರರಿಬ್ಬರೂ ಬ್ರಹ್ಮದ ನಿರ್ಗುಣತ್ವವನ್ನು ಪ್ರತಿಪಾದಿಸಿದ್ದಾರೆ. ಅವರಿಬ್ಬರ ಪ್ರಕಾರ ಪರಮಸತ್ಯವು ನಿರ್ಗುಣವೇ ಹೊರತು ಸಗುಣವಲ್ಲ. ಯಾವರೀತಿಯಾದ ಗುಣಗಳನ್ನಾಗಲಿ, ವಿಶೇಷಣಗಳನ್ನಾಗಲಿ ಬ್ರಹ್ಮಕ್ಕೆ ಅನ್ವಯಿಸುವುದು. ತಾತ್ವಿಕವಾಗಿ ಸರಿಯಲ್ಲ. ಕಾರಣ ಬ್ರಹ್ಮವು ಅಖಂಡ ಮತ್ತು ಅನಂತ ಆದ್ದರಿಂದ ನಿರ್ಗುಣ ಬ್ರಹ್ಮಕ್ಕೆ ನೈತಿಕತೆಯನ್ನು ಅನ್ವಯಿಸಲಾಗದೆಂದು ಬ್ರಾಡ್ಲೆ ಹೇಳಿದ್ದಾನೆ. ಏಕೆಂದರೆ, ಅವನ ಪ್ರಕಾರ ನೈತಿಕತೆಯು ಅಪೂರ್ಣತೆಯ ಕುರುಹು. ಆದ್ದರಿಂದ, ಅನಂತವಾದ ಬ್ರಹ್ಮಕ್ಕೆ ಅದನ್ನು ಅನ್ವಯಿಸಲಾಗದು.

ಶಂಕರ ಮತ್ತು ಬ್ರಾಡ್ಲಿಯವರ ದರ್ಶನಗಳಲ್ಲಿ ಸಾಮ್ಯತೆ ಇದೆ:—

೧ ಇಬ್ಬರೂ ಅದ್ವೈತವಾದಿಗಳಾಗಿದ್ದಾರೆ, ಇವರಿಬ್ಬರ ಪ್ರಕಾರ ಸತ್ಯವು ಒಂದೆ. ಬ್ರಾಡ್ಲಿಯ ಪರಮ ಸತ್ಯವು ನಿರಾಕಾರ ಸ್ವರೂಪದ್ದು, ಸಂಬಂಧಾತೀತ. ಆದರೆ ಶಂಕರರ ನಿರ್ಗುಣ ಬ್ರಹ್ಮವು ಪರಮ ಅನುಭವವಾಗಿದೆ. ಇದು ಪರಮ ಸತ್ಯವಾಗಿದೆ.

೨. ಇವರಿಬ್ಬರ ಪ್ರಕಾರ ಪರಮಸತ್ಯವು ಅನುಭವಾತ್ಮಕವಾದುದು. ಇದು ಅಪರೋಕ್ಷಾನುಭವವಾದುದು. ಅಂತರಿಕ ಅನುಭವವಾದುದು. ಅಪರೋಕ್ಷಾನುಭೂತಿಯಾದುದು.

೩. ಇವರಿಬ್ಬರ ಪ್ರಕಾರ ಪರಮಸತ್ಯ ಸ್ವರೂಪವು ವಿರೋಧಾಭಾಸವಿಲ್ಲದ್ದು.

೪. ಇವರಿಬ್ಬರ ಪರಮ ಉದ್ದೇಶವು 'ಪರಮ ಸತ್ಯಸ್ವರೂಪವನ್ನು ಅರ್ಥೈಸಿಕೊಳ್ಳುವುದಾಗಿದೆ'.

೫. ಇವರಿಬ್ಬರೂ ದೇವರನ್ನು 'ಪರಮಸತ್ಯ' ವೆಂದು ಒಪ್ಪಿಕೊಳ್ಳುವುದಿಲ್ಲ. ಶರೀರ ಮತ್ತು ಆತ್ಮಗಳು ಜಗತ್ತಿನ ವಸ್ತುಗಳಾಗಿವೆ.

೬. ಇವರಿಬ್ಬರೂ ಕಾಲ ಮತ್ತು ದೇಶವನ್ನು ತೋರಿಕೆ ಎಂದು ಹೇಳುತ್ತಾರೆ.

ಶಂಕರ ಮತ್ತು ಬ್ರಾಡ್ಲಿಯವರ ದರ್ಶನಗಳಲ್ಲಿ ವ್ಯತ್ಯಾಸಗಳು :—

ಶ್ರೀಶಂಕರರು ಭಾರತೀಯ ಸಾಂಪ್ರದಾಯಿಕ ಪದ್ಧತಿಯನ್ನು ಅನುಸರಿಸಿ ತಮ್ಮ ದರ್ಶನವನ್ನು ರೂಪಿಸಿದರು. ಪ್ರಸ್ಥಾನತ್ರಯಗಳಾದ ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳ ಮೇಲೆ ಭಾಷ್ಯಗಳನ್ನು ಬರೆದು, ತಮ್ಮ ಸಿದ್ಧಾಂತವಾದ ಅದ್ವೈತ ವೇದಾಂತವು ಅವುಗಳಲ್ಲಿ ಹೇಗೆ ನಿರೂಪಿತವಾಗಿದೆ ಎಂದು ತೋರಿಸಿದರು, ಆದರೆ ಪಾಶ್ಚಾತ್ಯ ದಾರ್ಶನಿಕನಾದ ಬ್ರಾಡ್ಲೆಯು ಯಾವ ಗ್ರಂಥವನ್ನೂ ಮೂಲವಾಗಿ, ಆಧಾರವಾಗಿಟ್ಟುಕೊಳ್ಳದೆ, ಕೇವಲ ತರ್ಕವನ್ನೆ ಉಪಯೋಗಿಸಿ ತನ್ನ ದರ್ಶನವನ್ನು ರೂಪಿಸಿದನು. ಇದರಿಂದ ಶಂಕರರ ಅದ್ವೈತವೇದಾಂತದಲ್ಲಿ ತರ್ಕದ ಉಪಯೋಗವೇ ಇಲ್ಲವೆಂದಾಗಲಿ, ಬ್ರಾಡ್ಲೆಯು ಬೇರಾವ ದಾರ್ಶನಿಕರಿಂದಲೂ ಪ್ರಭಾವಿತನಾಗಲಿಲ್ಲವೆಂದಾಗಲಿ ಊಹಿಸಿದರೆ ತಪ್ಪಾಗುತ್ತದೆ. ಶಂಕರರು ತಮ್ಮ ಅದ್ವೈತವೇದಾಂತದಲ್ಲಿ ತರ್ಕವನ್ನು, ಪೂರ್ವಪಕ್ಷಗಳನ್ನು ಖಂಡಿಸುವುದರಲ್ಲಿಯೇ ಅಲ್ಲದೇ, ತಮ್ಮ ಸಿದ್ಧಾಂತ

ವನ್ನು ಮಂಡಿಸುವುದರಲ್ಲಿಯೂ ಉಪಯೋಗಿಸಿದ್ದಾರೆ. ಅದೇರೀತಿ ಬ್ರಾಡ್ಲೆಯು ಹೆಗಲ್ ಮುಂತಾದ ದಾರ್ಶನಿಕರಸಿದ್ಧಾಂತಗಳನ್ನು ಪೂರ್ಣವಾಗಿ ಒಪ್ಪದೆಹೋದರೂ, ಅವರಿಂದ ವಿಶೇಷವಾಗಿ ಪ್ರಭಾವಿತನಾಗಿದ್ದನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

೨. ಬ್ರಾಡ್ಲಿ ಪ್ರಕಾರ ಪರಮಸತ್ಯವು ಇಂದ್ರಿಯಾತೀತವಾದುದು. ಅನಿತ್ಯ ವಾದ ಜೀವಿಗಳು ಪರಮ ಸತ್ಯದ ಅನುಭವಗಳನ್ನು ಪಡೆದುಕೊಳ್ಳಲಾರವು. ಆದರೆ ಶಂಕರರ ಬ್ರಹ್ಮಾನುಭವವನ್ನು ಎಲ್ಲರೂ ಪಡೆದುಕೊಳ್ಳುವ ಹಕ್ಕಿದೆ.

೩. ಶಂಕರರ ಅದ್ವೈತವೇದಾಂತದಲ್ಲಿ ಸತ್ಯದ ಮೂರು ಹಂತಗಳ (Three orders of Reality) ನಿರೂಪಣೆಯನ್ನು ನಾವು ನೋಡುತ್ತೇವೆ.

೧ ಪ್ರಾತಿಭಾಸಿಕ ಸತ್ಯ — Phenomenal Reality

೨. ವ್ಯವಹಾರಿಕ ಸತ್ಯ — Empirical Reality

೩. ಪಾರಮಾರ್ಥಿಕ ಸತ್ಯ — Transcendental Reality

ಆದರೆ ಬ್ರಾಡ್ಲಿ ಪ್ರಕಾರ ಪರಮಸತ್ಯವು ಎರಡು ಹಂತಗಳಲ್ಲಿವೆ —

(೧) ಪರಮಸತ್ಯ ಮತ್ತು (೨) ತೋರಿಕೆ.

ಬ್ರಾಡ್ಲಿಯ ದರ್ಶನವನ್ನು ತಾರ್ಕಿಕ ವಿಶ್ಲೇಷಣೆಯ ಪದ್ಧತಿ ಎಂದು ಅದನ್ನು 'ಬ್ರಾಡ್ಲಿಯ ಸಂವಾದ'ವೆಂದು ಕರೆಯಲಾಗಿದೆ.

೪. ಶಂಕರರು ಪ್ರಪಂಚವನ್ನು ಪಾರಮಾರ್ಥಿಕ ಸತ್ಯದ ದೃಷ್ಟಿಯಿಂದ ಮಿಥ್ಯೆ (Appearance) ಎಂದು ವಿವರಿಸಿದರು. ಎಂದರೆ, ಪ್ರಪಂಚದ ನಾನಾ ವಸ್ತು— ವಿಷಯಗಳು ಯಾವ ರೀತಿಯಲ್ಲೂ ಬ್ರಹ್ಮ ಅಥವಾ ಪರಮ ಸತ್ಯದಲ್ಲಿ ಉಳಿದಿರಲು ಸಾಧ್ಯವಿಲ್ಲ. — ಆದರೆ ಬ್ರಾಡ್ಲಿ ಪ್ರಪಂಚದ ಪ್ರತಿಯೊಂದು ವಸ್ತು — ವಿಷಯ ಗಳಲ್ಲಿಯೂ ಸ್ವಲ್ಪವಾದರೂ 'ಸತ್ಯಾಂಶ' ಇರುವುದೆಂದೂ, ಅವುಗಳ ವಿರೋಧಾಭಾಸವು ಮಾತ್ರ ಪರಮತತ್ವದಲ್ಲಿ ಇಲ್ಲದುದಾಗಿ ಅವು ಪೂರ್ಣ ಸಮಗ್ರತೆಯನ್ನು ಪಡೆದು ಪರತತ್ವದ ಸತ್ಯದಲ್ಲಿ ಉಳಿಯುವುದೆಂದೂ ಪ್ರತಿಪಾದಿಸಿದನು.

೫. ಬ್ರಾಡ್ಲಿ ಪ್ರಕಾರ ಪರಮಸತ್ಯ ಒಂದೆ. ಅದು ಅಖಂಡವಾದುದು. ಅದು ಸರ್ವವ್ಯಾಪಿಯಾದುದು. ಆಂತರಿಕಸುವ್ಯವಸ್ಥಿತ ಸ್ವರೂಪವೇ ಪರಮ ಸತ್ಯ. ಇದು ಸಾಮಾರಸ್ಯ ಹಾಗೂ ಸೈಜವಾದುದಾಗಿದೆ. ಬ್ರಾಡ್ಲಿ ಪ್ರಕಾರ ಅಸ್ತಿತ್ವದಲ್ಲಿರುವ ಯಾವ ವಸ್ತು — ವಿಷಯಗಳು ಸತ್ಯವಲ್ಲ. ಆದರೆ ಅವು ಸತ್ಯದ ತೋರಿಕೆ ಹಾಗೂ ಆಂಶಿಕ ಸತ್ಯ.—ಆದರೆ ಶಂಕರರ ಪ್ರಕಾರ ಬ್ರಹ್ಮವು ಒಂದೆ. ಅದು ಮಾತ್ರ ಪರಮ ಸತ್ಯ. ಆದರೆ ಎಲ್ಲವೂ ಮಾಯೆ.

VI

ತತ್ವಶಾಸ್ತ್ರದಲ್ಲಿ ಬ್ರಾಡ್ಲಿಯವರ ಸ್ಥಾನ ಇಂತಿದೆ.—ಬ್ರಾಡ್ಲಿಯವರು ನಿಜ ವಾಗಿಯೂ ಗ್ರೇಟ್ ಬ್ರಿಟನಿನ ಒಬ್ಬ ಮಹಾನ್ ತತ್ತ್ವಜ್ಞಾನಿ. ತನ್ನನ್ನೇ ತತ್ತ್ವ

ಜ್ಞಾನಕ್ಕೆ ಸಂಪೂರ್ಣವಾಗಿ ಸಮರ್ಪಿಸಿಕೊಂಡ ಒಬ್ಬ ಮಹಾನ್ ಆದರ್ಶವಾದಿ, ಅದ್ವೈತವಾದಿ. ಈತನು ಅನೇಕ ಗ್ರಂಥಗಳನ್ನು ರಚಿಸಿ ತತ್ವಕ್ಷೇತ್ರಕ್ಕೆ ನೀಡಿದ್ದಾನೆ.

ಬ್ರಾಡ್ಲಿಯು ಹೆಗೆಲನ ತತ್ತ್ವಸಿದ್ಧಾಂತದಿಂದ ಪ್ರಭಾವಿತನಾಗಿದ್ದರೂ ಈತನು ಹೆಗೆಲನ ಅನುಯಾಯಿಯಲ್ಲ ಬ್ರಾಡ್ಲಿಯು ಯಾವಾಗಲೂ ತನ್ನ ಹಿರಿಯ ವಿದ್ವಾಂಸರಿಗೆ ಅವರ ಪಾಂಡಿತ್ಯಕ್ಕೆ ಗೌರವಿಸುತ್ತಿದ್ದ. ಬ್ರಾಡ್ಲಿ ಒಬ್ಬ ಮಹಾನ್ ನೈಜಚಿಂತಕ, ಮಹಾನ್ ಪಾಂಡಿತ್ಯವನ್ನು ಹೊಂದಿರುವವನು, ತನ್ನ ಬರವಣಿಗೆಗಳಿಗೆ ಸಾಹಿತ್ಯಕ ಮಾದರಿಗಳನ್ನು ಅನುಸರಿಸುವವನು. ಬರ್ನಾಡ್ ಬೂಸಾಂಕೆ ಮತ್ತು ಎ. ಇ. ಟೇಲರ್ ಬ್ರಾಡ್ಲಿಯ ತತ್ತ್ವಸಿತ್ಧಾಂತದ ಪ್ರಭಾವವನ್ನು ಪಡೆದವರು.—ಬ್ರಾಡ್ಲಿಯ ತಾತ್ವಿಕಚಿಂತನೆಯು ನೈಜ ಹಾಗೂ ಸಾರ್ವತ್ರಿಕ ಮೌಲ್ಯಗಳನ್ನು ಹೊಂದಿರುವಂತದ್ದು.

ಬ್ರಾಡ್ಲಿಯ ತತ್ವಶಾಸ್ತ್ರದ ಮುಖ್ಯ ಉದ್ದೇಶ ವಿಶ್ವದ ಮೂಲ ತತ್ವವನ್ನು ಅರಿಯುವುದು. ವಿಶ್ವದ ಮೂಲ ತತ್ವವನ್ನು 'The Absolute', 'The Ultimate Reality' ಎಂದು ಕರೆದಿದ್ದಾನೆ ಬ್ರಾಡ್ಲಿ ಪ್ರಕಾರ ವಿಶ್ವದ ಮೂಲ ತತ್ವವು ಮಾತ್ರ 'ಸತ್ಯ' ವಿಶ್ವದಲ್ಲಿ ನಾವು ಕಾಣುವ ವಸ್ತು—ವ್ಯಕ್ತಿ—ವಿಷಯಗಳೆಲ್ಲವೂ 'ತೋರಿಕೆ' ಗಳು. ಈ ಸಿದ್ಧಾಂತದ ಸಮರ್ಥನೆಗೆ ಬ್ರಾಡ್ಲಿಯ ತತ್ವಶಾಸ್ತ್ರವೆಲ್ಲ ಮೀಸಲಾಗಿದೆ.-ನಮ್ಮ ತಾರ್ಕಿಕ ವಾಕ್ಯಗಳೆಲ್ಲವೂ ಒಂದು ಬಾಹ್ಯ—'ಅಸ್ತಿತ್ವ'ವನ್ನೂ ಕುರಿತದ್ದು. ನಮ್ಮ ವಾಕ್ಯದಲ್ಲಿ ನಾವು ಅದನ್ನು ಅರ್ಥೈಸುತ್ತೇವೆ. ಈ ರೀತಿ, ಅಸ್ತಿತ್ವ (Objective Existence) ಮತ್ತು ಅರ್ಥ (meaning) ಇವೆರಡರ ಜೋಡಣೆಯೇ ತಾರ್ಕಿಕ ವಾಕ್ಯ.

ಆದರೆ ಈ ಜೋಡಣೆಯಲ್ಲಿ ಒಂದು ಮುಖ್ಯಾಂಶವನ್ನು ಗಮನಿಸಬೇಕು. 'ಅಸ್ತಿತ್ವ'ವು (That) ನಮ್ಮ ಸೃಷ್ಟಿಯಲ್ಲ. ಆದರೆ ಅದರ ಅರ್ಥ (What) ನಮ್ಮ ತಾರ್ಕಿಕ ರಚನೆ: (Predication) ಸನ್ನಿವೇಶದಿಂದ ಸನ್ನಿವೇಶಕ್ಕೆ ಬದಲಾಯಿಸುತ್ತಾ ಹೋಗಬಹುದು. ಕೆಲವು ಸಲ ತಪ್ಪಾಗಿ, ಕೆಲವು ಸಲ ಸರಿಯಾಗಿರಬಹುದು. ಆದರೆ ಯಾವ ಮೂಲ ಅಸ್ತಿತ್ವದ 'ಅರ್ಥೈಸುವಿಕೆ' ಇವೆಲ್ಲವೂ ಆಗಿರುತ್ತದೋ, 'ಅದು' ಬದಲಾಗದೆ ಇರುತ್ತದೆ. ವಿಭಿನ್ನ ಹೇಳಿಕೆಗೆ ಸಾಮಾನ್ಯ ಆಧಾರವಾಗಿ (ground) ಉಳಿದಿರುತ್ತದೆ ಅದೇ ವಿಶ್ವದ ಮೂಲ ಸತ್ಯ :—ಈ ರೀತಿಯಾಗಿ ಪ್ರತಿ ತಾರ್ಕಿಕ ವಾಕ್ಯಕ್ಕೂ ಸ್ವತಂತ್ರ ಅಸ್ತಿತ್ವದ ಬುನಾದಿಯಾಗಿ, ಆದರೆ ಯಾವ ತಾರ್ಕಿಕವಾಕ್ಯದಲ್ಲೂ ಪೂರ್ಣವಾಗಿ ಪ್ರತಿನಿಧಿಸಲ್ಪಡದ ವಿಶ್ವದ ಮೂಲ ತತ್ವವನ್ನೂ ಅದರ ಸತ್ಯಸ್ವರೂಪದಲ್ಲಿ 'ಸ್ಥೂಲವಾಗಿ' ವಿವರಿಸುವ ಹಾಗೂ ಅನುಭವಾತ್ಮಕವಾಗಿ ಗ್ರಹಿಸುವ ಪ್ರಯತ್ನ ಬ್ರಾಡ್ಲಿಯ ದರ್ಶನದ ಉದ್ದೇಶ

ಅನೇಕ ವಸ್ತು, ವಿಷಯಗಳಿಂದ ಕೂಡಿರುವ ಈ ವಿಶ್ವವನ್ನೇ ಪರಮ ಸತ್ಯವನ್ನಾಗಿ ಏಕೆ ಪರಿಗಣಿಸಕೂಡದು? ಅದನ್ನು ಪರಮ ಸತ್ಯದ 'ತೋರಿಕೆ' ಎಂದು

ಏಕೆ ಪರಿಗಣಿಸಬೇಕು ? ಎಂಬುವ ಪ್ರಶ್ನೆಗಳನ್ನು ಬ್ರಾಡ್ಲಿ ಎದುರಿಸಬೇಕಾಗುತ್ತದೆ. ತನ್ನ ಗ್ರಂಥ 'Appearance and Reality' 'ತೋರಿಕೆ ಮತ್ತು ಸತ್ಯ'ದಲ್ಲಿ ಮೊದಲನೆ ಭಾಗವೆಲ್ಲವನ್ನೂ ಈ ಪ್ರಶ್ನೆಗೆ ಉತ್ತರವಾಗಿ ಬರೆದಿದ್ದಾನೆ ಪ್ರಪಂಚದ ನಾನಾವಸ್ತು—ವಿಷಯಗಳನ್ನು ವಿವಿಧತಾರ್ಕಿಕ 'ಪದಾರ್ಥ'ಗಳಾಗಿ Categories) ವಿಂಗಡಿಸಿ, ಪ್ರತಿಯೊಂದು 'ತೋರಿಕೆ' ಎಂದೂ, ಸತ್ಯವಲ್ಲವೆಂದೂ ಪ್ರತಿಪಾದಿಸಿದ್ದಾನೆ. ಆದರೆ 'ತೋರಿಕೆ' ಎನ್ನುವ ಪದಕ್ಕೆ ತನ್ನದೇ ಆದ ಅರ್ಥವನ್ನು ಕೊಡುತ್ತಾನೆ ಯಾವ ವಸ್ತು—ವಿಷಯವೇ ಆಗಲಿ, ಅದನ್ನು ಕುರಿತು ವಿವರಿಸುವಾಗ ನಮ್ಮ ತರ್ಕವು ಪರಸ್ಪರ ವಿರೋಧವಾದ ಹೇಳಿಕೆಗಳನ್ನು ಮಾಡುವಂತಾಗಿ ಗೊಂದಲದಲ್ಲಿ ಬಿದ್ದರೆ ಆ ವಸ್ತು ವಿಷಯವು 'ತೋರಿಕೆ'ಯೇ ಹೊರತು ಪೂರ್ಣವಾದ ಸತ್ಯವಲ್ಲ. 'ತೋರಿಕೆ' ಮತ್ತು 'ಸತ್ಯಕ್ಕೆ' ಇರುವ ವ್ಯತ್ಯಾಸವನ್ನು ತೋರಿಸಲು ಬ್ರಾಡ್ಲಿ ಉಪಯೋಗಿಸುವ ಅಳತೆ ಗೋಲು ಅಥವಾ ತಾರ್ಕಿಕ ನಿಯಮ (Criterion) ಇದು: ಅವಿರೋಧ (Non-contradiction) ಈ ನಿಯಮವನ್ನು ವಿಶ್ವದ ನಾನಾ ವಸ್ತು—ವಿಷಯಗಳಿಗೆ ಅನ್ವಯಿಸಿ ಅವೆಲ್ಲವೂ 'ತೋರಿಕೆ'ಗಳೆಂಬ ತೀರ್ಮಾನಕ್ಕೆ ಬರುತ್ತಾನೆ.

ಪ್ರಪಂಚದ ವಿಷಯಗಳೆಲ್ಲವನ್ನೂ (Categories) ಹೀಗೆ ಪರಿಶೀಲಿಸಿ ಅವೆಲ್ಲವೂ 'ತೋರಿಕೆ'ಯಾಗಿರುವುದರಿಂದ ಪ್ರಪಂಚವೆಲ್ಲವೂ ಒಟ್ಟಾರೆ 'ತೋರಿಕೆ' ಎಂಬ ನಿರ್ಣಯಕ್ಕೆ ಬ್ರಾಡ್ಲಿ ಬರುತ್ತಾನೆ.—ಆದರೆ 'ತೋರಿಕೆ' ಉಂಟಾಗಬೇಕಾದರೆ, ಅದರ ಆಧಾರವಾಗಿ 'ಸತ್ಯ' ಇರಲೇಬೇಕು, ಕಾರಣ 'ತೋರಿಕೆ' ಎಂದರೆ 'ಸತ್ಯವು' ತಾನು ಇರುವಂತಲ್ಲದೆ ಬೇರಾಗಿ ಕಾಣುವಿಕೆ. ಆದ್ದರಿಂದ 'ಸತ್ಯ' ಇಲ್ಲದೆ 'ತೋರಿಕೆ'ಯು ಸಾಧ್ಯವಿಲ್ಲ. ಅಂದರೆ ಸತ್ಯವೆಂದರೇನು ? ವಿಶ್ವದ ಸತ್ಯವು ಯಾವುದು, ಅದರ ಲಕ್ಷಣಗಳೇನು ? ಇತ್ಯಾದಿ ಪ್ರಶ್ನೆಗಳು ಉದ್ಭವಿಸುತ್ತವೆ. ಇದನ್ನು ಬ್ರಾಡ್ಲಿ ತನ್ನ ಗ್ರಂಥ 'ತೋರಿಕೆ ಮತ್ತು ಸತ್ಯ (Appearance and Reality)ಯ ಎರಡನೆ ಭಾಗದಲ್ಲಿ ಉತ್ತರಿಸಿದ್ದಾನೆ. ಇದನ್ನು ಈಗಾಗಲೇ ಮೇಲೆ ವಿವರಿಸಲಾಗಿದೆ.

ಬ್ರಾಡ್ಲಿಯು ಯಾವಾಗಲೂ ತನ್ನ ಹಿರಿಯರನ್ನು ಗೌರವಿಸುತ್ತಿದ್ದ. ಈ ಸಂದರ್ಭದಲ್ಲಿ ಹೆಗೆಲ್ ಮತ್ತು ಕ್ಯಾಂಟರನ್ನು ಹೆಸರಿಸಬಹುದು. ಬ್ರಾಡ್ಲಿ, ಹೆಗಲ್ ರಿಂದ ಅನೇಕ ತಾತ್ವಿಕ ಸಿದ್ಧಾಂತಗಳನ್ನು ಪಡೆದುಕೊಂಡಿದ್ದಾನೆ. ಆದರೆ ಬ್ರಾಡ್ಲಿ ಹೆಗೆಲವಾದಿಯಲ್ಲಿ ಬ್ರಾಡ್ಲಿಯವಾದವು ತಾರ್ಕಿಕವಾದುದು ಹಾಗೂ ಸಂದೇಹಾತ್ಮಕ ವಾದುದು. ಆದರೆ ಹೆಗಲನ ಪ್ರಕಾರ ಸತ್ಯವು ವಿಚಾರಾತ್ಮಕವಾದುದು.—ಬ್ರಾಡ್ಲಿ ಒಬ್ಬ ಮಹಾನ್ ತಾತ್ವಿಕ ಚಿಂತಕ ಈತನು ಹೆಗಲ್, ಟಿ. ಎಚ್. ಗ್ರೀನ್ ಹಾಗೂ ಕೇರ್ಡ್ ತಾತ್ತ್ವಿಕರಿಗೆ ಕೃತಜ್ಞನಾಗಿದ್ದಾನೆ. ಇವರ ಪ್ರಮುಖ ಸಿದ್ಧಾಂತ ಸ್ವಂಅರಿವಿನ ಜ್ಞಾನ ಹಾಗೂ ಕರ್ತವ್ಯ ನಿಷ್ಠೆಯೇ ತಮ್ಮ ತತ್ತ್ವವಿಚಾರದ ಕೇಂದ್ರ ಬಿಂದು. ಇವು ಸತ್ಯ ಹಾಗೂ ಒಳಿತುಗಳ ಸ್ವರೂಪವಾಗಿದೆ. ಮಾನವ ವಿಚಾರವಂತ, ಆತನು ಸಮಾಜದ ಸಮಗ್ರ ಪರಿಪೂರ್ಣ ಬೆಳೆವಣಿಗೆಗಾಗಿ ತನ್ನ ಸ್ವಾರ್ಥ -ಆಸೆ- ಆಕಾಂಕ್ಷೆಗಳನ್ನು ತ್ಯಾಗ

ಮಾಡಬೇಕು. ಉಪಯುಕ್ತತಾವಾದ (Utilitarianism) ಕ್ಯಾಂಟನ abstract universalಗಳನ್ನು ಖಂಡಿಸುತ್ತದೆ. ಇದರ ಪ್ರಮುಖ ಉದ್ದೇಶವೆಂದರೆ ಅಂಶಃ ಸತ್ಯವನ್ನು ಸಂಶ್ಲೇಷಿಕರಿಸಿಕೊಳ್ಳುವುದು. ಅಂಶಃ ಸತ್ಯವು ಪರಮಶ್ರೇಷ್ಠವಾದುದು. ಇದು ಪರಿಪೂರ್ಣವಾದುದು. ಸಾರ್ವತ್ರಿಕವಾದುದು. ಇದು ನೈತಿಕತೆಗಿಂತಲೂ ಮಿಗಿಲಾದುದು.

ಬ್ರಾಡ್ಲಿ ಈ ರೀತಿ ಹೇಳುತ್ತಾನೆ ಎಲ್ಲ ಚಿಂತನೆ ಹಾಗೂ ವಿಚಾರಗಳೆಲ್ಲವೂ ಈ ಕೆಳಗಿನ ಸಂಬಂಧಗಳಲ್ಲಿ ಹಾದು ಹೋಗುತ್ತವೆ. ವಸ್ತು – ವ್ಯಕ್ತಿ – ಸಂಬಂಧ, ಕಾರ್ಯ ಕಾರಣ ಸಂಬಂಧ, ವ್ಯಕ್ತಿ ಹಾಗೂ ಕ್ರಿಯೆ ಇತ್ಯಾದಿ ಸಂಬಂಧಗಳನ್ನು ಮೀರಿರುವಂತಹುದು ಪರಮಸತ್ಯ ಇದು ಪರಮ ಅನುಭವವಾದುದು. ಪರಮ ಸತ್ಯವು, ಸತ್ಯ ಶಿವ, ಸೌಂದರ್ಯ ಮೌಲ್ಯಗಳೆಲ್ಲವನ್ನೂ ಒಳಗೊಂಡಿರುವಂತಹದು.

ಬ್ರಾಡ್ಲಿಯು ಧರ್ಮದಲ್ಲಿ ದೇವರು ಹಾಗೂ ಅಧ್ಯಾತ್ಮಶಾಸ್ತ್ರದಲ್ಲಿ ಪರಮಸತ್ಯಗಳ ನಡುವೆ ವ್ಯತ್ಯಾಸವನ್ನು ಕಾಣುತ್ತಾನೆ. ಬ್ರಾಡ್ಲಿ ಹಾಗೂ ಟೇಲರ್ ಪ್ರಕಾರ 'ಅನುಭವಾತ್ಮಕವಾದುದೇ ಸತ್ಯ'. ಬ್ರಾಡ್ಲಿ ಪ್ರಕಾರ ನಮ್ಮ ಅನುಭವವು ಜಗತ್ತಿನ ಸರ್ವಸ್ವವನ್ನೂ ಹೊಂದಿಲ್ಲ, ಆದರೆ ನಮ್ಮ ಅನುಭವದಲ್ಲಿ ಜಗತ್ತೆಲ್ಲವೂ ತೋರಿಕೆಯಾಗಿ ಕಾಣುತ್ತದೆ ".—ಸತ್ಯವು ಭಿನ್ನತೆಯನ್ನು ಸಾಮರಸ್ಯಗೊಳಿಸುವಂತಹದ್ದು—ಬ್ರಾಡ್ಲಿ ಒಬ್ಬ ವಿಮರ್ಶಾತ್ಮಕವಾದಿ, ಈತನು ನಿಗೂಢ ವಿಚಾರಗಳ ವಿರೋಧಿ. ವಿಗ್ರಹಾರಾಧನೆಯನ್ನು ಒಪ್ಪಿಕೊಳ್ಳುವುದಿಲ್ಲ. ಈತನ ನೀತಿಶಾಸ್ತ್ರ ಹಾಗೂ ತರ್ಕಶಾಸ್ತ್ರದಲ್ಲಿ ಅಮೂರ್ತ ವಿಚಾರ (Abstract)ಗಳನ್ನು ಖಂಡಿಸುತ್ತಾನೆ. ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳು ಸತ್ಯವಲ್ಲ. ಆದರೆ ಅವುಗಳು ಸತ್ಯದ ರೀತಿ ತೋರಿಕೆಯಾಗುತ್ತದೆ. ಪರಮಸತ್ಯಕ್ಕೆ ಯಾವುದು ಅಸ್ತಿಯಲ್ಲ. ಆದರೆ ತೋರಿಕೆಗಳೇ ಪರಮಸತ್ಯಕ್ಕೆ ಅಸ್ತಿ ಇದ್ದಂತಿದೆ.

ಸಂಪಾದಕೀಯ

ಮಾನವಿಕ ಕರ್ಣಾಟಕವನ್ನು ನೋಡಿಕೊಳ್ಳಲು ವಿಶ್ವವಿದ್ಯಾನಿಲಯವು ನನ್ನ ಅಧ್ಯಕ್ಷತೆಯಲ್ಲಿ ಕೆಳಗಿನ ಸದಸ್ಯರನ್ನೊಳಗೊಂಡಂತೆ: ಡಾ. ರಾಜಶೇಖರ, ರಾಜ್ಯಶಾಸ್ತ್ರ; ಡಾ. ಓ. ಅನಂತರಾಮಯ್ಯ, ಇತಿಹಾಸ; ಡಾ. ಅಂಬಳಿಕೆ ಹಿರಿಯಣ್ಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ; ಡಾ. ಸೋಮಶೇಖರಗೌಡ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಶ್ರೀ ಕೃಷ್ಣೇಗೌಡ, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ—ಒಂದು ಸಮಿತಿಯನ್ನು ರಚಿಸಿ ೨೪-೮-೯೫ ರಂದು ಪ್ರಕಟಣೆಯನ್ನು ಹೊರಡಿಸಿತು. ದಿನಾಂಕ ೬-೧೦-೯೫ ರಂದು ನಾನು ಮತ್ತು ಸಮಿತಿಯ ಸದಸ್ಯರು ನನ್ನ ಕೋಣೆಯಲ್ಲಿ ಒಂದು ಸಭೆ ಸೇರಿಸಿ ಮಾನವಿಕ ಹಿಂದಿನ ಅಧ್ಯಕ್ಷರಿಂದ ಸಂಬಂಧಿಸಿದ ಕಡತಗಳನ್ನು ತರಿಸಿಕೊಳ್ಳುವುದನ್ನು ನಿರ್ಧರಿಸಿ ವಿಶ್ವವಿದ್ಯಾನಿಲಯಕ್ಕೆ ಪತ್ರ ಕಳುಹಿಸಲಾಯಿತು. ಅದರ ಪ್ರತಿಗಳನ್ನು ನಿರ್ದೇಶಕರು, ಪ್ರಸಾರಾಂಗ ಹಾಗೂ ಹಿಂದಿನ ಅಧ್ಯಕ್ಷರು 'ಮಾನವಿಕ ಕರ್ಣಾಟಕ' ಅವರಿಗೂ ಕಳುಹಿಸಿಕೊಡಲಾಯಿತು. ದಿನಾಂಕ ೧-೧-೯೬ ರಂದು ನಿರ್ದೇಶಕರು, ಪ್ರಸಾರಾಂಗ ಅವರ ಕೊಠಡಿಯಲ್ಲಿ ನಡೆದ ಸಭೆಯಲ್ಲಿ ಈ ವಿಷಯವನ್ನು ಪುನಃ ಪ್ರಸ್ತಾಪಿಸಲಾಯಿತು.

ಹಿಂದಿನ ಕಡತಗಳು, ಲೇಖನಗಳು ನಮಗಿನ್ನೂ ಪೂರ್ತಿಯಾಗಿ ದೊರೆತಿರದಿದ್ದರೂ ನಾವು ಕಾರ್ಯವನ್ನು ಪ್ರಾರಂಭಿಸಿ ಲೇಖನಗಳನ್ನು ಸಂಗ್ರಹಿಸಿ ಓದುಗರಿಗೆ ಸಂಪುಟ ೨೨, ಸಂಚಿಕೆ ೧ನ್ನು ಸಂತೋಷದಿಂದ ನೀಡುತ್ತಿದ್ದೇವೆ.

ಡಾ. ಕುಂದರಗಿಯವರು 'ಬೇಂದ್ರೆಯವರ ಕಾವ್ಯದಲ್ಲಿ ತತ್ತ್ವಜ್ಞಾನ' ಎಂಬ ಲೇಖನದಲ್ಲಿ ಸಾಹಿತ್ಯದಲ್ಲಿ ತಾತ್ವಿಕ ಅಂಶಗಳನ್ನು ಕಂಡುಹಿಡಿಯುವ ಹೊಸ ಮಾದರಿಯನ್ನು ಕೊಟ್ಟಿದ್ದಾರೆ. ಪ್ರಾಚೀನ ಕರ್ನಾಟಕದಲ್ಲಿ ಅರಸು ಮನೆತನಗಳಲ್ಲಿ ಯುವರಾಜರ ಪಾತ್ರವನ್ನು ಕುರಿತ ಒಂದು ಶಾಸನಾಧಾರಿತ ಲೇಖನವಿದೆ. ಜಿಲ್ಲೆಯ ಗೊಂಡ ಜಾತಿ ಪ್ರಮಾಣ ಪತ್ರದ ಸಮಸ್ಯೆಯ ಮೇಲೆ ಬೆಳಕು ಚೆಲ್ಲುವ ಶಾಸ್ತ್ರೀಯ ಲೇಖನವನ್ನು ಓದುಗರು ಇಲ್ಲಿ ನೋಡಬಹುದು. ರಾಮಶೇಷರು ದಾನದ ಮಹಿಮೆಯನ್ನು ಕೊಂಡಾಡಿ ಒಂದು ಲೇಖನವಿತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುವ 'ಕೇಪು ಕಜಂಬು' ಉತ್ಸವದ ವಿವರಗಳು ಮತ್ತೊಂದು ಲೇಖನದಲ್ಲಿವೆ. ಡಾ. ರಾಮಚಂದ್ರರು ಎಫ್. ಎಚ್. ಬ್ರಾಡಯ ಪರಮಸತ್ಯವನ್ನು ಕುರಿತು ವಿಚಾರಪೂರ್ಣವಾದ ಲೇಖನವನ್ನು ಕೊಟ್ಟಿದ್ದಾರೆ. ಇವರೆಲ್ಲರಿಗೂ ನಮ್ಮ ಹಾರ್ದಿಕ ಕೃತಜ್ಞತೆಗಳು.

ಹಿಂದಿನ ಅಧ್ಯಕ್ಷರಿಂದ ಅಚ್ಚಾಗದ ಲೇಖನಗಳು ದೊರೆತ ಹಾಗೆ ಅವುಗಳನ್ನು ಮುಂದಿನ ಸಂಚಿಕೆಗಳಲ್ಲಿ ಬಳಸಿಕೊಳ್ಳಲಾಗುವುದು.

ಈ ಸಂಚಿಕೆಯ ಕರಡು ಪ್ರತಿಗಳನ್ನು ತಿದ್ದುವ ಸಂಚಿಕೆ ಮುದ್ರಣಾಲಯದಿಂದ ಹೊರಬರುವವರೆಗೆ ಹೊಣೆಯನ್ನು ವಹಿಸಿಕೊಂಡಿರುವ ನನ್ನ ಸ್ನೇಹಿತರಾದ ಡಾ. ಅಂಬಳಿಕೆ ಹಿರಿಯಣ್ಣ ಹಾಗೂ ಡಾ. ಸೋಮಶೇಖರಗೌಡ ಇವರುಗಳಿಗೆ ನನ್ನ ಪ್ರೀತಿಯ ಧನ್ಯವಾದಗಳು.

ಮಾನವಿಕ ಕರ್ಣಾಟಕದೊಂದಿಗೆ ಸಹಕರಿಸಿದ ಸಂಯೋಜಕರೂ ಪ್ರಸಾರಾಂಗದ ನಿರ್ದೇಶಕರು ಆದ ಡಾ. ಅರವಿಂದ ಮಾಲಗತ್ತಿಯವರಿಗೂ ಮುದ್ರಣಾಲಯದ ನಿರ್ದೇಶಕರಾದ ಡಾ. ರಂಗಸ್ವಾಮಿಯವರಿಗೂ ಮತ್ತು ಡಾ. ಕಾಳೇನೂರ ಅವರಿಗೂ ನನ್ನ ವಂದನೆಗಳು.

ಮೈಸೂರು
೧೯-೧-೧೯೯೬
೩೧-೭-೧೯೯೬

ಡಾ. ಜಿ. ಎನ್. ಕೆಂದರಗಿ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ತತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ
ಹಾಗೂ ಅಧ್ಯಕ್ಷರು, ಮಾನವಿಕ ಕರ್ಣಾಟಕ

ಕೆ ಸಂ. ೪೦೫೩ — ಎಂಯುಪಿಎಂ — ೪೦೦ + ೨೫ ಪ್ರತಿಗಳು ೩-೯-೯೬

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಹತ್ತು ರೂಪಾಯಿ
ಇತರರಿಗೆ	....	ಹದಿನೈದು ರೂಪಾಯಿ
ಸಂಸ್ಥೆಗಳಿಗೆ	....	ಇಪ್ಪತ್ತೈದು ರೂಪಾಯಿ

(ಆಜೀವ ಸದಸ್ಯತ್ವ: ಒಂದು ನೂರು ಐವತ್ತು ರೂಪಾಯಿ)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬